Editor: NITYANANDASWAMI Publisher: U. BASAVARAJA
RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

JANASHAKTHI KANNADA VARA PATRIKE

ಸಂಪುಟ–17 ಸಂಚಿಕೆ–32 ಆಗಸ್ಟ್ 7–13, 2023 ಪುಟ 16 ರೂ. 10/–
Volume-17 Issue-32 August 7-13, 2023 Pages:16 Price: 10/-




ಮೈ ಬಣ್ಣ ಅವಹೇಳನ ; ಮನುವಾದಿ ರೋಗಗ್ರಸ್ತ ಮನಸ್ಥಿತಿ

ಎಸ್‌ಸಿಪಿ ಮತ್ತು ಟಿಎಸ್‌ಪಿ ಹಣ ವರ್ಗಾವಣೆ: ದಲಿತ–ಆದಿವಾಸಿಗಳಿಗೆ ವಂಚನೆ

ಜ್ಞಾನ ವ್ಯಾಪಿ ಮಸೀದಿ ಮುಂದಿನ ಟಾರ್ಗೆಂಟ್

ಏಂಗೆಲ್ಸ್ ಅವರ ಬರಹಗಳಲ್ಲಿ ಭಾರತ



ಆಗಸ್ಟ್ 5 ಫ್ರೆಡ್ರಿಕ್ ಏಂಗಲ್ಸ್ ಅವರ ಸ್ಮರಣಾರ್ಥ ದಿನ. ಭಾರತದ ಕುರಿತಾದ ಎಂಗಲ್ಸ್ ಅವರ ಬರಹಗಳು ಅವರ ಆಳವಾದ ಮಾರ್ಕ್ಸ್‌ವಾದಿ ಅಧ್ಯಯನಗಳಿಗೆ ಉದಾಹರಣೆಯಾಗಿದೆ. ಅವರ ಬರಹಗಳು ಭಾರತದ ಇತಿಹಾಸ ಮತ್ತು ಬ್ರಿಟೀಷರು ಭಾರತವನ್ನು ಹೇಗೆ ಶೋಷಿಸಿದರು ಎಂಬುದರ ಕುರಿತು ಮಹತ್ವದ್ದಾಗಿದೆ. ಭಾರತದ 77 ನೇ ಸ್ವಾತಂತ್ರ್ಯ ದಿನಾಚರಣೆ ಸಂದರ್ಭದಲ್ಲಿ ಭಾರತದ ಕುರಿತಾದ ಏಂಗಲ್ಸ್ ಅವರ ಬರಹಗಳ ಬರಹಗಳನ್ನು ನೆನಪಿಸಿಕೊಳ್ಳುವ ಪ್ರಯತ್ನದ ಭಾಗವಾಗಿ ಈ ಲೇಖನ.



ಮಹಾನ್ ಚಿಂತಕ, ತತ್ವಜ್ಞಾನಿ ಫೆಡ್ರಿಕ್ ಏಂಗೆಲ್ಸ್ ರವರು ಭಾರತದ ಕುರಿತು ಬರೆದ ಬರಹಗಳು ಅತ್ಯಂತ ಮಹತ್ವದ್ದಾಗಿವೆ.

ಬ್ರಿಟಿಷರು ಕೈಬಿಟ್ಟ ನೀರಾವರಿ

ಏಷ್ಯನ್ ಸಮಾಜಗಳಲ್ಲಿ ರಾಜ್ಯವು (State) ಹೇಗೆ ಅಭಿವೃದ್ಧಿಗೊಂಡಿದೆ ಎಂಬುದನ್ನು ಅಧ್ಯಯನ ಮಾಡಲು ಏಂಗೆಲ್ಸ್ ಆಸಕ್ತಿ ಹೊಂದಿದ್ದರು. 1853 ರ ಜೂನ್ 3 ರಂದು ಕಾರ್ಲ್ ಮಾರ್ಕ್ಸ್ ಅವರಿಗೆ ಬರೆದ ಪತ್ರದಲ್ಲಿ ಎಂಗೆಲ್ಸ್ ಅವರು, ತಾನು ಪರ್ಷಿಯನ್ ಭಾಷೆಯನ್ನು ಕಲಿತು, ಕವಿ ಹಫೀಝ್ ಅವರ ಕವನವನ್ನು ಆಸ್ವಾದಿಸಿರುವುದಾಗಿ ಉಲ್ಲೇಖಿಸಿದ್ದಾರೆ. 15 ನೇ ಶತಮಾನದ ಮೀರ್ ಗೊಂಡ್ ಅವರ ವಿಶ್ವ ಇತಿಹಾಸದ ಅಧ್ಯಯನದ ಬಗ್ಗೆಯೂ ಹೇಳುತ್ತಾರೆ. ಈ ಪತ್ರದಲ್ಲಿ ಏಂಗೆಲ್ಸ್ ಅವರು ಸಹಾರಾದಿಂದ ಅರೇಬಿಯಾ–ಪರ್ಷಿಯಾ–ವಾಯುವ್ಯ ಭಾರತ–ಟರ್ಕಿಸ್ತಾನ್–ಮಂಗೋಲಿಯಾಗಳವರೆಗೆ ಮರುಭೂಮಿಯ ನಿರಂತರತೆ ಇದೆ ಮತ್ತು ಈ ಪ್ರದೇಶದಲ್ಲಿ ಕೃಷಿಗೆ ಮೊದಲ ಪ್ರಮುಖ ಅಗತ್ಯವೆಂದರೆ "ಮಾನವ ನಿರ್ಮಿತ ನೀರಾವರಿ". ಈ ಪ್ರದೇಶಗಳನ್ನು ಆಳುವ ಸರ್ಕಾರಗಳು ಹಣಕಾಸು / ಯುದ್ಧದ ಕ್ಷೇತ್ರಗಳೊಂದಿಗೆ ನೀರಾವರಿಗಾಗಿ ಲೋಕೋಪಯೋಗಿ ಇಲಾಖೆಯನ್ನು ರಚಿಸಬೇಕಾಗಿತ್ತು ಎಂದು ಅವರು ಉಲ್ಲೇಖಿಸುತ್ತಾರೆ. ಆದರೆ ಬ್ರಿಟಿಷ್ ಸರ್ಕಾರವು ಈ ಮಹತ್ವದ ಕೆಲಸವನ್ನು ನಿರ್ಲಕ್ಷಿಸಿದೆ ಮತ್ತು ಆದ್ದರಿಂದ ಭಾರತೀಯ ಕೃಷಿಯು ಅವನತಿ ಹೊಂದಿತು ಎಂದು ಏಂಗೆಲ್ಸ್ ಭವಿಷ್ಯಜ್ಞಾನದೊಂದಿಗೆ ಗಮನಿಸಿದರು.

ಮಾರ್ಕ್ಸ್ ಅವರು 10.06.1853 ರ ನ್ಯೂಯಾರ್ಕ್ ಡೈಲಿ ಟ್ರಿಬ್ಯೂನ್‌ಗೆ ಬರೆದ "ಭಾರತದಲ್ಲಿ ಬ್ರಿಟಿಷ್ ಆಳ್ವಿಕೆ" ಎಂಬ ಲೇಖನದಲ್ಲಿ, ಏಂಗೆಲ್ಸ್ ಅವರ ಈ ಪ್ರಮುಖ ಪರಿಕಲ್ಪನೆಯನ್ನು ಬಳಸಿದರು ಮಾತ್ರವಲ್ಲದೆ ಪರಿಕಲ್ಪನೆಯನ್ನು ಮತ್ತಷ್ಟು ವಿಸ್ತರಿಸಿದರು. 25 ವರ್ಷಗಳ ನಂತರ ಏಂಗೆಲ್ಸ್ ಸ್ವತಃ ಈ ಸಮಸ್ಯೆಯ ಬಗ್ಗೆ ಬರೆದಿದ್ದಾರೆ: “ಪರ್ಷಿಯಾ ಮತ್ತು ಭಾರತದಲ್ಲಿ ಎಷ್ಟು ನಿರಂಕುಶ ದೊರೆಗಳು ಆಳಿದರು ಮತ್ತು ಪತನಗೊಂಡಿದ್ದರೂ, ಅಂತಹ ಪ್ರತಿಯೊಂದು ಆಡಳಿತವು ಒಂದು ಪ್ರಮುಖ ಅಗತ್ಯವನ್ನು ಅರಿತುಕೊಂಡಿದ್ದರು. ಕಣಿವೆಗಳಾದ್ಯಂತ ನೀರಾವರಿಯನ್ನು ಸೃಷ್ಟಿಸುವುದು ಅವರ ಮೊದಲ ಕರ್ತವ್ಯವಾಗಿತ್ತು; ಅದಿಲ್ಲದೇ ಕೃಷಿ ಸಾಧ್ಯವಿಲ್ಲ ಎಂಬುದನ್ನು ಅರಿತುಕೊಂಡಿದ್ದರು. ತಮ್ಮನ್ನು ತಾವು ಬಹಳ ಬುದ್ಧಿವಂತರೆಂದು ಭಾವಿಸಿದ ಬ್ರಿಟಿಷ್ ಆಡಳಿತಗಾರರು ಈ ಮಹತ್ವದ ಕರ್ತವ್ಯವನ್ನು ಮರೆತಿದ್ದಾರೆ.

ಭಾರತದಲ್ಲಿನ ಗ್ರಾಮೀಣ ಸಮುದಾಯಗಳು

1878 ರಲ್ಲಿ ಏಂಗೆಲ್ಸ್ ತಮ್ಮ ಗಮನವನ್ನು "ಗ್ರಾಮ ಸಮಾಜಗಳ" ಸಂಘಟನೆಯತ್ತ ತಿರುಗಿಸಿದನು. ಇದರಲ್ಲಿ ತನ್ನ (ಮಾರ್ಕ್ಸ್ ಸೇರಿದಂತೆ) ಗ್ರಾಮ ಸಮುದಾಯಗಳ ಕುರಿತು ಒಂದು ಅಂತಿಮ ಮೌಲ್ಯವನ್ನು ರಚಿಸಲಾಗಿದೆ. ಕೃಷಿ ಆಧಾರಿತ ಗ್ರಾಮ ಸಮಾಜವು "ಸಾರ್ವಜನಿಕ ಶ್ರಮ" ಮತ್ತು "ಸಾರ್ವಜನಿಕ ಭೂ ಒಡೆತನ” ದ ಆಧಾರದ ಮೇಲೆ ಅಸ್ತಿತ್ವದಲ್ಲಿದೆ ಮತ್ತು ಆಧುನಿಕ ಕಾಲದವರೆಗೆ ಈ ಗ್ರಾಮ ಸಮಾಜದ ಸಂಸ್ಥೆಯ ಜೊತೆಗೆ ರಾಜ್ಯವು ಅಸ್ತಿತ್ವದಲ್ಲಿತ್ತು ಎಂದು ಏಂಗೆಲ್ಸ್ ಪ್ರತಿಪಾದಿಸುತ್ತಾರೆ. ಭಾರತದಲ್ಲಿಯೂ ಇಂತಹ ವ್ಯವಸ್ಥೆ ಇತ್ತು ಎಂದು ಏಂಗೆಲ್ಸ್ ಅಂದಾಜಿಸಿದ್ದಾರೆ. ಇತರ ಸಾಮಾಜಿಕ ವ್ಯವಸ್ಥೆಗಳ ಸಂಪರ್ಕದಿಂದ "ಗ್ರಾಮ ಸಮಾಜಗಳು" ಶಿಥಿಲಗೊಂಡಿವೆ ಮತ್ತು ವಿಘಟನೆಯು "ಆಸ್ತಿ ಮಾಲೀಕತ್ವದಲ್ಲಿ ಅಸಮಾನತೆಗೆ" ಕಾರಣವಾಯಿತು ಎಂದೂ ಅವರು ಹೇಳುತ್ತಾರೆ. ಆದರೆ ಸಾವಿರಾರು ವರ್ಷಗಳ ರಾಜಪ್ರಭುತ್ವ ಮತ್ತು ವಿದೇಶಿ ಆಕ್ರಮಣಗಳು ಭಾರತದಲ್ಲಿ "ಗ್ರಾಮ ಸಮುದಾಯಗಳ" ರಚನೆಯನ್ನು ನಾಶಮಾಡಲು ಸಾಧ್ಯವಾಗಲಿಲ್ಲ ಎಂದು ಅವರು ಹೇಳುತ್ತಾರೆ. ಅಂತಹ "ಗ್ರಾಮ ಸಮುದಾಯಗಳು" ತಮ್ಮದೇ ಆದ ಅಧಿಕಾರಿಗಳನ್ನು ಸೃಷ್ಟಿಸಿದವು, ಅವರು ನಂತರ ಭಾರತದಲ್ಲಿ ಅತ್ಯಂತ ಸುಲಭವಾಗಿ ಆಳುವ ವರ್ಗಗಳಾಗಿ ಮಾರ್ಪಟ್ಟರು ಎಂದು ಎಂಗಲ್ಸ್ ಕೂಡ ಒಂದು ಪ್ರಮುಖ ಮೌಲ್ಯಮಾಪನವನ್ನು ಮಾಡುತ್ತಾರೆ. ಏಂಗೆಲ್ಸ್ ಹೇಳಿದಾಗ ಇದು ಒಂದು ದೊಡ್ಡ "ಊಹೆ" ಎಂದು ಗಮನಾರ್ಹವಾಗಿದೆ, ಆದರೆ ಇದು 1956 ರಲ್ಲಿ ಕೊಸಾಂಬಿಯವರ ಪ್ರಮುಖ ಅಧ್ಯಯನವಾದ "ಫ್ಯೂಡಲಿಸಮ್ ಫ್ರಮ್ ಬಿಲೋ" ಗೆ ಹೊಂದಿಕೆಯಾಗುತ್ತದೆ. ಏಂಗೆಲ್ಸ್ ಇದು ಒಂದು ದೊಡ್ಡ "ಊಹೆ" ಎಂದು ಹೇಳಿದರು ಆದರೆ ನಂತರ ಇದು ಕೊಸಾಂಬಿಯವರ 1956 ರ ಅತ್ಯಂತ ಪ್ರಮುಖ ಅಧ್ಯಯನವಾದ “ಫ್ಯೂಡಲಿಸಂ ಫ್ರಮ್ ಬಿಲೋ” ಕ್ಕೆ ಹೊಂದಿಕೆಯಾಗಿರುವುದು ಗಮನಾರ್ಹವಾಗಿದೆ.

ಭಾರತದಲ್ಲಿನ ಆಡಳಿತ ಸಂಸ್ಥೆಗಳ ಬಗ್ಗೆ ಏಂಗೆಲ್ಸ್ ಅವರ ಅಧ್ಯಯನಕ್ಕೆ ಹಿಂತಿರುಗೋಣ. ವಸಾಹತುಪೂರ್ವ ಭಾರತದಲ್ಲಿ ಹೆಚ್ಚು ನಗರೀಕರಣ ಇತ್ತು ಎಂದು ಏಂಗೆಲ್ಸ್ ಪರಿಗಣಿಸಿರುವುದು ಗಮನಾರ್ಹವಾಗಿದೆ. 14 ಮತ್ತು 15 ನೇ ಶತಮಾನದಲ್ಲಿ ಅಫ್ಘಾನ್ ಮತ್ತು ಮೊಘಲ್ ಆಡಳಿತಗಾರರು ಆಗ್ರಾ / ದೆಹಲಿ / ಲಾಹೋರ್ ಮುಂತಾದ ನಗರಗಳನ್ನು ನಿರ್ಮಿಸಿದರು ಎಂದು ಮೆಚ್ಚುಗೆ ವ್ಯಕ್ತಪಡಿಸುತ್ತಾರೆ. ಆದ್ದರಿಂದ ಕೆಲವು ಪಾಶ್ಚಾತ್ಯ ಸಂಶೋಧಕರು ಹೇಳುವಂತೆ ಏಷಿಯನ್ ಸಮಾಜಗಳನ್ನು ಹಿಂದುಳಿದ ಮತ್ತು ಅನಾಗರಿಕ ಎಂದು ಏಂಗೆಲ್ಸ್ ನಿರ್ಣಯಿಸಲಿಲ್ಲ ಎಂಬುದು ಗಮನಿಸಬೇಕಾದ ಸಂಗತಿ.

ಬ್ರಿಟಿಷ್ ಆಳ್ವಿಕೆಯಿಂದ ಭಾರತದ ಲೂಟಿ

ಮಾರ್ಕ್ಸ್‌ನಂತೆಯೇ ಎಂಗೆಲ್ಸ್ ಕೂಡ, ಭಾರತದಲ್ಲಿ ವಿನಾಶವನ್ನು ಸೃಷ್ಟಿಸುವುದರಲ್ಲಿ ಬ್ರಿಟಿಷ್ ಆಳ್ವಿಕೆಯು ಯಾವ ರೀತಿಯಲ್ಲಿ ನಡೆದುಕೊಂಡಿದೆ ಎಂಬುದರ ಬಗ್ಗೆ ಸ್ಪಷ್ಟವಾಗಿ ತಿಳಿದಿದ್ದರು. 1890 ಸಿ. ಸ್ಮಿತ್ ಎಂಬುವವರಿಗೆ ಬರೆದ ಪತ್ರದಲ್ಲಿ ಅವರು, ಭಾರತವನ್ನು ವಶಪಡಿಸಿಕೊಂಡಾಗ ಬ್ರಿಟಿಷ್ ವಸಾಹತುಶಾಹಿ ಆಳ್ವಿಕೆಯ ಆರಂಭಿಕ ಉದ್ದೇಶದ ಬಗ್ಗೆ ಅವರು ಈ ಕೆಳಗಿನ ಪ್ರಮುಖ ಅಂಶವನ್ನು ಮಾಡುತ್ತಾರೆ: “ಪೋರ್ಚುಗೀಸ್ / ಡಚ್ / ಬ್ರಿಟೀಷರು 1500 ರಿಂದ 1800 ರವರೆಗೆ ಭಾರತವನ್ನು ವಶಪಡಿಸಿಕೊಂಡಾಗ, ಭಾರತದಿಂದ ತಮ್ಮ ದೇಶಗಳಿಗೆ ಆಮದು ಮಾಡಿಕೊಳ್ಳುವ ಉದ್ದೇಶವನ್ನು ಅವರು ಹೊಂದಿದ್ದರು. ಯಾರೂ ಸಹಾ ತಮ್ಮ ದೇಶಗಳಿಂದ ಭಾರತಕ್ಕೆ ರಫ್ತು ಮಾಡುವ ಯೋಚನೆ ಹೊಂದಿರಲಿಲ್ಲ. ಆದಾಗ್ಯೂ, ಭಾರತದ ಅನೇಕ ಭಾಗಗಳ ಆವಿಷ್ಕಾರ ಮತ್ತು ಅವುಗಳನ್ನು ವಶಪಡಿಸಿಕೊಂಡ ನಂತರ, ಸಂಪೂರ್ಣವಾಗಿ ವಾಣಿಜ್ಯ ಉದ್ದೇಶಗಳಿಗಾಗಿ, ಅವರು ಕೈಗಾರಿಕೆಗಳ ಮೇಲೆ ಭಾರಿ ಪರಿಣಾಮಗಳನ್ನು ಸೃಷ್ಟಿಸಿದರು. ಭಾರತದಂತಹ ದೇಶಗಳಿಗೆ ರಫ್ತು ಮಾಡುವುದರಿಂದ ಬ್ರಿಟನ್ ನ ಆಧುನಿಕ ದೊಡ್ಡ ಕೈಗಾರಿಕೆಗಳ ಬೆಳವಣಿಗೆಗೆ ಕಾರಣವಾಯಿತು.

ಏಂಗೆಲ್ಸ್ ಈ ವಿಚಾರವನ್ನು ಮುದ್ರಣಕ್ಕೆ ಹಾಕಲಿಲ್ಲ. ಬದಲಾಗಿ ತನ್ನ ಸಂಗಾತಿಗೆ ತರಾತುರಿಯಲ್ಲಿ ಪತ್ರ ಬರೆಯುತ್ತಾನೆ. ಆದಾಗ್ಯೂ ಅವರ ಈ ಅಭಿಪ್ರಾಯ ಬಹಳ ಮುಖ್ಯ, ಶ್ರೀಮಂತ ಮೌಲ್ಯಮಾಪನ! ಭಾರತವನ್ನು ವಸಾಹತುವನ್ನಾಗಿ ಮಾಡಿಕೊಳ್ಳಲು ಮುಖ್ಯ ಕಾರಣವೆಂದರೆ ಇಲ್ಲಿಂದ ಸರಕುಗಳನ್ನು ತಮ್ಮ ದೇಶಗಳಿಗೆ ಆಮದು ಮಾಡಿಕೊಳ್ಳುವುದು! ತಮ್ಮ ದೇಶಗಳಿಂದ ಭಾರತಕ್ಕೆ ರಫ್ತು ಮಾಡಲು ಅಲ್ಲ! ಆದಾಗ್ಯೂ, ಭಾರತದ ಅನೇಕ ಭಾಗಗಳ ಆವಿಷ್ಕಾರ ಮತ್ತು ಅವುಗಳನ್ನು ವಶಪಡಿಸಿಕೊಂಡ ನಂತರ ಪರಿಣಾಮಗಳ ಸರಣಿಯನ್ನು ಸೃಷ್ಟಿಸಿತು. ಭಾರತದಿಂದ ಆಮದು ಮಾಡಿಕೊಳ್ಳುವುದು ಮಾತ್ರವಲ್ಲದೆ ಭಾರತಕ್ಕೆ ಅದರ ಉತ್ಪನ್ನಗಳನ್ನು ರಫ್ತು ಮಾಡುವುದು ಮುಖ್ಯ ಉದ್ದೇಶವಾಯಿತು. ಇದರ ಪರಿಣಾಮವಾಗಿ, ಇಂಗ್ಲೆಂಡಿನ ಆರ್ಥಿಕ ರೂಪಾಂತರ ಮತ್ತು ಅದಕ್ಕೆ ಅನುಗುಣವಾದ ಕೈಗಾರಿಕಾ ಕ್ರಾಂತಿಯು ಈ ರಫ್ತುಗಳ ಜೊತೆಯಲ್ಲಿ ವಿಕಸನಗೊಂಡಿತು. ಈಗ ಭಾರತ ಮತ್ತು ಇತರ ವಸಾಹತುಶಾಹಿ ರಾಷ್ಟ್ರಗಳು ಕೈಗಾರಿಕಾ ಬೆಳವಣಿಗೆಯನ್ನು ಕಂಡ ಬ್ರಿಟನ್‌ಗೆ ವಿಶೇಷ ಮಾರುಕಟ್ಟೆಯಾಗಿ ಕಾರ್ಯನಿರ್ವಹಿಸಬೇಕಾಯಿತು. ಏಂಗೆಲ್ಸ್‌ನ ಈ ಪ್ರಮುಖ ಮೌಲ್ಯಮಾಪನವನ್ನು ಬ್ರಿಟನ್‌ನಲ್ಲಿ ಬಂಡವಾಳಶಾಹಿಯ ಬೆಳವಣಿಗೆಯನ್ನು ಅಧ್ಯಯನ ಮಾಡಿದ ಅನೇಕ ಪಾಶ್ಚಿಮಾತ್ಯ ಮಾರ್ಕ್ಸ್‌ವಾದಿ ವಿಶ್ಲೇಷಕರು ನಿರ್ಲಕ್ಷಿಸಿದ್ದಾರೆ ಎಂಬುದು ದುಃಖದ ಅಂಶವಾಗಿದೆ. ಉದಾಹರಣೆಗೆ, 1945 ರಲ್ಲಿ ಲಂಡನ್‌ನಲ್ಲಿ ಪ್ರಕಟವಾದ ಮಾರಿಸ್ ಡೌಬ್ ಅವರ “ಬಂಡವಾಳಶಾಹಿಯ ಅಭಿವೃದ್ಧಿಯ ಅಧ್ಯಯನಗಳು” ಪುಸ್ತಕದಲ್ಲಿ ಏಂಗೆಲ್ಸ್ ಅವರ ಈ ಅಭಿಪ್ರಾಯ ಇಲ್ಲ.

ಏಂಗೆಲ್ಸ್ 1870 ರವರೆಗೆ ಬ್ರಿಟಿಷ್ ಕೈಗಾರಿಕಾ ನಗರವಾದ ಮ್ಯಾಂಚೆಸ್ಟರ್‌ನಲ್ಲಿರುವ ಕಾರ್ಖಾನೆಯಲ್ಲಿ ಕೆಲಸ ಮಾಡಿದರು. ಅವರ ತಂದೆಯ ಕಂಪನಿ ಹತ್ತಿ ವ್ಯಾಪಾರದಲ್ಲಿ ತೊಡಗಿಸಿಕೊಂಡಿತ್ತು. ಹಾಗಾಗಿ ಭಾರತದಿಂದ ಎಷ್ಟು ಹತ್ತಿಯನ್ನು ಆಮದು ಮಾಡಿಕೊಳ್ಳಲಾಗಿದೆ ಮತ್ತು ಇಂಗ್ಲೆಂಡ್‌ನಿಂದ ಎಷ್ಟು ಬಟ್ಟೆಗಳನ್ನು ರಫ್ತು ಮಾಡಲಾಗಿದೆ ಎಂಬುದು ಅವರಿಗೆ ತಿಳಿದಿತ್ತು. ವ್ಯಾಪಾರದಲ್ಲಿನ ಈ ಏರಿಳಿತಗಳು ಬ್ರಿಟನ್ನಿನ ವ್ಯಾಪಾರ ಬಿಕ್ಕಟ್ಟಿನ ಏರಿಳಿತಗಳನ್ನು ಪ್ರತಿಬಿಂಬಿಸುತ್ತದೆ ಎಂದು ಏಂಗೆಲ್ಸ್ ಭವಿಷ್ಯ ನುಡಿದರು.

ಬ್ರಿಟಿಷ್ ನೂಲು ಮತ್ತು ಹತ್ತಿ ತಯಾರಕರು ಮತ್ತು ಭಾರತೀಯ ಮಾರುಕಟ್ಟೆ

11 ಡಿಸೆಂಬರ್ 1868 ರಂದು ಮಾರ್ಕ್ಸ್‌ಗೆ ಬರೆದ ಪತ್ರದಲ್ಲಿ, ಬ್ರಿಟಿಷ್ ನೂಲು ಮತ್ತು ಬಟ್ಟೆ ಮಿಲ್ ಗಳು ಭಾರತೀಯ ಮಾರುಕಟ್ಟೆಗಳ ಮೇಲೆ ಹೇಗೆ ಹೆಚ್ಚು ಅವಲಂಬಿತರಾಗಿದ್ದಾರೆ ಎಂಬುದನ್ನು ಉಲ್ಲೇಖಿಸಿದ್ದಾರೆ. ಅಧಿಕ ಉತ್ಪಾದನೆಯಿಂದ ಆ ಮಾರುಕಟ್ಟೆಯ ನಿಶ್ಚಲತೆಯ ಬಗ್ಗೆಯೂ ಅವರು ಚರ್ಚಿಸುತ್ತಾರೆ. ಭಾರತದ ಮೇಲಿನ ನಿಯಂತ್ರಣ, ವಿಶೇಷವಾಗಿ ತೆರಿಗೆಗಳ ಮೂಲಕ, ಅತ್ಯಂತ ತುರ್ತು ಅಗತ್ಯವಾಗಿದೆ ಎಂದು ಬ್ರಿಟನ್ ಗೆ ಕಂಡಿತು. 18 ಜುಲೈ 1892 ರಂದು ತನ್ನ ಸ್ನೇಹಿತ ಡೇನಿಯಲ್ಸನ್‌ಗೆ ಬರೆದ ಪತ್ರದಲ್ಲಿ, "ಪ್ರಪಂಚದ ಶ್ರೇಷ್ಠ ಕೇಂದ್ರೀಕೃತ ಉತ್ಪಾದನಾ ಕೇಂದ್ರಗಳಲ್ಲಿ ಒಂದಾದ ಇಂಗ್ಲೆಂಡ್" ನ ಶಾಖೆಯಾಗಿ ಭಾರತ ಬದಲಾಗಿದೆ ಎಂದು ಪ್ರಸ್ತಾಪಿಸಿದ ಅವರು, ರಷ್ಯಾ ತನ್ನ ತೆರಿಗೆಯ ಮೂಲಕ ತನ್ನನ್ನು ರಕ್ಷಿಸಿಕೊಳ್ಳದಿದ್ದರೆ, ಭಾರತದಂತೆ ಆಗುತ್ತದೆ ಎಂದು ಎಚ್ಚರಿಸಿದ್ದರು. ಬ್ರಿಟಿಷ್ ಆಡಳಿತಗಾರರು ಭಾರತದ ಜನರ ಅನುಕೂಲಕ್ಕಾಗಿ ಯಾವುದೇ ಸುಧಾರಣೆಗಳನ್ನು ಮಾಡಲು ಬಯಸುವುದಿಲ್ಲ ಎಂದು ಮಾರ್ಕ್ಸ್‌ನಂತೆ ಏಂಗೆಲ್ಸ್ ದೃಢವಾಗಿ ನಂಬಿದ್ದರು. 1853 ರ ಭಾರತೀಯ ಕಾಯಿದೆಯನ್ನು ಬ್ರಿಟಿಷ್ ಆಡಳಿತಗಾರರು ಮತ್ತು ಅಂದಿನ ಆಡಳಿತ ಪಕ್ಷವು ಭಾರತವನ್ನು ಸುಧಾರಿಸಲು ಶ್ರೇಷ್ಠ ಕಾನೂನು ಎಂದು ಘೋಷಿಸಿತು. ಆದರೆ ಈ ಕಾನೂನಿನ ಮುಖ್ಯ ಉದ್ದೇಶವು ಭಾರತದಲ್ಲಿ ಬ್ರಿಟಿಷರ ಶ್ರೇಣಿ ಮತ್ತು ವೇತನವನ್ನು ಹೆಚ್ಚಿಸುವುದಾಗಿದೆ ಮತ್ತು ಇದು ಭಾರತದ ಲೂಟಿಯನ್ನು ತಮ್ಮ ನಡುವೆ ವಿಭಜಿಸಲು ಬ್ರಿಟಿಷ್ ಆಡಳಿತ ಪಕ್ಷದ ತಂತ್ರವಾಗಿದೆ ಎಂದು ಏಂಗೆಲ್ಸ್ ಬಹಿರಂಗಪಡಿಸಿದರು. ಇದರಿಂದ ಭಾರತಕ್ಕೆ ಯಾವುದೇ ಪ್ರಯೋಜನವಿಲ್ಲ ಎಂದು ಏಂಗೆಲ್ಸ್ ಸ್ಪಷ್ಟಪಡಿಸಿದರು.

1857 ರ ಮಹಾ ಬಂಡಾಯ ಕುರಿತು ಏಂಗೆಲ್ಸ್

1857ರ ಬಂಡಾಯ ಮತ್ತು ಬ್ರಿಟಿಷರ ದಮನಕಾರಿ ಮಿಲಿಟರಿ ಅಂಶಗಳ ಬಗ್ಗೆ ತನಗೆ ಬರೆಯಲು ಮಾರ್ಕ್ಸ್ ಏಂಗೆಲ್ಸ್ ಅವರನ್ನು ಕೇಳಿಕೊಂಡರು. ಏಂಗೆಲ್ಸ್ 5 ಡಿಸೆಂಬರ್ 1857 ರಿಂದ 1 ಅಕ್ಟೋಬರ್ 1858 ರವರೆಗೆ ಈ ಬಂಡಾಯದ ಕುರಿತು ಹನ್ನೊಂದು ಲೇಖನಗಳನ್ನು ಬರೆದರು. ಬಹುಮಟ್ಟಿಗೆ, ಏಂಗೆಲ್ಸ್ ಈ ಪ್ರಬಂಧಗಳನ್ನು ಮಿಲಿಟರಿ ತಜ್ಞರ ಅಧ್ಯಯನದಂತೆ ಬರೆಯುತ್ತಾರೆ. ನಮಗೆ ತಿಳಿದಿರುವ ಒಂದು ವಿಷಯವೆಂದರೆ ಅವನು

ಪುಟ 05 ಕ್ಕೆ

ಸಂಪಾದಕೀಯ

ಎಸ್.ಸಿ.ಪಿ. ಮತ್ತು ಟಿ.ಎಸ್.ಪಿ. ಹಣ ವರ್ಗಾವಣೆ: ದಲಿತ–ಆದಿವಾಸಿಗಳಿಗೆ ವಂಚನೆ

ಪರಿಶಿಷ್ಟ ಜಾತಿ (ಎಸ್.ಸಿ) ಮತ್ತು ಪರಿಶಿಷ್ಟ ಪಂಗಡ (ಎಸ್.ಟಿ) ಸಮುದಾಯಗಳ ಅಭಿವೃದ್ಧಿಗೆಂದು ಮೀಸಲಿರಿಸಿದ ಹಣದಲ್ಲಿ 'ಐದು ಗ್ಯಾರಂಟಿ' ಯೋಜನೆಗಳಿಗೆ ಹಣ ವರ್ಗಾಯಿಸಿರುವ ಕರ್ನಾಟಕ ಸರ್ಕಾರದ ಕ್ರಮ ಯಾವುದೇ ಕಾರಣಕ್ಕೂ ಸಮರ್ಥನೀಯವಲ್ಲ. 1975ರಲ್ಲಿ ಟಿಎಸ್ಪಿ ಯೋಜನೆಯ ರೂಪಿಸುವಾಗ ಅದು ನಿರ್ದೇಶನದಂತೆ ಹಣ ಉಳಿಕೆ ಆಗಬಾರದು ಮತ್ತು ಖರ್ಚಾಗದೆ ಉಳಿಯಬಾರದು ಅನ್ಯ ಉದ್ದೇಶಗಳಿಗೆ ಬಳಸಬಾರದು ಎನ್ನುವ ನಿರ್ದೇಶನವನ್ನು ಇದು ಉಲ್ಲಂಘಿಸುತ್ತದೆ ಮಾತ್ರವಲ್ಲ ಅದನ್ನು ತಡೆಯಲೆಂದು ರೂಪಿಸಲಾದ ಕರ್ನಾಟಕ ವಿಧಾನಸಭೆ ಅಂಗೀಕರಿಸಿದ 2013ರ ವಿಶೇಷ ಕಾಯ್ದೆಯನ್ನು ಉಲ್ಲಂಘಿಸುತ್ತದೆ. ಮಾತ್ರವಲ್ಲ, ಅನ್ಯ ಉದ್ದೇಶಗಳಿಗೆ ಈ ಹಣವನ್ನು ಬಳಸುತ್ತಿದ್ದ ದುರ್ಬಳಕೆಯನ್ನು ತಡೆಯಲು ಆ ಕಾಯ್ದೆಯೊಳಗಿನ 7–ಡಿ ಅಂಶವನ್ನು ಈ ಸಾಲಿನ ಬಜೆಟ್ ಅಧಿವೇಶನದಲ್ಲಿ ರದ್ದುಪಡಿಸುವುದಾಗಿ ಘೋಷಿಸಿದ್ದ ಸಿದ್ದರಾಮಯ್ಯನವರೇ ಅಂತಹ ದುರುಪಯೋಗಕ್ಕೆ ಮುಂದಾಗಿರುವುದು ತೀವ್ರ ಖಂಡನಾರ್ಹ. ವಿವಿಧ ಸಾಮಾಜಿಕ ಸಂಘಟನೆಗಳು, ರಾಜಕೀಯ ಪಕ್ಷಗಳು, ಹಾಗೂ ಸಾರ್ವಜನಿಕರ ತೀವ್ರ ಆಕ್ಷೇಪ ವ್ಯಕ್ತವಾದ ಹಿನ್ನೆಲೆಯಲ್ಲಿ ಅಂತಹ ಯಾವುದೇ ದುರುಪಯೋಗ ಆಗಿಲ್ಲ, ತಪ್ಪಾಗಿ ಅಭಿಪ್ರಾಯ ಬಿಂಬಿಸಲಾಗುತ್ತಿದೆ ಎನ್ನುತ್ತಿರುವ ಸಿದ್ದರಾಮಯ್ಯನವರ ಮಾತುಗಳು ಸಮರ್ಥ ನೆಲೆಯೇ ಇಲ್ಲ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನ ಸಮುದಾಯಗಳ ಅತ್ಯಂತ ನಿಕೃಷ್ಟ ಪರಿಸ್ಥಿತಿ ಮತ್ತು ಅಂದಿನ ಸಾಮಾಜಿಕ, ಆರ್ಥಿಕ ವಾಸ್ತವಿಕ ಸ್ಥಿತಿಗಳನ್ನು ಗಮನದಲ್ಲಿ ಇರಿಸಿಕೊಂಡು ಸಾಮಾನ್ಯ ಬಜೆಟ್ಟಿನಿಂದ ಮಾತ್ರವೇ ಈ ಸಮುದಾಯಗಳ ಕಲ್ಯಾಣ ಮತ್ತು ಅಭ್ಯುದಯ ಸಾಧ್ಯವಿಲ್ಲವೆಂದು ಮನಗಂಡು 70ರ ದಶಕದಲ್ಲಿ ಎಸ್.ಸಿ.ಪಿ. ಮತ್ತು ಟಿ.ಎಸ್.ಪಿ. ಯೋಜನೆಗಳನ್ನು ಜಾರಿಗೆ ತರಲಾಯಿತು. ಈ ಮೂಲಕ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ತಮ್ಮ ಸಾಮಾನ್ಯ ಆಯ–ವ್ಯಯದಲ್ಲಿ ಆ ಸಮುದಾಯಗಳಿಗೆ ಒದಗಬಹುದಾದ ನೆರವು ಅಲ್ಲದೆ ವಿಶೇಷ ಘಟಕ ಯೋಜನೆಗಳ ಅಡಿಯಲ್ಲಿ ಹಣವನ್ನು ಮೀಸಲಿರಿಸಲು ಮುಂದಾದವು. ಇಂತಹ ವಿಶೇಷ ಘಟಕ ಯೋಜನೆಗಳನ್ನು ರೂಪಿಸುವಾಗ ಜನಸಂಖ್ಯೆಯ ಪ್ರಮಾಣಕ್ಕೆ ಅನುಗುಣವಾಗಿ ಬಡ್ಜೆಟ್ಟನಲ್ಲಿ ಹಣವನ್ನು ತೆಗೆದಿರಿಸಬೇಕು ಎಂಬ ಸೂಚನೆಯನ್ನು ನೀಡಲಾಯಿತು. ಎಸ್.ಸಿ.ಪಿ ಮತ್ತು ಟಿ.ಎಸ್.ಪಿ. ಯೋಜನೆಗಳಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಒಂದಿಷ್ಟು ಹಣವನ್ನು ಮೀಸಲಿರಿಸುವುದನ್ನು ಬಿಟ್ಟರೆ ಜನಸಂಖ್ಯೆಯ ಪ್ರಮಾಣಕ್ಕೆ ಅನುಗುಣವಾಗಿ ಇಲ್ಲ ಎಂಬುದನ್ನು ಗಮನಿಸಬೇಕು. ಸಾಮಾಜಿಕ ನ್ಯಾಯಕ್ಕೆ ಬದ್ಧವಾಗಿರುವ ಸರ್ಕಾರವೆಂದು ಹೇಳಲಾಗುತ್ತಿರುವ ಕರ್ನಾಟಕದ ಕಾಂಗ್ರೆಸ್ ಸರ್ಕಾರವು ಒಂದು ವೇಳೆ ತನ್ನ ಬಡ್ಜೆಟ್ಟಿನಲ್ಲಿ ಶೇ.24.1 ಜನಸಂಖ್ಯೆಯ ಪ್ರಮಾಣಕ್ಕೆ ಅನುಗುಣವಾಗಿ ಹಣವನ್ನ ಮೀಸಲಿಟ್ಟಲ್ಲಿ ಅದು ಸುಮಾರು 80,000 ಕೋಟಿ ರೂಪಾಯಿಗಳ ಹಣವನ್ನು ಈ ಸಮುದಾಯಗಳಿಗೆ ಒದಗಿಸಬೇಕಾಗಿತ್ತು. ಆದರೆ ಇತ್ತೀಚಿನ ವರ್ಷಗಳಲ್ಲೇ ಅತಿ ಹೆಚ್ಚಿನ ಮೊತ್ತ ಎನ್ನಲಾಗುವ 34, 294 ಕೋಟಿ ರೂ.ಗಳು ಎನ್ನುವುದು ಆ ಮಾನದಂಡವನ್ನು ಪೂರೈಸುವುದಿಲ್ಲ.

ಈ ವಿಶೇಷ ಘಟಕ ಯೋಜನೆಗಳ ಮೂಲಕ ನಿರ್ದಿಷ್ಟವಾಗಿ ಆ ಸಮುದಾಯಗಳ ಅಭಿವೃದ್ಧಿಗೆ ಒಂದು ಚೌಕಟ್ಟನ್ನು ರೂಪಿಸಲಾಗಿದೆ. ಕರ್ನಾಟಕದ ಕಾಂಗ್ರೆಸ್ ಸರ್ಕಾರ ಪ್ರಕಟಿಸಿದ ಐದು ಗ್ಯಾರಂಟಿಗಳು ಈ ಯೋಜನೆಗೆ ಎಳ್ಳಷ್ಟೂ ಹೊಂದಿಕೊಂಡಿಲ್ಲ. ಅವು ಕರ್ನಾಟಕ ರಾಜ್ಯ ಸರ್ಕಾರದ ವಿಶೇಷವಾದಂತಹ ಯೋಜನೆಗಳಾಗಿವೆ. ಅಂತಹ ಯೋಜನೆಗಳ ಲಾಭ ಈ ಸಮುದಾಯಗಳಿಗೆ ಸಹಜ ನ್ಯಾಯದ ಪಾಲಾಗಿ ಸಿಗ ಬೇಕಿದೆ. ಅದು ಇಲ್ಲವಾಗುವುದು ವಾಸ್ತವದಲ್ಲಿ ವಂಚಿತವಾಗುತ್ತವೆ. ಬೇರೆ ಜನರಿಗೆ ಸಾಮಾನ್ಯ ಬಜೆಟ್ಟಿನಿಂದ ಹಣವನ್ನು ಒದಗಿಸುವುದು, ಆದರೆ ದಲಿತ ಮತ್ತು ಆದಿವಾಸಿ ಸಮುದಾಯಗಳಿಗೆ ಅವರ ಅಭಿವೃದ್ಧಿಗೆ ಮೀಸಲಿಟ್ಟ ಹಣದಿಂದ ಕೀಳುವುದು ಯಾವ ನ್ಯಾಯ?

ಈ ಸಮುದಾಯಗಳ ಅಭ್ಯುದಯಕ್ಕಾಗಿ ತೆಗೆದಿರಿಸಿದ ವಿಶೇಷ ಹಣದಲ್ಲಿ 11,000 ಕೋಟಿ ರೂ.ಗಳನ್ನು (ಶೇ. 28) ಒದಗಿಸಿರುವುದಾಗಿ ಸಮಾಜ ಕಲ್ಯಾಣ ಸಚಿವರೇ ತಡವರಿಸಿ ಒಪ್ಪಿಕೊಂಡಿದ್ದಾರೆ. ಅಂದರೆ ಇದರಲ್ಲಿ 7570 ಕೋಟಿ ರೂ.ಗಳನ್ನು ದಲಿತರು ಎಸ್.ಸಿ.ಪಿ. ಹಣ, 3430 ಕೋಟಿ ರೂ.ಗಳು ಬುಡಕಟ್ಟು ಸಮುದಾಯಗಳು ಟಿ.ಎಸ್.ಪಿ. ಹಣವನ್ನು ಕಳೆದುಕೊಳ್ಳುತ್ತವೆ. ಬಜೆಟ್ಟಿನಲ್ಲಿ 34,294 ಕೋಟಿ ರೂಪಾಯಿಗಳನ್ನು ಈ ಉಪಯೋಜನೆಗೆ ಮೀಸಲಿರಿಸಲಾಗಿದೆ ಎಂದು ಹೇಳಲಾದರೂ ವಾಸ್ತವದಲ್ಲಿ 23,294 ಕೋಟಿ ರೂಪಾಯಿಗಳು ಮಾತ್ರವೇ ಲಭ್ಯವಾಗುತ್ತದೆ. ಅದು ಬೊಮ್ಮಾಯಿ ಸರ್ಕಾರದ ಕಳೆದ ವರ್ಷ ನೀಡಿದ್ದ ಹಣಕ್ಕಿಂತಲೂ 7000 ಕೋಟಿ.ರೂ.ಗಳು ಕಡಿಮೆ. ಅಂದರೆ ಈ ಸಮುದಾಯಗಳಿಗೆ ನೀಡಲಾದ ಹಣವನ್ನು ಕುಗ್ಗಿಸಲಾಗಿದೆ ಅಥವಾ ಕಸಿಯಲಾಗಿದೆ ಎನ್ನುವುದು ನಿಚ್ಚಳ.

ಈಗಾಗಲೇ ಕಳೆದ ಹಲವಾರು ದಶಕಗಳಲ್ಲಿ ಯೋಜನೆಯ ಅನುಷ್ಠಾನ ಕನ್ನಡಿಯೊಳಗಿನ ಗಂಟಿನಂತೆ ಇರುವುದು, ಮರೆಮಾಚುವಂತದ್ದೇನಲ್ಲ. ಇಲ್ಲಿಯವರೆಗೂ ಈ ಉಪಯೋಜನೆಗಳ ಜಾರಿ, ಅದರ ಸಮರ್ಪಕತೆ ಮತ್ತು ನಿಜಕ್ಕೂ ಆ ಸಮುದಾಯಗಳಿಗೆ ಪ್ರಯೋಜನವಾಗಿದೆಯೇ ಎನ್ನುವ ಬಗ್ಗೆ ಯಾವತ್ತೂ ಮೌಲ್ಯಮಾಪನವೇ ನಡೆಯಲಿಲ್ಲ.

‘ಕರ್ನಾಟಕ ಪರಿಶಿಷ್ಟ ಜಾತಿ ಉಪ ಯೋಜನೆ ಮತ್ತು ಬುಡಕಟ್ಟು ಉಪ ಯೋಜನೆ (ಯೋಜನೆ, ಹಂಚಿಕೆ ಮತ್ತು ಹಣಕಾಸು ಸಂಪನ್ಮೂಲಗಳ ಬಳಕೆ) ಕಾಯಿದೆ 2013’ ರ ಅನ್ವಯ ಖರ್ಚು ಮಾಡದೆ ಉಳಿದ ಹಣ ಮುಂದಿನ ವರ್ಷಕ್ಕೆ ಸೇರ್ಪಡೆ ಆಗುತ್ತದೆಯಾದರೂ ಈ ಹಣದ ಬಳಕೆ ಅಥವಾ ಸದ್ಬಳಕೆ ಮಾಡದ ಯಾವ ಅಧಿಕಾರಿಗಳ ಮೇಲೂ ಕ್ರಿಮಿನಲ್ ಕೇಸ್ ಗಳನ್ನು ಹಾಕಲಿಲ್ಲ, ಜೈಲಿಗೆ ಕಳಿಸಲಿಲ್ಲ. ಎಡ ಸರಕಾರಗಳನ್ನು ಬಿಟ್ಟರೆ ಬಹುತೇಕ ಈ ಎಲ್ಲಾ ಸರ್ಕಾರಗಳು ಈ ಪುಟ 04 ಕ್ಕೆ

ಈ ವಾರ

ಲೋಕಸಭಾ ಚುನಾವಣೆಗೆ ಆರಂಭಗೊಂಡಿರುವ ಕಸರತ್ತುಗಳು

ಎಸ್.ವೈ.ಗುರುಶಾಂತ್

2024 ರ ಲೋಕಸಭಾ ಚುನಾವಣಾ ತಯಾರಿಗಳು ಆರಂಭಗೊಂಡಿವೆ. ’ಇಂಡಿಯಾ’ದ ಮೈತ್ರಿಕೂಟದಿಂದ ಗಲಿಬಿಲಿಗೊಂಡ ಆಡಳಿತರೂಢ ಬಿಜೆಪಿ ನೇಪಥ್ಯಕ್ಕೆ ಸರಿಸಿದ್ದ ಎನ್.ಡಿ.ಎ. ಗೆ ಮರು ಜೀವ ನೀಡಲು ಆಕ್ಸಿಜನ್ ಪಂಪಿಂಗ್ ಮಾಡುತ್ತಿದೆ. ವಿರೋಧ ಪಕ್ಷಗಳ ಮೈತ್ರಿಕೂಟ ’ಇಂಡಿಯಾ’ ದ ಬಲ, ಕ್ರಿಯಾಶೀಲತೆ ಹೆಚ್ಚುತ್ತಿರುವುದರಿಂದ ಪ್ರಧಾನಿ ನರೇಂದ್ರ ಮೋದಿಯವರೂ ಕಳವಳಗೊಂಡಿದ್ದಾರೆ. ‘ಇಂಡಿಯಾ ಅಲ್ಲ, ‘ಘಮಂಡಿಯಾ’ ಎಂದು ಹೇಳಿದರಲ್ಲಿ ಅವರ ಆತಂಕ, ನಿರಾಶೆ ಇದೆ. ಇಲ್ಲವಾದಲ್ಲಿ ಪ್ರಧಾನಿ ಇಂತಹ ಹಗುರ ಮಾತುಗಳನ್ನು ಆಡಬೇಕಿರಲಿಲ್ಲ.





ರಾಷ್ಟ್ರೀಯ ಪ್ರಶ್ನೆಗಳಲ್ಲಿ ‘ಇಂಡಿಯಾ’ ಮೈತ್ರಿ ಕೂಟದ ಸಕ್ರಿಯ ಮದ್ಯ ಪ್ರವೇಶ, ಸಂಸತ್ತಿನಲ್ಲಿ ಅವಿಶ್ವಾಸ ನಿರ್ಣಯ, ಮಣಿಪುರಕ್ಕೆ ನಾಯಕರ ಭೇಟಿ, ಮತ್ತೊಂದು ಅಖಿಲ ಭಾರತ ನಾಯಕರ ಸಭೆ, ಹೀಗೆ ರಾಜಕೀಯ ಮದ್ಯಪ್ರವೇಶ ಮತ್ತು ಸಂಘಟನಾ ಸಿದ್ಧತೆಗಳು ಜೊತೆಯಲ್ಲೇ ನಡೆದಿವೆ ಎನ್ನುವುದನ್ನು ಗಮನಿಸಬಹುದು. ಇವಕ್ಕೆ ಮತ್ತಷ್ಟು ಹುರುಪು, ಹುಮ್ಮಸ್ಸು ತುಂಬಿದ ವಿಷಯ ಎಂದರೆ ರಾಹುಲಗಾಂಧಿಯವರನ್ನು ಸಂಸದ ಸ್ಥಾನದಿಂದ ಅನರ್ಹತೆಗೊಳಿಸಲಾದ ವಿಷಯದಲ್ಲಿ ಸುಪ್ರಿಂ ಕೋರ್ಟ್ ಕೆಳ ನ್ಯಾಯಾಲಯದ ತೀರ್ಪಿಗೆ ನೀಡಿದ ತಡೆಯಾಜ್ಞೆ.

ಚುನಾವಣೆಯ ಸಂಘಟನಾ ಸಿದ್ಧತೆಯಾಗಿ ಬಿಜೆಪಿ ಪಕ್ಷ ವಿವಿಧ ಸಮಿತಿಗಳನ್ನು ಪುನರ್ ಸಂಘಟಿಸಲು ಕಸರತ್ತುಗಳನ್ನೇನೋ ನಡೆಸಿದೆ. ಆದರೆ ಅದು ಅಷ್ಟು ಸರಳವೂ, ಸುಲಭವೂ ಇದ್ದಂತಿಲ್ಲ. ಆದರೆ ಅದೇ ಹೊತ್ತಿನಲ್ಲಿ ಬಿಜೆಪಿ–ಸಂಘಪರಿವಾರ ಸಾಮಾಜಿಕ ವಿಭಜನೆ ತರಲು ಕೋಮುದ್ವೇಷ, ಹಿಂಸಾಚಾರ, ಗಲಭೆಗಳಿಗೆ ತಿದಿಯೂದಿ ಉದ್ರೇಕಿಸುವ ತನ್ನ ಹಳೆಯ ಚಾಳಿಯನ್ನೆ ಅವಲಂಬಿಸುತ್ತಿದೆ. ಮಣಿಪುರ, ಹರ್ಯಾಣ, ಉತ್ತರ ಪ್ರದೇಶಗಳಲ್ಲಿ ಗಲಭೆ, ಘಟನೆಗಳು ದ್ವೇಷದ ದಳ್ಳುರಿಯಲ್ಲಿ ಗಳ ಹಿರಿಯುವ, ಮೈ ಕಾಯಿಸುವ ರಾಜಕೀಯ ಲಾಭದ ವಾಂಛೆಯನ್ನು ಸಾರಿ ಹೇಳುತ್ತಿವೆ. ವಿಚಿತ್ರ ಎಂದರೆ ಕರ್ನಾಟಕದ ಚುನಾವಣಾ ಫಲಿತಾಂಶದ ಬಳಿಕ ಮತೀಯ ದ್ವೇಷದ ’ಅತಿ’ ಮಾಡಿದ ಹಾನಿಯ ಬಗ್ಗೆ ಆರೆಸ್ಸೆಸ್ ಹೊಂದಿದ್ದ ಅಭಿಪ್ರಾಯಕ್ಕೆ ಅವೆಲ್ಲಾ ವ್ಯತಿರಿಕ್ತವಾದುದು. ಕರ್ನಾಟಕದ ಚುನಾವಣೆಯಲ್ಲಿ ಬಿ.ಎಲ್.ಸಂತೋಷ್ ಮಾರ್ಗ ’ಸಂತಸ’ ತಂದಿರಲಿಲ್ಲ! ಆದಾಗ್ಯೂ ಅದನ್ನೆ ಅನುಸರಿಸುತ್ತಿರುವುದು ಅಂದರೆ ಅದಕ್ಕೆ ಪ್ರಸಕ್ತ ಸನ್ನಿವೇಶದ ಬಿಕ್ಕಟ್ಟಿಗೆ ಅನ್ಯ ಮಾರ್ಗೋಪಾಯಗಳೇ ಇಲ್ಲವೆಂದು ಭಾವಿಸಿದಂತಿದೆ. ಮತೀಯ ಧೃವೀಕರಣವೊಂದೇ ಉಳಿದ ಪ್ರಮುಖ ದಾರಿ ಎಂದುಕೊಂಡಿದೆ. ಇದು ತಕ್ಷಣದಲ್ಲಿ ನಡೆಯಲಿರುವ ಕೆಲವು ವಿಧಾನಸಭಾ ಚುನಾವಣೆ ಹಾಗೂ ಲೋಕಸಭಾ ಚುನಾವಣೆ ಖಂಡಿತಕ್ಕೂ ಬಹು ದೊಡ್ಡ ಪಾಠವಾಗುವುದರಲ್ಲಿ ಅನುಮಾನ ಇಲ್ಲ.

* * *

ಸಾರಥ್ಯ ಯಾರಿಗೆ?





ಅಂದ ಹಾಗೆ ಅಖಿಲ ಭಾರತ ಮಟ್ಟದಲ್ಲಿ ವಿಶೇಷವಾಗಿ ಕರ್ನಾಟಕದಲ್ಲಿಯೂ ಬಿಜೆಪಿ ಪಕ್ಷವನ್ನು ಪುನರ್ ಸಂಘಟಿಸಲು ಹೈಕಮಾಂಡ್ ಕ್ರಮ ವಹಿಸುತ್ತಿದೆ. ಕರ್ನಾಟಕ ಘಟಕದ ಅದ್ಯಕ್ಷರ ಅವಧಿ ಮುಗಿದಿದೆ. ಹೊಸ ಅದ್ಯಕ್ಷರ ಆಯ್ಕೆ ಆಗಬೇಕು. ಹಾಲಿ ಅದ್ಯಕ್ಷ ಸಂಸದ ನಳಿನ್ ಕುಮಾರ ಕಟೀಲು ಅವರ ವಿರುದ್ಧ ಪದಚ್ಯುತಿಗಾಗಿ ತವರಿನಲ್ಲೇ ಅಭಿಯಾನ, ಬಹಿರಂಗ ಆಕ್ರೋಶದ ಕಾವು ಹೆಚ್ಚುತ್ತಲೇ ಇದೆ. ಆಂದರೆ ಹೊಸ ಅದ್ಯಕ್ಷನ ಆಯ್ಕೆ ಖಚಿತ. ಹಾಗಾದರೆ ಈ ಸ್ಥಾನಕ್ಕೆ ಯಾರು?

‘ಯಾರು’ ಎಂದು ಹೈಕಮಾಂಡ್ ಅಳೆದು ಸುರಿದು ಯೋಚಿಸುತ್ತಿದೆ. ಸಂಘಪರಿವಾರದ ಹಾರ್ಡ್ ಕೋರ್ ಕಟ್ಟಾಳುವನ್ನೇ ಅದ್ಯಕ್ಷ ಸ್ಥಾನಕ್ಕೆ ತರಬೇಕು ಎಂಬುದು ಅದರ ಸಹಜ ಚಿಂತನೆ. ಈಗಾಗಲೇ ಸ್ವಂತ ವರ್ಚಸ್ಸು, ಪ್ರಭಾವ, ಸಂಘಟನಾ ಬಲ ಒಟ್ಟಾರೆ ಬೆನ್ನು ಗಟ್ಟಿ ಇರುವವರನ್ನು ಹಂತ ಹಂತವಾಗಿ ಮೂಲೆಗೆ ಸರಿಸುತ್ತಾ ಬಂದಿರುವ ಸಂಘ ಮತ್ತೇ ಅಂತಹುದೇ ಸ್ಥಿತಿಗೆ ಮರಳಿ ಹೋಗಲು ಬಯಸುತ್ತಿಲ್ಲ. ಅದಕ್ಕೀಗ ರಾಜ್ಯಗಳಲ್ಲಿ ದುರ್ಬಲ ನಾಯಕತ್ವ ಇರಬೇಕು, ಅಣತಿ ಪಾಲಿಸುವವರೇ ಬೇಕು. ಮೇಲಾಗಿ ಲೋಕಸಭಾ ಚುನಾವಣೆಯಲ್ಲಿ ಹೆಚ್ಚಿನ ಸ್ಥಾನ ಗಳಿಸುವುದೇ ಅದ್ಯತೆ. ಕರ್ನಾಟಕ ವಿಧಾನಸಭೆಯಲ್ಲಿ ವಿರೋಧ ಪಕ್ಷದ ನಾಯಕನ ಆಯ್ಕೆಯೂ ಪೆಂಡಿಂಗ್ ನಲ್ಲಿದೆ. ಅಲ್ಲಿಗೆ ಲಿಂಗಾಯತ ಜಾತಿಯ ಶಾಸಕರನ್ನು ತಂದರೆ, ಇನ್ನೊಂದು ಪ್ರಬಲ ಜಾತಿ ಒಕ್ಕಲಿಗರನ್ನು ಬಿಜೆಪಿ ರಾಜ್ಯ ಘಟಕದ ಅದ್ಯಕ್ಷನನ್ನಾಗಿಸಬಹುದೇ? ಅಥವಾ ಉಲ್ಟಾ ಆಗಲೂ ಬಹುದು!

ಇಂತಹ ಲೆಕ್ಕಾಚಾರವನ್ನು ರಾಜ್ಯದ ಬಿಜೆಪಿ ನಾಯಕರು, ಶಾಸಕರೂ ಹೊಂದಿದ್ದಾರೆ. ಹಾಗಾಗಿ, ವಿರೋಧ ಪಕ್ಷದ ನಾಯಕರಾಗಲು ಬಸವರಾಜ ಪಾಟೀಲ್ ಯತ್ನಾಳ ಒಳಗೊಂಡು ಬಸವರಾಜ ಬೊಮ್ಮಾಯಿ ತನಕ ಸಿದ್ಧರಿದ್ದಾರೆ. ಹಾಗೇ ಪಕ್ಷದ ಅದ್ಯಕ್ಷ ಗಾದಿಗೆ ಸಿ.ಟಿ.ರವಿ ಮೊದಲ್ಗೊಂಡು, ಆರ್. ಅಶೋಕ್, ಅಶ್ವಥ ನಾರಾಯಣ, ಶೋಭಾ ಕರಂದ್ಲಾಜೆ, ಇತ್ಯಾದಿ ಹೆಸರುಗಳು ಓಡಾಡುತ್ತಿವೆ! ಸಿ.ಟಿ.ರವಿಯವರನ್ನು ರಾಷ್ಟ್ರೀಯ ಕಾರ್ಯದರ್ಶಿ ಹುದ್ದೆಯಿಂದ ಕೈ ಬಿಡಲಾಗಿದೆ. ರಾಜ್ಯ ಅದ್ಯಕ್ಷನನ್ನು ಮಾಡಲೆಂದೆ ಬಿಡುಗಡೆ ಮಾಡಲಾಗಿದೆ ಎಂಬಂತೆ ಪ್ರೊಜೆಕ್ಟ್ ಮಾಡುತ್ತಿದ್ದರೂ ಅಂತಹ ಸ್ವಲ್ಪ ವಾಸನೆಯೂ ಇಲ್ಲ. ಬದಲಾಗಿ, ದೆಹಲಿ ನಾಯಕರನ್ನು ಕಂಡು ರಾಜಿನಾಮೆ ಕೊಡುವಾಗ, ಹಿಂತಿರುಗಿದಾಗ ಡಲ್ ಆಗಿದ್ದನ್ನು ಮಾಧ್ಯಮಗಳು ವರದಿ ಮಾಡಿವೆ. ಬಹುತೇಕ ಸಿ.ಟಿ.ರವಿಯವರಿಗೆ ಸುಖವಿಲ್ಲ ಅನಿಸುತ್ತಿದೆ!

* * *

ಪುಟ 04 ಕ್ಕೆ

ಪರಿಶಿಷ್ಟರ 11,000 ಕೋಟಿ ಬೇರೆ ಕೆಲಸಕ್ಕೆ ವರ್ಗಾವಣೆ: ಸಿಪಿಐ(ಎಂ) ವಿರೋಧ

ಈಚೆಗೆ ರಾಜ್ಯ ಸರಕಾರ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ವಿಶೇಷ ಘಟಕ ಕಾಯ್ದೆಗೆ ತಿದ್ದುಪಡಿ ಮಾಡಿ, ಇವರಿಗೆ ಮೀಸಲಿರಿಸಿದ್ದ ಅನುದಾನ ಸೋರಿಕೆಯಾಗಿ ಬೇರೆ ಕಾರ್ಯಕ್ರಮಗಳಿಗೆ ಉಪಯೋಗ ಮಾಡಲಾಗುತ್ತಿತ್ತು. ಸದರಿ ಕಾಯ್ದೆಯ ಅಂತಹ 7(d) ಅಂಶವನ್ನು ವಾಪಾಸು ಪಡೆಯುವ ಮೂಲಕ ಇಂತಹ ವಂಚನೆಯ ಕ್ರಮವನ್ನು ರಾಜ್ಯ ಸರ್ಕಾರ ಸರಿಪಡಿಸಿತು. ಪರಿಶಿಷ್ಟರಿಗೆ ಮೀಸಲಿಡಲಾಗಿದ್ದ ಅನುದಾನವನ್ನು ಬಳಸದಂತೆ ತಡೆಯುವ ಸರ್ಕಾರದ ಈ ನಡೆ ಸ್ವಾಗತಾರ್ಹವಾಗಿತ್ತು. ಆದರೆ, ಸೋರಿಕೆ ತಡೆಯಲು ಕಾಯ್ದೆಗೆ ತಿದ್ದುಪಡಿ ಮಾಡಿದ ಒಂದೆರಡು ದಿನಗಳಲ್ಲಿಯೇ, 2023–24 ನೆಯ ವರ್ಷಕ್ಕೆ ನಿಗದಿಸಲಾಗಿದ್ದ ಪರಿಶಿಷ್ಟ ಜಾತಿ ಹಾಗೂ ಪಂಗಡಗಳ 34,000 ಕೋಟಿ ರೂ.ಗಳ ಅನುದಾನದಲ್ಲಿ, 11,000 ಕೋಟಿ ರೂ.ಗಳನ್ನು ಬೇರೆ ಯೋಜನೆಗಳಿಗೆ ವರ್ಗಾಯಿಸಿರುವ ಸರಕಾರದ ನಡೆ ಅಕ್ಷಮ್ಯವಾಗಿದೆ ಎಂದಿರುವ ಸಿಪಿಐ(ಎಂ), ತಕ್ಷಣವೇ ಸದರಿ ಮೊತ್ತವನ್ನು ವಾಪಾಸು ನೀಡುವಂತೆ ಮುಖ್ಯಮಂತ್ರಿಗಳನ್ನು ಒತ್ತಾಯಿಸಿದೆ.

ಈ ಹಿಂದೆ, ಇದೇ ಸಿದ್ದರಾಮಯ್ಯ ನೇತೃತ್ವದ ಸರ್ಕಾರ, ಸಾಮಾಜಿಕ ತಾರತಮ್ಯದ ಹಿನ್ನೆಲೆಯಲ್ಲಿ ಪರಿಶಿಷ್ಟರ ಅಭಿವೃದ್ಧಿಗಾಗಿ ಜನತೆಯ ತೀವ್ರವಾದ ಒತ್ತಡದ ಹಿನ್ನೆಲೆಯಲ್ಲಿ, ಈ ಪರಿಶಿಷ್ಟರ ಉಪಯೋಜನೆಯ ಕಾಯ್ದೆಯನ್ನು ರೂಪಿಸಿತ್ತು. ಆದರೇ ಅದರಲ್ಲಿ 7(d) ಯಂತಹ ಪಾರುಗುಂಡಿಯನ್ನಿಟ್ಟು ಕೊಂಡು ಅವರ ಹಣವನ್ನು ದುರ್ಬಳಕೆ ಮಾಡಲು ಅನುವಾಗುವ ಅಂಶವನ್ನು ಅದು ಒಳಗೊಳಿಸಿತ್ತು. ಈ ಕಾಯ್ದೆಯನ್ನು ಸ್ವಾಗತಿಸಿದ್ದ ಸಿಪಿಐ(ಎಂ), 7(d) ಯನ್ನು ತೆಗೆದು ಹಾಕುವಂತೆ ಒತ್ತಾಯಿಸಿತ್ತು. ಆದರೇ ಆಗ ಇದ್ದ ಸಿದ್ದರಾಮಯ್ಯನವರ ಸರ್ಕಾರ ಅದನ್ನು ತೆಗೆಯದೇ ಹಾಗೆಯೆ ಉಳಿಸಿತ್ತು.

ಈ ಪಾರುಗುಂಡಿಯಿಂದಾಗಿ ಈ ಕಾಯ್ದೆಯ ಜಾರಿಯ ನಂತರ ಪ್ರತಿವರ್ಷವು ಪರಿಶಿಷ್ಟ ಸಮುದಾಯಗಳಿಗೆ 30,000 ಕೋಟಿ ರೂ.ಗಳಿಗೂ ಅಧಿಕ ಮೊತ್ತವನ್ನು ನಿಗದಿಸಿದೆಯೆಂದು ಹೇಳಿ ದಲಿತರನ್ನು, ರಾಜ್ಯದ ಜನತೆಯನ್ನು ನಂಬಿಸಲಾಗುತ್ತಿತ್ತು. ಅದೇ ಸಂದರ್ಭದಲ್ಲಿ, ಬಿಜೆಪಿಯದ್ದು ಸೇರಿದಂತೆ ಎಲ್ಲ ಸರ್ಕಾರಗಳು ಈ ಪಾರುಗುಂಡಿಯ ಮೂಲಕ ಹಲವು ಸಾವಿರ ಕೋಟಿ ರೂ.ಗಳನ್ನು ವಾಪಾಸು ಪಡೆಯುವ ಹಾಗೂ ಬೇರೆ ಕೆಲಸಗಳಿಗೆ ಬಳಸುವ ಮೂಲಕ ಪರಿಶಿಷ್ಟರನ್ನು ವಂಚಿಸುತ್ತಿದ್ದವು.

ಇದೀಗ ಇಂದಿನ ಸರ್ಕಾರ ಜನತೆಯ ಒತ್ತಾಯಕ್ಕೆ ಮಣಿದು ಆ ಪಾರುಗುಂಡಿಯ 7 (ಜ)ಯನ್ನು ಈಗ ತಗೆದು ಹಾಕಿದೆ. ಆ ಮೂಲಕ ಒಂದು ಕಡೆ ದುರ್ಬಳಕೆಯಾಗದಂತೆ ಮಾಡಿದ ಇದೇ ಸರ್ಕಾರ, ಈ ಕಾಯ್ದೆಯನ್ನು ಉಲ್ಲಂಘಿಸಿ ದೊಡ್ಡ ಮೊತ್ತದ ಹಣ ಪಡೆದು ಬೇರೊಂದು ಯೋಜನೆಗೆ ಬಳಸುತ್ತಿರುವುದು ಕಾಯ್ದೆಯ ವಿರುದ್ಧವಾದ ಮತ್ತು ದಲಿತರ ಅಭಿವೃದ್ಧಿಯ ವಿರುದ್ಧವಾದ ದ್ವಂದ್ವ ನಡೆಯಾಗಿದೆ ಎಂದು ಸಿಪಿಐ(ಎಂ) ಟೀಕಿಸಿದೆ.

* * *

ನಗರ ಪ್ರದೇಶದ ಬಗರ್ ಹುಕುಂ ಸಾಗುವಳಿ ಭೂ ಬ್ಯಾಂಕ್ ನಿರ್ಧಾರಕ್ಕೆ ಖಂಡನೆ

ರಾಜ್ಯದಾದ್ಯಂತ ನಗರ ಹಾಗೂ ಪಟ್ಟಣ ಪ್ರದೇಶಗಳ ಲಕ್ಷಾಂತರ ಬಡ ಬಗರ್ ಹುಕುಂ ಸಾಗುವಳಿದಾರರಿಗೆ ಹಕ್ಕು ಪತ್ರ ನೀಡಲು ನಿರಾಕರಿಸಲಾಗಿದೆ ಮತ್ತು ಅವರ ಜಮೀನುಗಳನ್ನು ಭೂ ಬ್ಯಾಂಕ್ ಗೆ ಸೇರ್ಪಡೆ ಮಾಡಲು ಮುಂದಾಗುವುದಾಗಿ ಹೇಳಿದೆ. ಇದು ಬಡ ಸಾಗುವಳಿದಾರರ ವಿರೋಧಿ ನಿಲುಮೆಯಾಗಿದೆ ಎಂದು ಸಿಪಿಐ(ಎಂ) ಆರೋಪಿಸಿದೆ.

ಸರ್ಕಾರದ ಈ ನಿರ್ಧಾರದಿಂದಾಗಿ ಬಡ ಸಾಗುವಳಿದಾರರು ಹಲವು ದಶಕಗಳಿಂದ ಅವರ ಇಡೀ ಕುಟುಂಬ ಸಾಲ ಮಾಡಿ, ಶ್ರಮ ಹಾಕಿ, ಬರಡು ಜಮೀನುಗಳನ್ನು ಫಲವತ್ತತೆಯಿಂದ ಕೂಡಿದ ಜಮೀನುಗಳನ್ನಾಗಿ ಬದಲಾಯಿಸಿದ್ದಾರೆ. ಅದಾಗಲೇ ಸರ್ಕಾರದ ಸೂಚನೆಯಂತೆ ಹಕ್ಕುಪತ್ರಕ್ಕಾಗಿ ಫಾರಂ–50,53, ಹಾಗೂ 57 ಅರ್ಜಿ ಸಲ್ಲಿಸಿದ್ದಾರೆ. ಅವುಗಳ ವಿಲೇವಾರಿ ಆಗಬೇಕಿದೆ.

ಇದೀಗ ಬೃಹತ್ ಬೆಂಗಳೂರು ನಗರ ಸೇರಿದಂತೆ ರಾಜ್ಯದಾದ್ಯಂತ ಬಡ ರೈತರು, ಅಭಿವೃದ್ಧಿ ಪಡಿಸಿದ ತಮ್ಮ ಜಮೀನುಗಳಿಂದ ಯಾವುದೇ ಪರಿಹಾರವಿಲ್ಲದೇ ಒಕ್ಕಲೆಬ್ಬಿಸಲ್ಪಡುತ್ತಿದ್ದಾರೆ. ಈ ರೀತಿ ಬಡ ಸಾಗುವಳಿದಾರರಿಗೆ ಪರಿಹಾರವನ್ನು ನೀಡದೆ, ಸದರಿ ಜಮೀನುಗಳನ್ನು ಕೈಗಾರಿಕಾ ಮಾಲೀಕರಿಗೆ ಭೂ ಬ್ಯಾಂಕ್ ಗಳ ಮೂಲಕ ನೀಡಲು ಮುಂದಾಗುವ ಸರ್ಕಾರದ ನಡೆ ಖಂಡನೀಯವಾಗಿದೆ ಎಂದಿರುವ ಸಿಪಿಐ(ಎಂ), ಸದರಿ ಜಮೀನುಗಳ ವಿಚಾರದಲ್ಲಿ ಬಡ ಸಾಗುವಳಿದಾರರಿಗೆ ರಾಜ್ಯ ಸರಕಾರ ಮಧ್ಯ ಪ್ರವೇಶಿಸಿ ನ್ಯಾಯ ಒದಗಿಸಿಕೊಡಲು ಮುಂದಾಗಬೇಕು ಎಂದು ಒತ್ತಾಯಿಸಿದೆ.

* * *

ಅರಗ ಜ್ಞಾನೇಂದ್ರ ಬಂಧನಕ್ಕೆ ಆಗ್ರಹ

ಬಿಜೆಪಿ ಮುಖಂಡ ಮಾಜಿ ಗೃಹ ಸಚಿವರಾದ ಅರಗ ಜ್ಞಾನೇಂದ್ರರವರು, ಕಸ್ತೂರಿ ರಂಗನ್ ವರದಿಯ ವಿರುದ್ಧ ಮಾತನಾಡುವಾಗ, ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ ಕಾಡು ಬೆಳೆಸಲು ಗಮನ ನೀಡಲಿಲ್ಲವೆಂದು ಟೀಕಿಸುವ ಭರದಲ್ಲಿ, ಆ ಪ್ರದೇಶದ ಜನರನ್ನು ಮತ್ತು ನಾಯಕರನ್ನು ಬಣ್ಣದ ಆಧಾರದಲ್ಲಿ ಅಪಮಾನಿಸುವ ವ್ಯಂಗ್ಯಭರಿತ ಮಾತುಗಳನ್ನಾಡಿದ್ದಾರೆ. ಇದೊಂದು ಜಾತಿ ತಾರತಮ್ಯದ ದುರಹಂಕಾರದ ದುರ್ವರ್ತನೆಯಾಗಿದೆ ಎಂದಿರುವ ಸಿಪಿಐ(ಎಂ), ಈ ಅಪಮಾನದ ಹಾಗೂ ವರ್ಣದ ಆಧಾರದಲ್ಲಿ ಕೀಳಾಗಿ ಕಾಣುವ ಈ ಜಾತಿ ತಾರತಮ್ಯದ ದುರಹಂಕಾರವನ್ನು ಬಲವಾಗಿ ಖಂಡಿಸಿದೆ. ರಾಜ್ಯ ಸರ್ಕಾರ ಈ ಕೂಡಲೇ ಅವರ ಬಂಧನಕ್ಕೆ ಅಗತ್ಯ ಕ್ರಮವಹಿಸಬೇಕು ಎಂದು ಅದು ಒತ್ತಾಯಿಸಿದೆ.



ಅರಗ ಜ್ಞಾನೇಂದ್ರ ರಾಜ್ಯ ಗೃಹ ಮಂತ್ರಿಗಳಾಗಿ ಕಾರ್ಯ ನಿರ್ವಹಿಸಿದವರು, ದೇಶದ ಹಾಗೂ ರಾಜ್ಯದ ಕಾನೂನಿನ ಆಡಳಿತದ ನಿರ್ವಹಣೆ ಮಾಡಿದವರು. ಕಾನೂನಿನ ಮುಂದೆ ಎಲ್ಲರೂ ಸಮಾನರೆಂಬ ಭಾರತ ಸಂವಿಧಾನದ ಅರಿವನ್ನು ಹೊಂದಿರುವವರು, ಆದಾಗಲೂ, ಸಂವಿಧಾನ ಮತ್ತು ಕಾನೂನಿನ ಆಡಳಿತಕ್ಕೆ ವ್ಯತಿರಿಕ್ತವಾಗಿ ಈ ರೀತಿ ಪದ ಬಳಕೆ ಮಾಡಿರುವುದು ಅಕ್ಷಮ್ಯವಾಗಿದೆ. ಪದಗಳನ್ನು ಬಳಸುವಾಗ ಎಚ್ಚರಿಕೆಯನ್ನು ಹೊಂದಿರಬೇಕು. ಅವರು ಕೇವಲ ಕೆಲ ನಾಯಕರನ್ನು ನಿಂದಿಸಿದ್ದು ಮಾತ್ರವಲ್ಲಾ, ಇಡೀ ಕಲ್ಯಾಣ ಕರ್ನಾಟಕದ ಜನತೆಯನ್ನು ಪ್ರತ್ಯಕ್ಷವಾಗಿ ಮತ್ತು ಜಗತ್ತಿನ ಎಲ್ಲ ಕಪ್ಪು ಬಣ್ಣದ ಜನತೆಯನ್ನು ಅಪ್ರತ್ಯಕ್ಷವಾಗಿ ಅಪಮಾನಿಸಿದ್ದಾರೆ.

ಮನುವಾದ, ಜಾತಿ ಹಾಗೂ ಲಿಂಗ ತಾರತಮ್ಯವನ್ನು ಉಳಿಸಿ ಬಲವಾಗಿ ಮುನ್ನಡೆಸಲು ಕಾರ್ಯ ನಿರ್ವಹಿಸುವ ಹಿಂದುತ್ವ ಕೋಮುವಾದಿ ಮೂಲದಿಂದ ಬಂದವರ ಬಾಯಿಂದ ನಿಂದನೆ ಮತ್ತು ಅಪಮಾನಗಳಿಲ್ಲದ ಮತ್ತೆಂತ ಮಾತುಗಳನ್ನು ನಿರೀಕ್ಷಿಸಲು ಸಾಧ್ಯ? ಎಂದಿರುವ ಸಿಪಿಐ(ಎಂ), ಜಾತಿ, ಲಿಂಗ ಮತ್ತು ವರ್ಣ ತಾರತಮ್ಯದ ದುರಹಂಕಾರವನ್ನು ರಾಜ್ಯದ ಜನತೆ ಬಲವಾಗಿ ಪ್ರತಿರೋಧಿಸಬೇಕಿದೆ ಎಂದು ಸಿಪಿಐ(ಎಂ) ಜನತೆಗೆ ಕರೆ ನೀಡಿದೆ.

ಎಸ್.ಸಿ.ಪಿ. ಮತ್ತು ಟಿ.ಎಸ್.ಪಿ. ಹಣ ವರ್ಗಾವಣೆ......

ಪುಟ 3 ರಿಂದ

ದುರ್ಬಲ ವಿಭಾಗಗಳು ದುರ್ಬಲವಾಗಿ ಪ್ರತಿರೋಧ ಒಡ್ಡುವ ಜನ ವಿಭಾಗಗಳೆಂದು ಪರಿಗಣಿಸಿ ನಿರಂತರವಾಗಿ ನಿರಾತಂಕದಿಂದ ವಂಚಿಸುತ್ತಲೇ ಬರುತ್ತಿವೆ. ಕಾಟಾಚಾರಕ್ಕೆ ಆಯವ್ಯಯದ ಕೊನೆಯ ಒಂದೆರಡು ತಿಂಗಳಲ್ಲಿ ಅವಸರದಲ್ಲಿ ಹಣವನ್ನು ಬೇಕಾಬಿಟ್ಟಿ ಖರ್ಚು ಮಾಡುವುದನ್ನು ಬಿಟ್ಟರೆ ನಿರ್ದೇಶಿತ ಗುರಿ ಇರಿಸಿಕೊಂಡು ಈ ಸಮುದಾಯಗಳ ಕಲ್ಯಾಣಕ್ಕೆ ಕಟಿಬದ್ಧವಾದ ಕ್ರಿಯಾಶೀಲತೆ ಈ ದಶಕಗಳಲ್ಲಿ ಎಲ್ಲೋ ಕಂಡು ಬರಲಿಲ್ಲ. ಹಾಗಾಗಿ ಈ ಸಮುದಾಯಗಳ ಅಭಿವೃದ್ಧಿಗೆ ಮೀಸಲಾಗಿ ಇರಿಸಿರುವ ಹಣವನ್ನು ದಲಿತರು ಮತ್ತು ಆದಿವಾಸಿಗಳ ಹೆಸರೇಳಿ ಅನ್ಯ ಉದ್ದೇಶಗಳಿಗೆ ಬಳಸುತ್ತಿರುವುದು ನಿಂತಿಲ್ಲ.

ಸಾರ್ವಜನಿಕ ಪ್ರತಿರೋಧವನ್ನು ಸರಕಾರ ಲಕ್ಷಿಸಬೇಕು. ಮತ್ತು ನಿಜಕ್ಕೂ ಸಾಮಾಜಿಕ ನ್ಯಾಯಕ್ಕೆ ಬದ್ಧವಾಗಿರುವುದನ್ನು ಸಾಬೀತು ಪಡಿಸಲು ಕರ್ನಾಟಕ ಸರ್ಕಾರ ಕೂಡಲೇ ಈ ವಿಶೇಷ ಘಟಕ ಉಪ ಯೋಜನೆಗಳ ಹಣವನ್ನು ಕೂಡಲೇ ಹಿಂತಿರುಗಿಸಬೇಕು. ಈ ಸರ್ಕಾರಕ್ಕೆ ಹಣಕಾಸಿನ ಮಿತಿಗಳಿವೆ ಎನ್ನುವುದನ್ನು ಲಕ್ಷಿಸುತ್ತಲೇ ಅದಕ್ಕೆ ಪರ್ಯಾಯ ಮಾರ್ಗಗಳನ್ನು ಕಂಡುಕೊಳ್ಳಬೇಕೇ ಹೊರತು ಶೋಷಿತ ಸಮುದಾಯಗಳ ಅನ್ನಕ್ಕೆ ಕೈ ಹಾಕುವುದಲ್ಲ. ಅಭಿವೃದ್ಧಿಗೆಂದು ಮೀಸಲಿರಿಸಿದ ಹಣಕ್ಕೆ ಕನ್ನ ಹಾಕುವುದು ಯಾವ ಕಾರಣಕ್ಕೂ ಒಪ್ಪುವಂತದ್ದಲ್ಲ. ●

ಲೋಕಸಭಾ ಚುನಾವಣೆಗೆ ಆರಂಭಗೊಂಡಿರುವ......

ಪುಟ 3 ರಿಂದ

ಗೆಲ್ಲುವ ಗುರಿ – ಆಂತರಿಕ ಅತೃಪ್ತಿ

ಇತ್ತ ಕಾಂಗ್ರೆಸ್ ಪಕ್ಷ ಕರ್ನಾಟಕದಿಂದ ಕನಿಷ್ಠ 20 ಸಂಸದರನ್ನು ಆರಿಸುವ ಯೋಜನೆ ರೂಪಿಸಿದೆ ಎಂದು ವರದಿಯಾಗಿದೆ. ಸ್ವತಃ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಹೈಕಮಾಂಡ್ ಗೆ ಆ ಭರವಸೆ ನೀಡಿದ್ದಾರೆ. ಇತ್ತೀಚೆಗೆ ರಾಜ್ಯದ ಪಕ್ಷದ ಪದಾಧಿಕಾರಿಗಳು, ಸಂಸದರು, ಸಚಿವರು, ಕೆಲವು ಪ್ರಮುಖ ಶಾಸಕರನ್ನು ಒಟ್ಟು 50 ಜನರನ್ನು ದೆಹಲಿಗೆ ಕರೆಸಿಕೊಂಡು ಎರಡು ದಿನ ಸಭೆ ನಡೆಸಿದೆ. ಉತ್ತಮ ಆಡಳಿತ ನೀಡಬೇಕು ಎನ್ನುವುದನ್ನು ಹೇಳುತ್ತಲೇ ಅತ್ಯಧಿಕ ಸಂಸದರನ್ನು ಗೆಲ್ಲಿಸುವ ಗುರಿ, ತಂತ್ರ ಚರ್ಚೆ ಆಗಿದೆ. ಕೆಲವು ಸಚಿವರನ್ನು ಕಣಕ್ಕಿಳಿಸುವ ವಿಷಯವೂ ಬಂದಿದೆ. ಇದು ಸಚಿವಾಕಾಂಕ್ಷಿಗಳಿಗೆ ಉತ್ಸಾಹ ತರಲೂ ಬಹುದು! ಇನ್ನು ಚುನಾವಣಾ ಕ್ಷೇತ್ರಗಳಲ್ಲಿಯೂ ಮೆಲ್ಲನೇ ಏರಲಿದೆ ಹೊಸ ರಂಗು.

* * *

ಅತೃಪ್ತಿ ಬಹಿರಂಗಕ್ಕೆ ಬದಲಾಗಬಹುದೇ ಸಿದ್ದರಾಮಯ್ಯನವರ ಆಡಳಿತ ವೈಖರಿ


ದೆಹಲಿಯ ಸಭೆಗೆ ಮೊದಲು ಬೆಂಗಳೂರಿನಲ್ಲಿಯೂ ಕಾಂಗ್ರೆಸ್ ಸಚಿವರು, ಶಾಸಕರುಗಳಿದ್ದ ಒಂದು ಸಭೆ ನಡೆಯಿತು. ಅಲ್ಲಿಯ ಹೈಲೈಟ್ ಎಂದರೆ ಹಿರಿಯ ಶಾಸಕ ಬಿ.ಆರ್.ಪಾಟೀಲ್, ಬಸವರಾಜ ರಾಯರೆಡ್ಡಿ ಮುಂತಾದವರು ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಬರೆದಿದ್ದಾರೆ ಎನ್ನಲಾದ ಪತ್ರ. ಅದರಲ್ಲಿ 'ಆಯಾ ಕ್ಷೇತ್ರಗಳಿಗೆ ಅಧಿಕಾರಿಗಳ ವರ್ಗಾವಣೆ ತಮ್ಮ ಅಭಿಪ್ರಾಯವನ್ನು ಪರಿಗಣಿಸುತ್ತಿಲ್ಲ, ಸಚಿವರು ತಮ್ಮ ಮಾತುಗಳಿಗೆ ಕಿಮ್ಮತ್ತು ನೀಡುತ್ತಿಲ್ಲ. ಹೀಗಾದರೆ ನಾವು ಹೇಗೆ ಕೆಲಸ ಮಾಡೋದು' ಎನ್ನುವುದು ಅದರಲ್ಲಿನ ಆಕ್ಷೇಪ. ವರ್ಗಾವಣೆಗಳನ್ನು ಮುಖ್ಯಮಂತ್ರಿಗಳೇ ನಿರ್ಧರಿಸುತ್ತಿದ್ದಾರೆ ಎನ್ನುವುದೂ ಪರೋಕ್ಷ ಆರೋಪ. ಇಂತಹ ಪತ್ರವೊಂದು (ನಕಲಿ ಎಂದರು) ಮಾಧ್ಯಮಗಳಲ್ಲಿ ಹರಿದಾಡಿದ್ದು ಕಾಂಗ್ರೆಸ್ ಒಳಗಿನ ಅಸಮಾಧಾನಗಳಿಗೆ ಮತ್ತಷ್ಟು ಕಿಚ್ಚು ಹಚ್ಚಿದೆ. ಸಿದ್ದರಾಮಯ್ಯನವರು ಆ ಪತ್ರವನ್ನು ಹರಿದು ಕಸದ ಬುಟ್ಟಿಗೆ ಹಾಕಿದರೆಂದೂ, ಪತ್ರ ಬರೆದವರ ಮೇಲೆ ರೇಗಾಡಿದರೆಂದು ಹೇಳಲಾಗುತ್ತಿದೆ, ಅದರ ನಿರಾಕರಣೆಯೂ ನಡೆದಿದೆ. ಇದು ಒಂದಾದರೆ ಅದಕ್ಕೂ ಮೊದಲು ವಿಧಾನಪರಿಷತ್ ನಲ್ಲಿಯ ಪಕ್ಷದ ನಾಯಕ ಬಿ.ಕೆ.ಹರಿಪ್ರಸಾದ್ ರವರ ಬಹಿರಂಗ ಎಚ್ಚರಿಕೆಯ ಮಾತುಗಳು. ಅವು ಕೇವಲ ಮಂತ್ರಿ ಪದವಿ ಸಿಗದೇ ಇರುವ ಅತೃಪ್ತಿಯಲ್ಲಿ ಆಡಿದ ಮಾತುಗಳೆಂದು ತಿಳಿಯ ಬೇಕಿಲ್ಲ. ಇವೆಲ್ಲ ಸಿದ್ದು ಸರಕಾರದ ಆಡಳಿತ ವೈಖರಿ, ನಡೆಗಳ ಬಗ್ಗೆ ಉನ್ನತ ಮಟ್ಟದಲ್ಲಿಯೂ ತೀವ್ರ ಅತೃಪ್ತಿ ಇದೆ ಎನ್ನುವುದನ್ನು ತೋರಿಸುತ್ತವೆ. ಇದು ಸಿದ್ದರಾಮಯ್ಯ ಹಾಗೂ ಅವರ ಬಳಗಕ್ಕೆ ನೀಡಲಾದ ಎಚ್ಚರಿಕೆಯೂ ಹೌದು. ಇದರ ನಂತರದಲ್ಲೇ ದೆಹಲಿ ಸಭೆ ಆಗಿದೆ, 20ಸಂಸದರನ್ನು ಗೆಲ್ಲಿಸುವ ಭರವಸೆಯನ್ನು ಸಿದ್ದರಾಮಯ್ಯನವರು ಕೊಟ್ಟೂ ಆಗಿದೆ. ಒಂದೆಡೆ ವಿರೋಧ ಪಕ್ಷಗಳಾದ ಬಿಜೆಪಿ, ಜೆಡಿಎಸ್ ಪಕ್ಷಗಳ ಸತತ ಧಾಳಿ, ಅಪಪ್ರಚಾರ, ಮೂಲಭೂತವಾಗಿ ಬದಲಾಗದ ಕಾಂಗ್ರೆಸ್ ಸರಕಾರದ ನೀತಿಗಳು ತರುತ್ತಿರುವ ಅತೃಪ್ತಿ ಹೊಸ ಸರಕಾರವನ್ನು ಆರಿಸಿದಾಗ ಇದ್ದ ಉತ್ಸಾಹ, ಪ್ರಭಾವವನ್ನು ಮಂಕಾಗಿಸುವುದರಲ್ಲಿ ಅನುಮಾನವಿಲ್ಲ. ಅಂದರೆ ಸಿದ್ದರಾಮಯ್ಯನವರ ಸರಕಾರ ತಿದ್ದಿಕೊಳ್ಳ ಬೇಕಾದ ಹಲವು ಸಂಗತಿಗಳಿವೆ ಎಂಬುದು ನಿಶ್ಚಿತ. ●

ಮೈ ಬಣ್ಣದ ಅವಹೇಳನ ಮನುವಾದಿ ರೋಗಗ್ರಸ್ತ ಮನ ಸ್ಥಿತಿ

ಕಸ್ತೂರಿ ರಂಗದ ವರದಿ ಜಾರಿ ವಿರೋಧಿಸಿ ಇತ್ತೀಚೆಗೆ ತೀರ್ಥಹಳ್ಳಿ ಪಟ್ಟಣದಲ್ಲಿ ಬಿಜೆಪಿಯ ಪ್ರತಿಭಟನೆ ನಡೆಯುತ್ತಿದ್ದಾಗ, ಪ್ರತಿಭಟನೆಯಲ್ಲಿ ಭಾಗವಹಿಸಿದ್ದ ಬಿಜೆಪಿಯ ಮಾಜಿ ಮಂತ್ರಿ ಅರಗ ಜ್ಞಾನೇಂದ್ರ ರವರು ಎಐಸಿಸಿ ಅಧ್ಯಕ್ಷರು ಹಿರಿಯ ದಲಿತ ಮುಖಂಡರಾದ ಮಲ್ಲಿಕಾರ್ಜುನ ಖರ್ಗೆ ಅವರ ಮೈಬಣ್ಣದ ಕುರಿತು ನೀಡಿದ ಅವಹೇಳನಾಕಾರಿ ಹೇಳಿಕೆ ರಾಜ್ಯದೆಲ್ಲೆಡೆ ವ್ಯಾಪಕ ಖಂಡನೆಗೆ ಗುರಿಯಾಗಿದೆ. ಬಿಜೆಪಿಯನ್ನು ಹೊರತು ಪಡಿಸಿ ಇತರ ರಾಜಕೀಯ ಪಕ್ಷಗಳ ಮುಖಂಡರು, ಚಿಂತಕರು, ಸಾಮಾಜಿಕ ಹೋರಾಟಗಾರರು, ಶ್ರೇಣಿಕೃತ ಸಮಾಜದ ನಿರ್ಮೂಲನೆಯನ್ನು ಬಯಸುವವರು ಪ್ರತಿಭಟನೆಗಳ ಮೂಲಕ, ಪ್ರತಿಭಟನಾ ಹೇಳಿಕೆಗಳನ್ನು ನೀಡುವ ಮೂಲಕ ತಮ್ಮ ಆಕ್ರೋಶವನ್ನು ಹೊರಹಾಕಿದ್ದಾರೆ.

'ಕಲ್ಯಾಣ ಕರ್ನಾಟಕದಲ್ಲಿ ಮರಗಳಿಲ್ಲ. ನೆರಳಿಲ್ಲ, ಈ ಭಾಗದ ಜನರು ಸುಟ್ಟು ಕರಕಲಾಗಿರುತ್ತಾರೆ. ಖರ್ಗೆಯವರನ್ನು ನೋಡಿದರೆ ಇದು ಗೊತ್ತಾಗುತ್ತದೆ' ಎಂದು ಹೇಳುವ ಮೂಲಕ ಮಲ್ಲಿಕಾರ್ಜುನ ಖರ್ಗೆಯವರಿಗೆ ಬಿಜೆಪಿಯ ಮಾಜಿ ಶಾಸಕ ಹಾಗೂ ಮಾಜಿ ಗೃಹ ಸಚಿವ ಅರಗ ಜ್ಞಾನೇಂದ್ರ ಅವಮಾನಮಾಡಿದ್ದಾರೆ. ಇದು ಮಾಜಿ ಸಚಿವರ ಘನತೆಗೆ ಶೋಭೆ ತರುವ ವಿಷಯವಾಗಿಲ್ಲ. ಖರ್ಗೆಯವರ ಮೈಬಣ್ಣವನ್ನು ಅವಹೇಳನ ಮಾಡುವ ಮೂಲಕ ದಮನಿತರ ವಿರುದ್ಧದ ಅವರ ಮನಸ್ಥಿತಿಯನ್ನು ತೆರೆದಿಟ್ಟಿದ್ದಾರೆ. ಬಿಜೆಪಿಯವರು ಮನುವಾದ ಪ್ರತಿಪಾದಿಸುವ ಅನಿಷ್ಟ ಜಾತಿ ಪದ್ಧತಿಯನ್ನು ಜೀವಂತವಾಗಿರಿಸಲು ಬದ್ಧರಾಗಿದ್ದಾರೆ ಎಂಬುದಕ್ಕೆ ಇದು ಸಾಕ್ಷಿಯಾಗಿದೆ.

ದಕ್ಷಿಣ ಆಫ್ರಿಕಾದಲ್ಲಿ ವರ್ಣಭೇದ ನೀತಿಯ ವಿರುದ್ಧ ಹೋರಾಡಿದ್ದ ರಾಷ್ಟ್ರಪಿತ ಮಹಾತ್ಮ ಗಾಂಧಿಯವರು ಹುಟ್ಟಿದ ಈ ದೇಶದಲ್ಲಿ ಬಿಜೆಪಿ ವರ್ಣಭೇದ ನೀತಿಯನ್ನು ಪೋಷಿಸುತ್ತಿರುವುದು ನಿಜಕ್ಕೂ ಕಳವಳಕಾರಿ ವಿಷಯವಾಗಿದೆ. ಬಿಜೆಪಿಯ ಯಾವುದೇ ನಾಯಕರು ಅರಗ ಜ್ಞಾನೇಂದ್ರ ಅವರ ಹೇಳಿಕಕೆಯನ್ನು ಖಂಡಿಸದಿರುವುದು ಬಿಜೆಪಿಯ ರೋಗಗ್ರಸ್ತ ಮನಸ್ಥಿತಿಗೆ ಹಿಡಿದ ಕನ್ನಡಿಯಾಗಿದೆ. ಪ್ರಧಾನಿ ಮೋದಿಯವರೂ ಸಹ ಇದೇ ರೀತಿಯಲ್ಲಿ ಆಲೋಚಿಸುತ್ತಿರುವಂತೆ ಕಾಣುತ್ತದೆ. ಇಂತಹ ವರ್ಣಭೇದ ನೀತಿಯ ವಿರುದ್ಧ ಹೋರಾಡುತ್ತಾ ಬಿಳಿಯರ ಜೈಲುಗಳಲ್ಲಿ ಅನೇಕ ವರ್ಷಗಳನ್ನು ಕಳೆದು ಕೀರ್ತಿವಂತರಾದವರು ನೆಲ್ಸನ್ ಮಂಡೇಲಾ.



ಜಾತಿ ನಿಂದನೆ ಶಿಕ್ಷಾರ್ಹ ಅಪರಾಧ. ಆ ದೃಷ್ಟಿಯಿಂದ ಅರಗ ಜ್ಞಾನೇಂದ್ರರ ನಡವಳಿಕೆ ಅಪರಾಧವೇ ಆಗಿದೆ. ಈ ಶಿಕ್ಷೆ ಜಾತಿ ಪದ್ಧತಿಯನ್ನು ಬೆಂಬಲಿಸುವ ಎಲ್ಲರಿಗೂ ಪಾಠ ಆಗಬೇಕು. ಒಬ್ಬರನ್ನು ಅವರ ಮೈ ಬಣ್ಣಕ್ಕಾಗಿ ಹಿಯಾಳಿಸುವುದು ಅತ್ಯಂತ ಅವಮಾನೀಯವಾಗಿದೆ. ಕಪ್ಪು ಮೈ ಬಣ್ಣ ಒಂದು ಆಕಸ್ಮಿಕ. ಅದು ಅವರ ಆಯ್ಕೆಯಲ್ಲ. ನಮ್ಮ ದೇಶದಲ್ಲಿ ಕಪ್ಪು ಮೈ ಬಣ್ಣ ಬಿಸಿಲಲ್ಲಿ ಬೆವರು ಸುರಿಸಿ ದುಡಿಯುವ ರೈತ, ಕೂಲಿಕಾರ ಬಡ ರೈತರ ಮೈಬಣ್ಣವಾಗಿರುತ್ತದೆ. ಬಿಳಿ ವರ್ಣದವರೂ ಬಿಸಿಲಲ್ಲಿ ಕೆಲಸ ಮಾಡಿದರೆ ಕಪ್ಪು ವರ್ಣದವರಾಗುತ್ತಾರೆ. ಅವರು ಶೋಷಿತರೂ, ದಮನಿತರೂ ಆಗಿರುತ್ತಾರೆ. ಕಪ್ಪು ಮನುಜರು!

ಅವರಂತೆ ನಮ್ಮ ನಡುವೆ ಅಂಗವಿಕಲರು ಇರುತ್ತಾರೆ. ಅವರು ಅಂಗವಿಕಲರಾಗಿ ಹುಟ್ಟಲು ಏನೂ ತಪ್ಪು ಮಾಡಿರುವುದಿಲ್ಲ. ಅವರು ಅಂಗವಿಕಲರಾಗಿ ಹುಟ್ಟುವುದು ಆಕಸ್ಮಿಕ. ಅವರನ್ನು ಅವರ ದೈಹಿಕ ನ್ಯೂನತೆಗಳಿಗಾಗಿ ಅವಹೇಳನ ಮಾಡುವುದು ಅವರನ್ನು ಕುರುಡ, ಕುಂಟ ಎಂಬ ಪದಗಳಿಂದ ಕರೆದು ಮಾನಸಿಕ ಹಿಂಸೆ ನೀಡುವುದು ಮಾನವೀಯತೆಯ ಮೇಲಿನ ಹಲ್ಲೆಯಾಗಿದೆ. ಒಬ್ಬನು ಕುಂಟನಾಗಿರುವುದು, ಕುರುಡನಾಗಿರುವುದು ಆತನ ತಪ್ಪಿನಿಂದಲ್ಲ. ಅದೊಂದು ದೈಹಿಕ ನ್ಯೂನತೆ. ಆ ಕುರಿತು ಸಮಾಜ ಆತನ ಬಗ್ಗೆ ಸಹಾನುಭೂತಿ ತೋರಬೇಕು. ವ್ಯಂಗ್ಯ ಮಾಡುವುದು ಸಲ್ಲದು.

ಇದು ಮನುಷ್ಯತ್ವ ವಿರೋಧಿಯಾಗಿದೆ. ಅಮಾನುಷವಾಗಿದೆ. ಹಾಗೆಯೇ ಒಬ್ಬನ ಮೈ ಬಣ್ಣವನ್ನು ಹಿಯಾಳಿಸುವುದು, ಅವಮಾನಿಸುವುದು ಕ್ರೌರ್ಯವೇ ಆಗಿದೆ. ಈ ರೀತಿ ಒಬ್ಬರ ಅಸಹಾಯತೆಯನ್ನು, ದೈಹಿಕ ನ್ಯೂನತೆಯನ್ನು ಉಲ್ಲೇಖಿಸಿ ಅವಮಾನ ಮಾಡುವುದು, ಅಂತವರ ತೇಜೋವಧೆ ಮಾಡುವುದನ್ನು ಸಮಾಜ ಬೆಂಬಲಿಸಬಾರದು. ಅಂಗವಿಕಲರನ್ನು ವಿಶೇಷ ಚೇತನರೆಂದು ಪರಿಗಣಿಸಿ ಗೌರವದಿಂದ ಕಾಣಬೇಕು. ಖರ್ಗೆಯವರನ್ನು ಅವರ ಮೈ ಬಣ್ಣಕ್ಕಾಗಿ ನಿಂದನೆ ಮಾಡಿದ ಅರಗ ಜ್ಞಾನೇಂದ್ರರ ವಿರುದ್ಧ ಜಾತಿ ನಿಂದನೆಯ ಕಾನೂನು ವ್ಯಾಪ್ತಿಯಲ್ಲಿ ಬಂಧಿಸಿ ಕಾನೂನು ಕ್ರಮ ಜರಗಿಸಲು ರಾಜ್ಯ ಸರ್ಕಾರ ಹಿಂದೇಟು ಹಾಕಬಾರದು. ಅನೇಕ ಸಲ ನಮ್ಮ ಹೆಣ್ಣುಮಕ್ಕಳು ತಮ್ಮ ಕಪ್ಪು ಮೈ ಬಣ್ಣದಿಂದಾಗಿ ಮದುವೆ ಮಾಡಿಕೊಳ್ಳಲಾಗದೆ ಪರಿತಪ್ಪಿಸುತ್ತಿರುತ್ತಾರೆ. ಮದುವೆಯಾಗಬೇಕಾದ ವಯಸ್ಸಿನಲ್ಲಿ ಮದುವೆ ಮಾಡಿಕೊಳ್ಳಲಾಗದೆ ಕೆಲವೊಮ್ಮೆ ಆತ್ಮಹತ್ಯೆಗೆ ಮುಂದಾಗುತ್ತಾರೆ. ಈ ಅನಿಷ್ಟ ವ್ಯವಸ್ಥೆ ಬದಲಾಗಬೇಕು.

–ನಿತ್ಯಾನಂದಸ್ವಾಮಿ

ಏಂಗೆಲ್ಸ್ ಅವರ ಬರಹಗಳಲ್ಲಿ ಭಾರತ

ಪುಟ 2 ರಿಂದ

ನಿಜವಾಗಿಯೂ ಮಹಾನ್ ಮಿಲಿಟರಿ ತಜ್ಞರು! ಏಂಗೆಲ್ಸ್ ಭಾರತದಲ್ಲಿನ ಬ್ರಿಟಿಷ್ ಪತ್ರಕರ್ತರ ಅಧಿಕೃತ ಬರಹಗಳನ್ನು ವಿಮರ್ಶಾತ್ಮಕವಾಗಿ ಅನುಸಂಧಾನ ಮಾಡಿದರು. ಆದಾಗ್ಯೂ, ಆ ಹಂತದಲ್ಲಿ ಬಂಡಾಯದ ಬಗ್ಗೆ ಬ್ರಿಟನ್‌ನಲ್ಲಿ ಚಲಾವಣೆಯಲ್ಲಿರುವ ದಾಖಲೆಗಳು ಇವು ಮಾತ್ರ ಎಂಬುದನ್ನು ನಾವು ನೆನಪಿನಲ್ಲಿಡಬೇಕು. ಇವುಗಳನ್ನು ಅಧ್ಯಯನ ಮಾಡಿದ ನಂತರವೇ ಏಂಗೆಲ್ಸ್ ತನ್ನ ಪ್ರಬಂಧಗಳನ್ನು ಬರೆಯಬೇಕಾಗಿತ್ತು. ಆಧುನಿಕ ಶಸ್ತ್ರಾಸ್ತ್ರಗಳೊಂದಿಗೆ ಮಿಲಿಟರಿ ಸಜ್ಜುಗೊಂಡ ಬ್ರಿಟಿಷ್ ಅಧಿಕಾರಿಗಳು, ಸರಿಯಾದ ಕಾರ್ಯತಂತ್ರದ ಕೊರತೆ ಮತ್ತು ಬಂಡಾಯಗಾರರ ನಡುವಿನ ಗೊಂದಲ ಮತ್ತು ಕೇಂದ್ರೀಕೃತ ಆಜ್ಞೆಯ ಕೊರತೆ, ಇದು ಬಂಡಾಯದ ವೈಫಲ್ಯಕ್ಕೆ ಪ್ರಮುಖ ಕಾರಣವಾಗಿತ್ತು ಎಂದು ಏಂಗೆಲ್ಸ್ ಉಲ್ಲೇಖಿಸುತ್ತಾರೆ.

ದಂಗೆಯನ್ನು ದಮನ ಮಾಡಿದ ನಂತರ ಬ್ರಿಟಿಷರು ನಡೆಸಿದ ಕ್ರೂರ ದಮನ ಮತ್ತು ಲೂಟಿಯನ್ನು ಏಂಗೆಲ್ಸ್ ಬಲವಾಗಿ ಟೀಕಿಸುತ್ತಾರೆ. ಈ ಭಾಗದ ಎಲ್ಲಾ ಭೂಮಿಯನ್ನು ವಶಪಡಿಸಿಕೊಂಡಿರುವ ಕ್ಯಾನ್ನಿಂಗ್ ವರದಿಯನ್ನು ಅವರು ತೀವ್ರವಾಗಿ ಖಂಡಿಸಿದರು. ಬ್ರಿಟಿಷರ ಆಳ್ವಿಕೆಯು ಈ ಕಾಯ್ದೆಯ ಮೂಲಕ ಪ್ರತಿ ಪ್ರತಿಯೊಂದು ಸಣ್ಣ ಭೂಮಿಯನ್ನು ಸಹ ಜನರಿಂದ ಕಸಿದುಕೊಂಡಿತು. ಲಕ್ನೋದಲ್ಲಿ ಮತ್ತು ಅದಕ್ಕೂ ಮೊದಲು ದೆಹಲಿಯಲ್ಲಿ ಬ್ರಿಟಿಷರ ಲೂಟಿಯನ್ನು ಏಂಗೆಲ್ಸ್ ಬಲವಾಗಿ ಖಂಡಿಸುತ್ತಾರೆ. ಬ್ರಿಟಿಷ್ ನಿಯತಕಾಲಿಕದ 1870 ರ ಲೇಖನದಲ್ಲಿ, 1857 ರ ಬಂಡಾಯವನ್ನು ನಿಗ್ರಹಿಸಿದ ನಂತರ ಬ್ರಿಟಿಷ್ ಸೈನ್ಯವು ಕೈದಿಗಳನ್ನು ಗುಂಡು ಹಾರಿಸುವ ಮೂಲಕ ಯುದ್ಧದ ನಿಯಮಗಳ ಉಲ್ಲಂಘನೆಯಾಗಿದೆ ಎಂದೂ ಅವರು ತಿಳಿಸಿದ್ದಾರೆ.

ಏಂಗೆಲ್ಸ್ ಬಂಡಾಯಗಾರರ ಬಗ್ಗೆ ಅಪಾರ ಸಹಾನುಭೂತಿ ಮತ್ತು ಬೆಂಬಲವನ್ನು ಹೊಂದಿದ್ದರು. ಅದಕ್ಕಾಗಿಯೇ ಅವರು ಯುದ್ಧಭೂಮಿಯಲ್ಲಿ ಮಾಡಿದ ಕೆಲವು ತಪ್ಪುಗಳಿಂದ ಕೋಪಗೊಂಡರು. ತೆರೆದ ಯುದ್ಧಭೂಮಿಯಲ್ಲಿನ ಸೋಲಿನ ನಂತರ ದಂಗೆಕೋರರು ಗೆರಿಲ್ಲಾ ಯುದ್ಧವನ್ನು ಆಶ್ರಯಿಸುತ್ತಾರೆ ಎಂದು ಜೂನ್ 1858 ರಲ್ಲಿ ಅವರು ನಿರೀಕ್ಷಿಸಿದರು. ಏಕೆಂದರೆ ಕ್ಷೇತ್ರದಲ್ಲಿ ಇನ್ನೂ 1,50,000 ಬಂಡಾಯಗಾರರಿದ್ದರು. ಮತ್ತು ಆ ರಾಷ್ಟ್ರೀಯ ಬಂಡಾಯದಲ್ಲಿ ಬಂಡುಕೋರರು ಜನರ ಬೆಂಬಲವನ್ನು ಹೊಂದಿದ್ದರು. ಬ್ರಿಟಿಷ್ ಪಡೆಗಳು ಸಾಮಾನ್ಯ ಜನರಿಂದ ಯಾವುದೇ ಸಹಾಯ ಅಥವಾ ಮಾಹಿತಿಯನ್ನು ಪಡೆಯಲು ಸಾಧ್ಯವಾಗಲಿಲ್ಲ. ಮುಂದಿನ ತಿಂಗಳು ಅವರು ಬರೆದ ಪ್ರಬಂಧದಲ್ಲಿ, ಭಾರತೀಯ ಜನರು ಬಿಳಿಯರ ಆಕ್ರಮಣಕಾರರನ್ನು ದ್ವೇಷಿಸುತ್ತಾರೆ. ಆದರೆ ಬಂಡಾಯಗಾರರು ತಮ್ಮ ಯುದ್ಧವನ್ನು ವಿಸ್ತರಿಸದಿದ್ದರೆ ಹತ್ತಿಕ್ಕುವ ಅಪಾಯವಿದೆ ಎಂದು ಅವರು ನಿರ್ಣಯಿಸಿದರು.

ಭಾರತದ ಜನರ ಮೇಲೆ ಅದಮ್ಯ ನಂಬಿಕೆ


ಬಂಡಾಯದ ಸೋಲಿನ ನಂತರವೂ ಏಂಗೆಲ್ಸ್ ಭರವಸೆಯನ್ನು ಬಿಡಲಿಲ್ಲ. ದಂಗೆಯ ಕುರಿತಾದ ಒಂದು ಸಮಾಪ್ತಿಯ ಪ್ರಬಂಧದಲ್ಲಿ ಅವರು ಹೀಗೆ ಬರೆದಿದ್ದಾರೆ: "ಬಂಗಾಳದಿಂದ ಸೈನ್ಯದ ದಂಗೆಯಿಂದ ಪ್ರಾರಂಭವಾದ ಮಹಾ ದಂಗೆಯು ಶೀಘ್ರದಲ್ಲೇ ಕೊನೆಗೊಳ್ಳಲಿದೆ ಎಂದು ತೋರುತ್ತದೆ. ಆದರೆ ಈ ಎರಡನೇ ಗೆಲುವಿನಿಂದ ಇಂಗ್ಲೆಂಡ್ ಭಾರತೀಯರ ಮನ ಗೆಲ್ಲಲಿಲ್ಲ. ಸ್ಥಳೀಯ ಭಾರತೀಯ ಸೈನಿಕರು ಕೆಲವು ದುಷ್ಕೃತ್ಯಗಳನ್ನು ಎಸಗಿದ್ದಾರೆ ಎಂಬ ಉತ್ಪ್ರೇಕ್ಷಿತ ಮತ್ತು ಸುಳ್ಳು ವರದಿಗಳ ಆಧಾರದ ಮೇಲೆ ಬ್ರಿಟಿಷ್ ಪಡೆಗಳ ಪ್ರತೀಕಾರದ ದಾಳಿಗಳು ಮತ್ತು ಬಂಡಾಯಗಾರರ ದೊಡ್ಡ ಮತ್ತು ಸಣ್ಣ ಗೆಲುವುಗಳು ವಿಜಯಶಾಲಿಗಳ ಬಗ್ಗೆ ಭಾರತೀಯರಲ್ಲಿ ಯಾವುದೇ ಸಕಾರಾತ್ಮಕ ಪ್ರತಿಕ್ರಿಯೆಯನ್ನು ಉಂಟುಮಾಡಲಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ, ಹಿಂದೂಗಳು ಮತ್ತು ಮುಸ್ಲಿಮರು ರುಮೆ ಕ್ರಿಶ್ಚಿಯನ್ ಆಕ್ರಮಣಕಾರರ ವಿರುದ್ಧ ಅಭೂತಪೂರ್ವ ದ್ವೇಷವನ್ನು ಹೊಂದಿದ್ದಾರೆ ಎಂದು ಬ್ರಿಟಿಷ್ ಮಿಲಿಟರಿ ಹೇಳುತ್ತದೆ."

1882 ರಲ್ಲಿ, 1857 ರ ಬಂಡಾಯದ 25 ನೇ ವಾರ್ಷಿಕೋತ್ಸವದ ಮೊದಲು, ಏಂಗಲ್ಸ್ ಭಾರತೀಯ ಕ್ರಾಂತಿಯ ಕುರಿತು ನಿರ್ಣಯಿಸಿದರು. ಕಾರ್ಲ್ ಕೌತ್ಸಿಕ್ ಅವರಿಗೆ ಬರೆದ ಪತ್ರವೊಂದರಲ್ಲಿ ಅವರು ಹೇಳಿದರು: "ಭಾರತವು ಖಂಡಿತವಾಗಿಯೂ ಕ್ರಾಂತಿಯ ಸಾಧ್ಯತೆಯನ್ನು ಹೊಂದಿದೆ. ಬ್ರಿಟನ್‌ನ ಕಾರ್ಮಿಕ ವರ್ಗವು ತನ್ನ ಸ್ವ–ವಿಮೋಚನೆಯ ಪ್ರಯಾಣದಲ್ಲಿ ವಸಾಹತುಶಾಹಿ ಯುದ್ಧವನ್ನು ನಡೆಸಲು ಸಾಧ್ಯವಿಲ್ಲ. ಆದ್ದರಿಂದ ಭಾರತೀಯ ಕ್ರಾಂತಿಯು ತನ್ನ ಧ್ಯೇಯವನ್ನು ಪೂರ್ಣಗೊಳಿಸಲು ಅವಕಾಶ ನೀಡಬೇಕು. ಆದಾಗ್ಯೂ, ಈ ಕ್ರಾಂತಿಯು ಯಾವುದೇ ವಿನಾಶವಿಲ್ಲದೆ (ಹಿಂಸೆ ಇಲ್ಲದೆ) ಸಂಭವಿಸುತ್ತದೆ ಎಂದು ಹೇಳಲಾಗುವುದಿಲ್ಲ. ಆದರೆ ಅಂತಹ ವೈಶಿಷ್ಟ್ಯಗಳು ಯಾವುದೇ ಕ್ರಾಂತಿಯಿಂದ ಬೇರ್ಪಡಿಸಲಾಗದವು! ಈ ಮೌಲ್ಯಮಾಪನವನ್ನು ಬರೆದ 66 ವರ್ಷಗಳ ನಂತರ ಭಾರತ ಸ್ವತಂತ್ರವಾಯಿತು. ಏಂಗೆಲ್ಸ್‌ನ ಮೌಲ್ಯಮಾಪನವು ಭಾರತೀಯರ ವಿಮೋಚನೆಯ ದಾಹದ ಅಚಲವಾದ ನಂಬಿಕೆಯ ಮೇಲೆ ಆಧಾರಿತವಾಗಿತ್ತು! ಏಂಗೆಲ್ಸ್ ಅವರ ಬರಹಗಳಲ್ಲಿ ಬ್ರಿಟಿಷ್ ಕಾರ್ಮಿಕ ವರ್ಗವು ಭಾರತದ ಸ್ವಾತಂತ್ರ್ಯವನ್ನು ವಿರೋಧಿಸಬಾರದು ಎಂಬ ಸೂಚನೆಗಳನ್ನು ಮತ್ತು ಎಚ್ಚರಿಕೆಗಳನ್ನು ಒಳಗೊಂಡಿದೆ ಎಂಬುದನ್ನು ನಾವು ಗಮನಿಸಬೇಕು.

ಅನು:ಸಿಚಿ

ಬ್ರಿಟೀಷರು ಭಾರತವನ್ನು ವಸಾಹತುವನ್ನಾಗಿ ಮಾಡಿಕೊಳ್ಳಲು ಮುಖ್ಯ ಕಾರಣವೆಂದರೆ ಇಲ್ಲಿಂದ ಸರಕುಗಳನ್ನು ತಮ್ಮ ದೇಶಗಳಿಗೆ ಆಮದು ಮಾಡಿಕೊಳ್ಳುವುದು! ತಮ್ಮ ದೇಶಗಳಿಂದ ಭಾರತಕ್ಕೆ ರಫ್ತು ಮಾಡಲು ಅಲ್ಲ! ಆದಾಗ್ಯೂ, ಭಾರತದ ಅನೇಕ ಭಾಗಗಳ ಆವಿಷ್ಕಾರ ಮತ್ತು ಅವುಗಳನ್ನು ವಶಪಡಿಸಿಕೊಂಡ ನಂತರ ಪರಿಣಾಮಗಳ ಸರಣಿಯನ್ನು ಸೃಷ್ಟಿಸಿತು. ಭಾರತದಿಂದ ಆಮದು ಮಾಡಿಕೊಳ್ಳುವುದು ಮಾತ್ರವಲ್ಲದೆ ಭಾರತಕ್ಕೆ ಅದರ ಉತ್ಪನ್ನಗಳನ್ನು ರಫ್ತು ಮಾಡುವುದು ಮುಖ್ಯ ಉದ್ದೇಶವಾಯಿತು. ಇದರ ಪರಿಣಾಮವಾಗಿ, ಇಂಗ್ಲೆಂಡಿನ ಆರ್ಥಿಕ ರೂಪಾಂತರ ಮತ್ತು ಅದಕ್ಕೆ ಅನುಗುಣವಾದ ಕೈಗಾರಿಕಾ ಕ್ರಾಂತಿಯು ಈ ರಫ್ತುಗಳ ಜೊತೆಯಲ್ಲಿ ವಿಕಸನಗೊಂಡಿತು. ಈಗ ಭಾರತ ಮತ್ತು ಇತರ ವಸಾಹತುಶಾಹಿ ರಾಷ್ಟ್ರಗಳು ಕೈಗಾರಿಕಾ ಬೆಳವಣಿಗೆಯನ್ನು ಕಂಡ ಬ್ರಿಟನ್‌ಗೆ ವಿಶೇಷ ಮಾರುಕಟ್ಟೆಯಾಗಿ ಕಾರ್ಯನಿರ್ವಹಿಸಬೇಕಾಯಿತು.

ಜಮ್ಮು–ಕಾಶ್ಮೀರದಲ್ಲಿ ಚುನಾಯಿತ ಆಡಳಿತವಿಲ್ಲದ ಐದು ವರ್ಷಗಳು





ಜಮ್ಮು ಮತ್ತು ಕಾಶ್ಮೀರದಲ್ಲಿ ಮಾನವ ಹಕ್ಕುಗಳ ವೇದಿಕೆ ಆಗಸ್ಟ್ 3ರಂದು ದಿಲ್ಲಿಯಲ್ಲಿ ತನ್ನ ನಾಲ್ಕನೇ ವರದಿಯನ್ನು ಬಿಡುಗಡೆ ಮಾಡಿತು. 'ಒಂದು ಚುನಾಯಿತ ಆಡಳಿತವಿಲ್ಲದ ಐದು ವರ್ಷಗಳು' ಎಂಬುದು ಈ ವರದಿಯ ಶಿರೋನಾಮೆ. ಇದರ ಬಿಡುಗಡೆಯ ಸಭೆಯನ್ನುದ್ದೇಶಿಸಿ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿ, ಕೇಂದ್ರ ಸಮಿತಿ ಸದಸ್ಯ ಯುಸುಫ್ ತರಿಗಾಮಿ, ಆರ್‌ಜೆಡಿಯ ಮನೋಜ್ ಝಾ, ಡಿಎಂಕೆಯ ಕನ್ನಿಮೋಳಿ, ಎನ್‌ಸಿಪಿ ಯ ಸುಪ್ರಿಯಾ ಸುಳೆ, ಕಾಂಗ್ರೆಸಿನ ಶಶಿ ತರೂರ್, ನ್ಯಾಷನಲ್ ಕಾನ್ಫರೆನ್ಸಿನ ಡಾ. ಫಾರೂಕ್ ಅಬ್ದುಲ್ಲ ಮತ್ತು ಮಾಜಿ ಕೇಂದ್ರ ಮಂತ್ರಿ ಯಶವಂತ ಸಿನ್ಹಾ ಮಾತಾಡಿದರು.

ಕೇಂದ್ರವು ಸುಪ್ರಿಂ ಕೋರ್ಟಿಗೆ ಸಲ್ಲಿಸಿದ ಅಫಿಡವಿಟ್‌ನಲ್ಲಿ ಹೇಳಿದ್ದಕ್ಕೆ ವ್ಯತಿರಿಕ್ತವಾಗಿ ಇಲ್ಲಿಯ ಜನ ಹೆಚ್ಚುತ್ತಿರುವ ಹಿಂಸಾಚಾರದ ಸುರುಳಿಯಲ್ಲಿ ನಲುಗುತ್ತಿದ್ದಾರೆ ಎಂದು ಈ ವರದಿ ಸಾರ್ವಜನಿಕರಿಗೆ ಮತ್ತು ಸರಕಾರಕ್ಕೆ ನೆನಪಿಸಿದೆ.

ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಸಂಸತ್ತು ವಿಸರ್ಜಿಸಿ 5 ವರ್ಷಗಳಾಗಿವೆ. ಎಲ್ಲವೂ ಸಾಮಾನ್ಯವಾಗಿದೆ, ಶಾಂತಿ ನೆಲೆಸಿದೆ, ಆರ್ಥಿಕ ಸಮೃದ್ಧಿಯಿದೆ ಎಂದೆಲ್ಲ ಮೋದಿ ಸರಕಾರ ಹೇಳಿಕೊಳ್ಳುತ್ತಿದೆ. ಹಾಗಿದ್ದರೆ ಜಮ್ಮು ಮತ್ತು ಕಾಶ್ಮೀರ ಮತ್ತು ಲಡಾಕಿನಲ್ಲಿ ಚುನಾವಣೆಗಳು ನಡೆದಿಲ್ಲ ಏಕೆ? ಮೋದಿಯವರು 'ಪ್ರಜಾಪ್ರಭುತ್ವದ ಮಾತೆ' ಎಂದೆಲ್ಲ ಹೇಳುತ್ತಾರೆ, ಆದರೆ ಚುನಾವಣೆಗಳನ್ನು ನಡೆಸಲು ನಿರಾಕರಿಸುತ್ತಾರೆ ಎಂದು ಸೀತಾರಾಂ ಯೆಚುರಿ ಈ ಸಂದರ್ಭದಲ್ಲಿ ಟಿಪ್ಪಣಿ ಮಾಡಿದ್ದಾರೆ.

ಜಮ್ಮು ಮತ್ತು ಕಾಶ್ಮೀರದಲ್ಲಿ ಮಾನವ ಹಕ್ಕುಗಳ ವೇದಿಕೆ ಯ ಒಬ್ಬ ಸದಸ್ಯರಾಗಿರುವ ಮತ್ತು ಜಮ್ಮು ಮತ್ತು ಕಾಶ್ಮೀರದ ವಿಷಯದಲ್ಲಿ ಆಳವಾದ ಅಧ್ಯಯನ ಮಾಡಿರುವ ರಾಧಾ ಕುಮಾರ್ ವೇದಿಕೆಯ ವರದಿಯನ್ನು ಸಭೆಯಲ್ಲಿ ಪ್ರಸ್ತುತ ಪಡಿಸಿದರು. ಈ ಬಗ್ಗೆ 'ನ್ಯೂಸ್‌ಕ್ಲಿಕ್' ವೆಬ್ ಪತ್ರಿಕೆಯೊಂದಿಗೆ ಮಾತಾಡುತ್ತ ಅವರು ಕೇಂದ್ರದ ಧೋರಣೆಗಳು ಜನಗಳ ಮೇಲಿನ ಮಾನಸಿಕ ಮತ್ತು ದೈಹಿಕ ಹಿಂಸಾಚಾರವನ್ನು ಶಮನಗೊಳಿಸುವ ಬದಲು, ಅವನ್ನು ಹೆಚ್ಚಿಸುತ್ತಿವೆ ಎಂದಿದ್ದಾರೆ. ಗಮನಾರ್ಹ ಸಂಗತಿಯೆಂದರೆ, ಹದಿಹರೆಯದವರ ಅಪರಾಧಗಳು ಹೆಚ್ಚುತ್ತಿವೆ, ಇದಕ್ಕೂ ನಿರುದ್ಯೋಗಕ್ಕೂ ನೇರ ಸಂಬಂಧವಿದೆ. ಖಾಲಿ ಹುದ್ದೆಗಳನ್ನು ತುಂಬಲು ಕೂಡ ಉಪರಾಜ್ಯಪಾಲರು ಏನೂ ಮಾಡುತ್ತಿಲ್ಲ. ಬಹುಶಃ ಕೇಂದ್ರ ಗೃಹಮಂತ್ರಾಲಯ ಕಠಿಣ ಷರತ್ತುಗಳನ್ನು ಹೇರಿರುವುದರಿಂದಾಗಿ ಸ್ಥಳೀಯ ಆಡಳಿತ ಸೇವೆಗಳಲ್ಲಿ ಗಮನಾರ್ಹ ಸಂಖ್ಯೆಯಲ್ಲಿ ನೌಕರರನ್ನು ತೆಗೆದು ಹಾಕಲಾಗಿದೆ ಎಂದು ಅವರು ಹೇಳಿದರು.

ಕಾಶ್ಮೀರ ಕಣಿವೆಯ ಜನರು ಕಲಮು 370ರ ರದ್ದತಿಯನ್ನು ವಿರೋಧಿಸಿದರೂ ಜಮ್ಮು ಪ್ರದೇಶದ ಜನರು ಅದನ್ನು ಸ್ವಾಗತಿಸಿದರು, ವಿಧಾನಸಭಾ ಕ್ಷೇತ್ರಗಳ ಮರುವಿಂಗಡಣೆಯಿಂದಾಗಿ ಅದರ ಸ್ಥಾನಗಳು ಹೆಚ್ಚಾದುದನ್ನೂ ಸ್ವಾಗತಿಸಿದರು ಎಂದು ಹೇಳಲಾಗಿದೆ. ಆದರೆ ಈಗ ಅಲ್ಲಿನ ನಿವಾಸಿಗಳೂ ಈ ಪ್ರಕ್ರಿಯೆಯನ್ನು ಟೀಕಿಸುತ್ತಿದ್ದಾರೇಕೆ ಎಂಬ ಪ್ರಶ್ನೆಗೆ ಉತ್ತರಿಸುತ್ತ ರಾಧಾ ಕುಮಾರ್ ಉಪರಾಜ್ಯಪಾಲರ ಆಳ್ವಿಕೆಯಲ್ಲಿ ಬಂದಿರುವ ನಿವಾಸಿ ಮತ್ತು ಭೂಮಿ ನಿಯಮಗಳಲ್ಲಿ ಬದಲಾವಣೆ ಕಾಶ್ಮೀರ ಕಣಿವೆಗಿಂತ ಜಮ್ಮುವಿನ ಜನರನ್ನೇ ಹೆಚ್ಚು ಬಾಧಿಸಿದೆ ಎಂದು ಹೇಳಿದರು. ಸಂಸತ್ತಿನಲ್ಲಿ ಪ್ರಸಕ್ತ ಅಧಿವೇಶನದಲ್ಲಿ ಕೇಂದ್ರ ಸರಕಾರ ಪಾಸುಮಾಡಿಸಿಕೊಳ್ಳಬೇಕೆಂದಿರುವ ಹೊಸ ಮಸೂದೆಗಳು, ಸಂವಿಧಾನ(ಜಮ್ಮು ಮತ್ತು ಕಾಶ್ಮೀರ) ಪರಿಶಿಷ್ಟ ಬುಡಕಟ್ಟುಗಳು ಆದೇಶ(ತಿದ್ದುಪಡಿ) ಮಸೂದೆ ಪಹಾಡಿ ಬುಡಕಟ್ಟಿನವರನ್ನು ಗುಜ್ಜರ್‌ಗಳು ಮತ್ತು ಬಕರ್‌ವಾಲ್‌ಗಳ ವಿರುದ್ಧ ಎತ್ತಿ ಕಟ್ಟುತ್ತದೆ ಎಂದು ಅವರು ಹೇಳಿದರು.

ಜಮ್ಮು ಮತ್ತು ಕಾಶ್ಮೀರದಲ್ಲಿ ಪ್ರಜಾಪ್ರಭುತ್ವವನ್ನು ಮತ್ತೆ ಸ್ಥಾಪಿಸಬೇಕು, ವಿಧಾನಸಭೆಗೆ ಚುನಾವಣೆಗಳನ್ನು ತಕ್ಷಣವೇ ನಡೆಸಬೇಕು – ಸಿಪಿಐ(ಎಂ) ಕೇಂದ್ರ ಸಮಿತಿ ಆಗ್ರಹ

ಕಲಮು 370 ರ ಅಡಿಯಲ್ಲಿ ಜಮ್ಮು ಮತ್ತು ಕಾಶ್ಮೀರದ ವಿಶೇಷ ಸ್ಥಾನಮಾನವನ್ನು ರದ್ದುಪಡಿಸಿ ಹಾಗೂ ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಕಳಚಿ ಹಾಕಿ ಆಗಸ್ಟ್ 5, 2023 ಕ್ಕೆ ನಾಲ್ಕು ವರ್ಷಗಳು ಪೂರ್ಣಗೊಂಡಿವೆ. ಸಂವಿಧಾನ ಮತ್ತು ಒಕ್ಕೂಟತತ್ವದ ಮೇಲಿನ ಈ ದಾಳಿಯು ಜಮ್ಮು ಮತ್ತು ಕಾಶ್ಮೀರದಲ್ಲಿ ನಾಗರಿಕರ ಹಕ್ಕುಗಳ ಮೇಲೆ ಸರ್ವಾಂಗೀಣ ದಾಳಿಯ ಮುನ್ಸೂಚನೆಯಾಗಿತ್ತು. ಇದುವರೆಗೂ ಅಲ್ಲಿಯ ವಿಧಾನಸಭೆಗೆ ಚುನಾವಣೆಗಳನ್ನು ನಡೆಸದಿರುವುದರಲ್ಲಿ ಪ್ರಜಾಪ್ರಭುತ್ವದ ಮತ್ತು ಪ್ರಜಾಸತ್ತಾತ್ಮಕ ಹಕ್ಕುಗಳ ಈ ಮೂಲಭೂತ ನಿರಾಕರಣೆ ಎದ್ದು ಕಾಣುತ್ತಿದೆ. ಕಳೆದ ನಾಲ್ಕು ವರ್ಷಗಳಲ್ಲಿ ಎಲ್ಲಾ ರೀತಿಯಲ್ಲೂ, ಜಮ್ಮು ಮತ್ತು ಕಾಶ್ಮೀರದ ಜನತೆಯನ್ನು ಎರಡನೇ ದರ್ಜೆಯ ನಾಗರಿಕರ ಮಟ್ಟಕ್ಕೆ ಇಳಿಸಲಾಗಿದೆ. ಆದ್ದರಿಂದ, ಜಮ್ಮು ಮತ್ತು ಕಾಶ್ಮೀರ ವಿಧಾನಸಭೆಗೆ ತಕ್ಷಣವೇ ಚುನಾವಣೆ ನಡೆಸಬೇಕೆಂದು ಸಿಪಿಐ(ಎಂ) ಕೇಂದ್ರ ಸಮಿತಿಯು ಒತ್ತಾಯಿಸಿದೆ.

ನವದೆಹಲಿಯಲ್ಲಿ ಆಗಸ್ಟ್ 4ರಿಂದ ಸಿಪಿಐ(ಎಂ) ಕೇಂದ್ರ ಸಮಿತಿಯ3 ದಿನಗಳ ಸಭೆ ನಡೆಸುತ್ತಿದ್ದು, ಆಗಸ್ಟ್ 5ರಂದು ಈ ಕುರಿತು ಒಂದು ನಿರ್ಣಯವನ್ನು ಅಂಗೀಕರಿಸಿದೆ.

ಅದರ ಪೂರ್ಣಪಾಟವನ್ನು ಈ ಮುಂದೆ ಕೊಡಲಾಗಿದೆ:

ಕೇಂದ್ರದ ಆಳ್ವಿಕೆಯ ಅಡಿಯಲ್ಲಿ ಕಳೆದ ಐದು ವರ್ಷಗಳಲ್ಲಿ ವಾಸಸ್ಥಳ ಕಾನೂನುಗಳು ಮತ್ತು ಭೂಮಿಯ ಹಕ್ಕುಗಳ ಬದಲಾವಣೆಯೊಂದಿಗೆ ಜಮ್ಮು ಮತ್ತು ಕಾಶ್ಮೀರದ ಅಸ್ಮಿತೆಯನ್ನೇ ಬದಲಾಯಿಸುವ ಕ್ರಮಗಳು ಕಾಣಬಂದಿವೆ. ರಾಜ್ಯದ ಜನಸಂಖ್ಯಾಸ್ವರೂಪವನ್ನು ಬದಲಾಯಿಸಲು ಎಡೆಬಿಡದ ಪ್ರಯತ್ನ ನಡೆದಿದೆ.

ಸಾರ್ವಜನಿಕ ಸುರಕ್ಷತಾ ಕಾಯಿದೆ ಮತ್ತು ಯುಎಪಿಎಯಂತಹ ಕರಾಳ ಕಾನೂನುಗಳನ್ನು ಬಳಸಿಕೊಂಡು ದೊಡ್ಡ ಪ್ರಮಾಣದಲ್ಲಿ ರಾಜಕೀಯ ನಾಯಕರು ಮತ್ತು ಕಾರ್ಯಕರ್ತರ ದೊಡ್ಡ ಬಂಧನಗಳು ಈ ಅವಧಿಯಲ್ಲಿ ನಡೆದಿವೆ. ನೂರಾರು ರಾಜಕೀಯ ಕೈದಿಗಳು ಇನ್ನೂ ಬಂಧನದಲ್ಲಿದ್ದಾರೆ, ಅವರಲ್ಲಿ ಹಲವರು ಜಮ್ಮು ಮತ್ತು ಕಾಶ್ಮೀರದ ಹೊರಗಿನ ಜೈಲುಗಳಲ್ಲಿದ್ದಾರೆ.

ದೊಡ್ಡ–ದೊಡ್ಡ ದಾವೆಗಳೇನೇ ಇದ್ದರೂ, ಆರ್ಥಿಕ ಪರಿಸ್ಥಿತಿಯು ಹದಗೆಟ್ಟಿದೆ, ನಿರುದ್ಯೋಗ ಹೆಚ್ಚಿದೆ, ಇದು ರಾಷ್ಟ್ರೀಯ ಸರಾಸರಿಯ ಮೂರು ಪಟ್ಟು ಎಂದು ಅಂದಾಜಿಸಲಾಗಿದೆ. ಸೇಬು ಬೆಳೆಗಾರರು ಮತ್ತು ಸಣ್ಣ ವ್ಯಾಪಾರ–ವ್ಯವಹಾರಗಳನ್ನು ನಡೆಸುವವರು ಮುಂತಾದ ವಿವಿಧ ಜನವಿಭಾಗಗಳ ಜೀವನೋಪಾಯದ ಮೇಲೆ ಪ್ರತಿಕೂಲ ಪರಿಣಾಮ ಉಂಟಾಗಿದೆ.

ಮಾಧ್ಯಮಗಳು ಪ್ರಭುತ್ವದ ತೀವ್ರ ದಬ್ಬಾಳಿಕೆಯನ್ನು ಎದುರಿಸುತ್ತಿವೆ. ಸೆನ್ಸಾರ್ ಶಿಪ್ ಹೇರುವ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಕಡಿವಾಣ ಹಾಕುವ ಮಾರ್ಗಸೂಚಿಗಳನ್ನು ಹೇರಲಾಗಿದೆ. ವಿವಿಧ ಪತ್ರಕರ್ತರು ಕರಾಳ ಕಾನೂನುಗಳ ಅಡಿಯಲ್ಲಿ ಬಂಧನದಲ್ಲಿದ್ದಾರೆ.


ಪ್ರಜಾಪ್ರಭುತ್ವದ ಮತ್ತು ಪ್ರಜಾಸತ್ತಾತ್ಮಕ ಹಕ್ಕುಗಳ ಮೂಲಭೂತ ನಿರಾಕರಣೆ ಜಮ್ಮು ಮತ್ತು ಕಾಶ್ಮೀರ ವಿಧಾನಸಭೆಗೆ ಚುನಾವಣೆಗಳನ್ನು ನಡೆಸುವಲ್ಲಿ ವಿಫಲವಾಗಿರುವುದರಲ್ಲಿ ಎದ್ದು ಕಾಣುತ್ತಿದೆ. ಬಿಜೆಪಿಯ ಹಿತಾಸಕ್ತಿಗಳಿಗೆ ಅನುಕೂಲವಾಗುವಂತೆ ಮತ್ತು ಕಾಶ್ಮೀರ ಕಣಿವೆಯ ಜನರ ಪ್ರಾತಿನಿಧ್ಯವನ್ನು ಕಡಿಮೆ ಮಾಡುವ ಉದ್ದೇಶದ ಕ್ಷೇತ್ರ ಮರುವಿಂಗಡಣೆಯಲ್ಲಿ ಕಾಶ್ನೀರ ಕಣಿವೆಯ ಜನಗಳ ಪ್ರಾತಿನಿಧ್ಯವನ್ನು ಕಡಿಮೆ ಮಾಡಿದ ಮೇಲೂ ಕೇಂದ್ರ ಸರಕಾರ ಚುನಾವಣೆಗಳನ್ನು ನಡೆಸುತ್ತಿಲ್ಲ.

ಹೀಗಾಗಿ, ಎಲ್ಲಾ ರೀತಿಯಲ್ಲೂ, ಜಮ್ಮು ಮತ್ತು ಕಾಶ್ಮೀರದ ಜನತೆಯನ್ನು ಎರಡನೇ ದರ್ಜೆಯ ನಾಗರಿಕರ ಮಟ್ಟಕ್ಕೆ ಇಳಿಸಲಾಗಿದೆ. ಆದ್ದರಿಂದ, ಸಿಪಿಐ(ಎಂ) ಕೇಂದ್ರ ಸಮಿತಿಯು ಜಮ್ಮು ಮತ್ತು ಕಾಶ್ಮೀರ ವಿಧಾನಸಭೆಗೆ ತಕ್ಷಣವೇ ಚುನಾವಣೆ ನಡೆಸಬೇಕೆಂದು ಒತ್ತಾಯಿಸುತ್ತದೆ.

ಪ್ರಜಾಪ್ರಭುತ್ವದ ಮರುಸ್ಥಾಪನೆಯಾಗಬೇಕಾದರೆ ಎಲ್ಲಾ ರಾಜಕೀಯ ಕೈದಿಗಳ ಬಿಡುಗಡೆ ಆಗಬೇಕಾಗಿದೆ ಮತ್ತು ರಾಜಕೀಯ ವಿರೋಧ ಮತ್ತು ಮಾಧ್ಯಮವನ್ನು ನಿಗ್ರಹಿಸುವ ಕರಾಳ ಕಾನೂನುಗಳ ಬಳಕೆಯನ್ನು ಕೊನೆಗೊಳಿಸಬೇಕು.

ಕೇಂದ್ರವು ಜಮ್ಮು ಮತ್ತು ಕಾಶ್ಮೀರದ ಶಾಶ್ವತ ನಿವಾಸದ ವಾಸಸ್ಥಳ ಸ್ಥಾನಮಾನವನ್ನು ಸವೆಸಿ ಹಾಕುವ ಎಲ್ಲಾ ಕ್ರಮಗಳನ್ನು ಹಿಂದಕ್ಕೆ ಪಡೆಯಬೇಕು ಮತ್ತು ಅವರ ಭೂಮಿಯ ಹಕ್ಕುಗಳನ್ನು ರಕ್ಷಿಸಬೇಕು.

ತಮ್ಮ ಹಕ್ಕುಗಳನ್ನು ಮರುಸ್ಥಾಪಿಸುವ ಹೋರಾಟದಲ್ಲಿ ಪ್ರಜಾಸತ್ತಾತ್ಮಕ ಶಕ್ತಿಗಳು ಮತ್ತು ಜಮ್ಮು ಮತ್ತು ಕಾಶ್ಮೀರದ ಜನರೊಂದಿಗೆ ಕೇಂದ್ರ ಸಮಿತಿಯು ಸೌಹಾರ್ದವನ್ನು ವ್ಯಕ್ತಪಡಿಸುತ್ತದೆ.



'ಚಲೋ ಬೆಳ್ತಂಗಡಿ'

ನೇತ್ರಾವತಿ ನದಿಯಲ್ಲಿ ಹರಿದ ರಕ್ತ ಯಾರದ್ದೆಂದು ಕೇಳಲು
ರಕ್ತ ಹರಿಸಿದವರು ಯಾರೆಂದು ಕೇಳಲು.
ಬಾ ಗೆಳತಿ
ಬಾ ಸಂಗಾತಿ.

ಜುಳುಜುಳು ಹರಿಯುವ ನದಿಯಲಡಗಿದ ಮಾತಿಗೆ ಕಿವಿಯಾಗೋಣ
ಹೆಂಗರುಳು ಬಗೆದು ತಿಂದು ತೇಗುವ ದುರುಳರ ಝುಗ್ಗಿಸಿ ಕೇಳೋಣ.
ಬಾ ಗೆಳತಿ
ಬಾ ಸಂಗಾತಿ.

ಬಾ ಗೆಳತಿ ನನ್ನೆದೆಯ ನೋವಿಗೆ ಜೊತೆಗಾತಿ
ಬಾ ಸಂಗಾತಿ ಒಡಲ ತಳಮಳಕೆ ನಿರ್ಭಯದ ಸಾಥಿ
ಬಾ ಗೆಳತಿ
ಬಾ ಸಂಗಾತಿ

ಅಲ್ಲಿ ಝಣಝಣ ಕಾಂಚಣಕೆ ಹೊಳಪುಂಟು ಥಳಕುಂಟು ಮತ್ತದಕೆ
ರಕ್ತದ ಕಲೆಯುಂಟು.
ಅಲ್ಲಿ ಹೆಂಗೂಸ ದೇಹಗಳ
ಹುಲಿದು ಮುಕ್ಕುವ ಸೊಕ್ಕಿಗರುಂಟು.
ಬಾ ಗೆಳತಿ
ಬಾ ಸಂಗಾತಿ.

ಧರ್ಮದ ಹೆಸರಲಿ ದೇವರ ಹೆಸರಲಿ ಕುರುಡು ಕಾಂಚಾಣದ
ಮೆರವಣಿಗೆ
ಹಣಕ್ಕೆ ಖರಿದಿಸಿ ನ್ಯಾಯವ ಹುಗಿದು ಹಾಕುವ ಉರವಣಿಗೆ
ತಡೆದೇ ತಡೆಯಲು
ಬಾ ಗೆಳತಿ
ಬಾ ಸಂಗಾತಿ.

ಎಷ್ಟು ದಿನ ಇನ್ನೆಷ್ಟು ದಿನ
ಒಡಲ ಕಂದಗಳ ಆಕ್ರಂದನಕ್ಕೆ ಕಿವುಡಾಗೋಣ?
ಎಷ್ಟು ದಿನ ಇನ್ನೆಷ್ಟು ದಿನ
ಕೊಲೆಗಡುಗರ ದರ್ಪ ಧಮಕಿಗೆ
ಭಯದಿ ಹೇಡಿಗಳಂತಾಗೋಣ?
ಬಾ ಗೆಳತಿ
ಬಾ ಸಂಗಾತಿ.

ನೋವಿಗೆ ಅಂಜದೆ
ಸಾವಿಗೆ ಹೆದರದೆ ನಾವು
ಮುಖವಾಡಗಳ ಕಿತ್ತೆಸೆಯುತ ಮುಷ್ಠಿ ಬಿಗಿದೆತ್ತಿ ನಾವು
ಮುಂದೆ ಮುಂದಕೆ ಸಾಗೋಣ
ಬಾ ಗೆಳತಿ
ಬಾ ಸಂಗಾತಿ

ಪ್ರಶ್ನಿಸಬೇಕಿದೆ ಹಿಮ್ಮೆಟ್ಟಿಸಬೇಕಿದೆ ಒಟ್ಟಾಗಿ
ಹುಡುಕಲೇಬೇಕಿದೆ
ಕರುಳ ಕಂದಗಳ ತಾಯಾಗಿ.
ಬಾ ಗೆಳತಿ ತಾಯಾಗು
ಬಾ ಸಂಗಾತಿ ತಾಯಾಗು.

ಮತ್ತೆಂದು ಹರಿಯದಂತೆ ನದಿಯೊಡಲಿಗೆ
ರಕ್ತ ಧಾರೆಯ
ಸೆರಗು ಸುತ್ತಿ ಸೊಂಟಕೆ
ಹಿಡಿದೆತ್ತು ಬಾವುಟವ
ಮುಗಿಲಗಲಕೆ
ಮೊಳಗಿ ಬರಲಿ ಕರುಳಿನಾಳದಿ
ಧಿಕ್ಕಾರದ ಘೋಷವ.
ಬಾ ಗೆಳತಿ
ಬಾ ಸಂಗಾತಿ.

-ಕಾಮ್ರೇಡ್ ಕೆ. ನೀಲಾ

ಬೆಳ್ತಂಗಡಿ ಚಲೋ 2023 ಆಗಸ್ಟ್ 28



ಜ್ಞಾನವಾಪಿ ಮಸೀದಿ ಮುಂದಿನ ಟಾರ್ಗೆಟ್

1991ರ ಪೂಜಾ ಸ್ಥಳಗಳು (ವಿಶೇಷ ನಿಯಮಗಳು) ಕಾನೂನಿನ ಹೊರತಾಗಿಯೂ ಈ ನ್ಯಾಯಾಂಗ ಪ್ರಕ್ರಿಯೆಗಳು ನಡೆಯುತ್ತಿವೆ. ಸಂಸತ್ತು ರೂಪಿಸಿರುವ ಈ ಕಾನೂನು, ಪೂಜಾ ಸ್ಥಳಗಳನ್ನು, –ಅಂದರೆ ಮಂದಿರಗಳು, ಮಸೀದಿಗಳು ಮತ್ತು ಚರ್ಚ್‌ಗಳು– 1947 ಆಗಸ್ಟ್ 15ರಲ್ಲಿರುವಂತೆ ಹಾಗೇ ಬಿಡಲು ಹೇಳಿದ್ದು, ಇವುಗಳನ್ನು ಬದಲಾಯಿಸುವುದನ್ನು ನಿಷೇಧಿಸುತ್ತದೆ. ಸ್ವಾತಂತ್ರ್ಯಾನಂತರ ಪೂಜಾ ಸ್ಥಳಗಳ ಯಥಾಸ್ಥಿತಿಯನ್ನು ಉಳಿಸಿಕೊಳ್ಳಲು ಈ ಕಾನೂನು ಅನುಕೂಲ ಮಾಡಿಕೊಡುತ್ತದೆ.

ಪ್ರಕಾಶ್ ಕಾರತ್

ಮಂದಿರ–ಮಸೀದಿ ವಿವಾದದಲ್ಲಿ ಹೊಸದೊಂದು ರಂಗ ತೆರೆದುಕೊಂಡಿದೆ ಎಂದು ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ವಸ್ತುಶಃ ಘೋಷಿಸಿದ್ದಾರೆ. ಈ ಬಾರಿ ಇದು ವಾರಾಣಸಿಯ ಜ್ಞಾನವಾಪಿ ಮಸೀದಿ ಮತ್ತು ಕಾಶಿ ವಿಶ್ವನಾಥ ಮಂದಿರ. ಮಸೀದಿಯು ಒಂದು ದೇವಸ್ಥಾನವಾಗಿತ್ತು ಎನ್ನುವ 'ಮೂಲ ಸ್ಥಾನಮಾನ' ಸಾಬೀತುಪಡಿಸಲು ಸಾಕಷ್ಟು ಪುರಾವೆಗಳು ಜ್ಞಾನವಾಪಿ ಸಂಕೀರ್ಣದಲ್ಲಿ ಸಿಕ್ಕಿವೆ ಎಂದು ಕೆಲ ದಿನಗಳ ಹಿಂದೆ ಸಂದರ್ಶನವೊಂದರಲ್ಲಿ ಆದಿತ್ಯನಾಥ ಹೇಳಿದ್ದಾರೆ. 'ಹಿಂದೆ ಒಂದು ಐತಿಹಾಸಿಕ ಪ್ರಮಾದ ಎಸಗಲಾಗಿದೆ' ಎಂದು ಮುಸ್ಲಿಂ ಸಮುದಾಯವೇ ಮುಂದೆ ಬಂದು ಹೇಳಬೇಕು ಹಾಗೂ ಪರಿಹಾರವನ್ನು ಸೂಚಿಸಬೇಕು ಎಂದೂ ಯುಪಿ ಸಿಎಂ ಹೇಳಿದ್ದಾರೆ.

ಜ್ಞಾನವಾಪಿ ಮಸೀದಿ ಸಂಕೀರ್ಣ ಒಂದು ಹಿಂದು ದೇವಾಲಯವಾಗಿತ್ತು ಎಂದು ಸಾಬೀತುಪಡಿಸಲು ಕಾನೂನು ಸಮರ ನಡೆಯುತ್ತಿರುವ ನಡುವೆಯೇ ಆದಿತ್ಯನಾಥರು ಈ ರೀತಿ ಬಡಬಡಿಸಿದ್ದಾರೆ. ವಾರಾಣಸಿ ಜಿಲ್ಲಾ ಕೋರ್ಟ್ ನಿರ್ದೇಶನದನ್ವಯ ಜ್ಞಾನವಾಪಿ ಮಸೀದಿ ಸಂಕೀರ್ಣದಲ್ಲಿ ಪುರಾತತ್ತ್ವ ಸರ್ವೇಕ್ಷಣಾ ಇಲಾಖೆ (ಎಎಸ್‌ಐ) ಸಮೀಕ್ಷೆ ನಡೆಸುವಂತೆ ಅಲಹಾಬಾದ್ ಹೈಕೋರ್ಟ್ ಆಗಸ್ಟ್ 3ರಂದು ತೀರ್ಪು ನೀಡಿದೆ. ಜಿಲ್ಲಾ ನ್ಯಾಯಾಲಯದ ಆದೇಶದ ವಿರುದ್ಧ ಮಸೀದಿ ಸಮಿತಿ ಸಲ್ಲಿಸಿದ್ದ ಅರ್ಜಿಯನ್ನು ಹೈ ಕೋರ್ಟ್ ತಿರಸ್ಕರಿಸಿದೆ.

ಅಯೋಧ್ಯೆ ವಿವಾದ ಕುರಿತು ಸುಪ್ರೀಂ ಕೋರ್ಟ್ 2019ರಲ್ಲಿ ತೀರ್ಪು ನೀಡಿದಾಗಿನಿಂದಲೂ ಜ್ಞಾನವಾಪಿ ಮಸೀದಿ ಸಂಕೀರ್ಣದಲ್ಲಿರುವ ಹಿಂದು ದೇವತೆಗಳ ಆರಾಧನೆಯ ಹಕ್ಕು ಮಂಡಿಸಿ ವಾರಾಣಸಿಯ ಸ್ಥಳೀಯ ನ್ಯಾಯಾಲಯಗಳಲ್ಲಿ ಅನೇಕ ದಾವೆಗಳನ್ನು ಹೂಡಲಾಗಿದೆ. ವಿಡಿಯೋ ಸಮೀಕ್ಷೆಗಳನ್ನು ನಡೆಸಬೇಕು ಮತ್ತು ತಥಾಕಥಿತ 'ಶಿವಲಿಂಗ'ದ ಕಾರ್ಬನ್ ಡೇಟಿಂಗ್ ನಡೆಸಬೇಕೆನ್ನುವುದೂ ದಾವೆಗಳ ವಾದವಾಗಿದೆ. ವಾಸ್ತವವಾಗಿ ಆ 'ಶಿವಲಿಂಗ'ವೆನ್ನುವುದು ಮುಸ್ಲಿಮರು ಪ್ರಾರ್ಥನೆಗೂ ಮುನ್ನ ಕೈಕಾಲು ತೊಳೆಯುವ ಕೊಳದಲ್ಲಿನ ಕಾರಂಜಿಯಾಗಿದೆ.

ಕಾನೂನಿಗೆ ಕಿಮ್ಮತ್ತಿಲ್ಲ

1991ರ ಪೂಜಾ ಸ್ಥಳಗಳು (ವಿಶೇಷ ನಿಯಮಗಳು) ಕಾನೂನಿನ ಹೊರತಾಗಿಯೂ ಈ ನ್ಯಾಯಾಂಗ ಪ್ರಕ್ರಿಯೆಗಳು ನಡೆಯುತ್ತಿವೆ. ಸಂಸತ್ತು ರೂಪಿಸಿರುವ ಈ ಕಾನೂನು, ಪೂಜಾ ಸ್ಥಳಗಳನ್ನು, –ಅಂದರೆ ಮಂದಿರಗಳು, ಮಸೀದಿಗಳು ಮತ್ತು ಚರ್ಚ್‌ಗಳು–1947 ಆಗಸ್ಟ್ 15ರಲ್ಲಿರುವಂತೆ ಹಾಗೇ ಬಿಡಲು ಹೇಳಿದ್ದು, ಇವುಗಳನ್ನು ಬದಲಾಯಿಸುವುದನ್ನು ನಿಷೇಧಿಸುತ್ತದೆ. ಸ್ವಾತಂತ್ರ್ಯಾನಂತರ ಪೂಜಾ ಸ್ಥಳಗಳ ಯಥಾಸ್ಥಿತಿಯನ್ನು ಉಳಿಸಿಕೊಳ್ಳಲು ಈ ಕಾನೂನು ಅನುಕೂಲ ಮಾಡಿಕೊಡುತ್ತದೆ ಎನ್ನುವುದು ಇದರ ಅರ್ಥವಾಗಿದೆ. ಇಂಥ ಪರಿವರ್ತನೆಗಳ ಬಗ್ಗೆ ಯಾವುದೇ ಕೋರ್ಟ್ ಕಲಾಪಗಳು ಈ ಕಾನೂನು ಅನುಷ್ಠಾನಕ್ಕೆ ಬಂದ ನಂತರ ರದ್ದಾಗುತ್ತವೆ. ಅಯೋಧ್ಯೆ ವಿವಾದ ಮತ್ತು ಅದಕ್ಕೆ ಸಂಬಂಧಿಸಿದ ಕೋರ್ಟ್ ಕಲಾಪಗಳಿಗೆ ಮಾತ್ರವೇ ಇದರಿಂದ ವಿನಾಯಿತಿ ನೀಡಲಾಗಿತ್ತು. ದೇಶದಾದ್ಯಂತ ವ್ಯಾಪಕ ಹಿಂಸಾಚಾರಕ್ಕೆ ಕಾರಣವಾದ ರಾಮ ಜನ್ಮಭೂಮಿ ಚಳವಳಿಯಂಥ ಯಾವುದೇ ಚಳವಳಿ ಅಥವಾ ಕೋಮುವಾದಿ ಚಟುವಟಿಕೆಗಳನ್ನು ತಡೆಯುವುದು ಪಿ.ವಿ. ನರಸಿಂಹ ರಾವ್ ಸರಕಾರ ಸಂಸತ್ತಿನಲ್ಲಿ ಅಂಗೀಕರಿಸಿದ ಈ ಕಾನೂನಿನ ಉದ್ದೇಶವಾಗಿದೆ.

ಸುಪ್ರೀಂ ಕೋರ್ಟ್ ಬಲ

ಅಯೋಧ್ಯೆ ವಿವಾದಲ್ಲಿ ತೀರ್ಪು ನಿಡುವ ಸಮಯದಲ್ಲಿ ಸುಪ್ರೀಂ ಕೋರ್ಟ್, 1991ರ ಈ ಕಾನೂನನ್ನು ಎತ್ತಿ ಹಿಡಿದಿದೆ. ಈ ಕಾಯಿದೆ 'ಜಾತ್ಯತೀತ ಪ್ರಭುತ್ವವೊಂದರ ಹೊಣೆಗಾರಿಕೆಗಳಿಗೆ ಅಂತರ್ಗತವಾಗಿ ಸಂಬಂಧಪಟ್ಟಿದೆ' ಎಂದು ಸರ್ವೋನ್ನತ ನ್ಯಾಯಾಲಯ ಆಗ ಹೇಳಿತ್ತು. 'ವರ್ತಮಾನ ಮತ್ತು ಭವಿಷ್ಯವನ್ನು ದಮನಿಸಲು, ಇತಿಹಾಸ ಮತ್ತು ಅದರ ತಪ್ಪುಗಳನ್ನು ಒಂದು ಸಾಧನವನ್ನಾಗಿ ಬಳಸಬಾರದು ಎಂದು ಸಂಸತ್ತು ಸುಸ್ಪಷ್ಟ ಮಾತುಗಳಲ್ಲಿ ಹೇಳಿದೆ' ಎಂದೂ ಸುಪ್ರೀಂ ಕೋರ್ಟ್ ಅಭಿಪ್ರಾಯಪಟ್ಟಿತ್ತು. 1991ರ ಪೂಜಾ ಸ್ಥಳಗಳ ಕಾನೂನನ್ನು ಸುಪ್ರೀಂ ಕೋರ್ಟ್ 2019ರಲ್ಲಿ ಈ ಪರಿ ಪ್ರಬಲವಾಗಿ ಅನುಮೋದಿಸಿದ್ದರೂ ನಂತರದ ಅವಧಿಯಲ್ಲಿ ಜ್ಞಾನವಾಪಿ ಮಸೀದಿ ಸಂಕೀರ್ಣಕ್ಕೆ ಸಂಬಂಧಿಸಿ ವಾರಾಣಸಿ ಕೋರ್ಟ್‌ಗಳಲ್ಲಿ ಉಂಟಾದ ವ್ಯಾಜ್ಯವನ್ನು ಕೊನೆಗೊಳಿಸಲು ಸುಪ್ರೀಂ ಕೋರ್ಟ್ ನಿರ್ಣಾಯಕವಾಗಿ ಮಧ್ಯಪ್ರವೇಶಿಸಲಿಲ್ಲವೇಕೆ ಎನ್ನುವುದು ನಿಗೂಢವಾಗಿದೆ.

> **ಸುಪ್ರೀಂ ಕೋರ್ಟ್ ಈ ಕಿಡಿಗೇಡಿತನವನ್ನು ಮೊಳಕೆಯಲ್ಲೇ ಚಿವುಟಬೇಕು ಹಾಗೂ ಅಯೋಧ್ಯಾ ತೀರ್ಪಿನಲ್ಲಿ ಸ್ವತಃ ತಾನೇ ಸ್ಪಷ್ಟವಾಗಿ ಅನುಮೋದಿಸಿದ 1991ರ ಪೂಜಾ ಸ್ಥಳಗಳ ಕಾನೂನನ್ನು ಅನ್ವಯಿಸಬೇಕು.**

ಪ್ರಧಾನಿ ಕ್ಷೇತ್ರದಲ್ಲೇ ಕಾನೂನು–ವಿರೋಧಿ ಕ್ರಿಯೆ

ಮಸೀದಿ ಸಂಕೀರ್ಣದ ಸಮೀಕ್ಷೆ ಮತ್ತು ವಿಡಿಯೋ ಚಿತ್ರೀಕರಣಕ್ಕೆ ವಾರಾಣಸಿಯ ಸಿವಿಲ್ ಜಡ್ಜ್ ಮಾಡಿದ್ದ ಆದೇಶಕ್ಕೆ ತಡೆ ಕೋರಿ ಮಸೀದಿ ಸಮಿತಿ 2022ರ ಮೇನಲ್ಲಿ ತನ್ನನ್ನು ಸಂಪರ್ಕಿಸಿದಾಗ ಸುಪ್ರೀಂ ಕೋರ್ಟ್‌ಗೆ ಒಂದು ಉತ್ತಮ ಅವಕಾಶವಿತ್ತು. ಪೂಜಾ ಸ್ಥಳಗಳ ಕಾನೂನಿನ ಆಧಾರದಲ್ಲಿ ಈ ವಿವಾದದ ನ್ಯಾಯಾಂಗ ಕಲಾಪಗಳಿಗೆ ಕೊನೆ ಹಾಡಬಹುದಿತ್ತು. ಅದಕ್ಕೆ ಬದಲಾಗಿ, ಐವರು ಮಹಿಳೆಯರು ಸಲ್ಲಿಸಿದ್ದ ಅರ್ಜಿಯ ಸಿಂಧುತ್ವ ಪ್ರಶ್ನಿಸಿ ಮಸೀದಿ ಸಮಿತಿ ಸಲ್ಲಿಸಿದ್ದ ಅರ್ಜಿಯನ್ನು, ವಾರಾಣಸಿ ಜಿಲ್ಲಾ ನ್ಯಾಯಾಧೀಶರು ಹಿರಿಯ ಜಡ್ಜ್ ಎಂಬ ಕಾರಣಕ್ಕೆ ಅವರಿಗೆ ವರ್ಗಾಯಿಸಲು ಸುಪ್ರೀಂ ಕೋರ್ಟ್ ನಿರ್ದೇಶಿಸಿತು. ಎಎಸ್‌ಐ ಸಮೀಕ್ಷೆ ಸಂಬಂಧ ಸಮಿತಿ ಜುಲೈನಲ್ಲಿ ಮತ್ತೆ ಸಂಪರ್ಕಿಸಿದಾಗಲೂ ಅದು ಎಲ್ಲಾ ನ್ಯಾಯಾಂಗ ಪ್ರಕ್ರಿಯೆಗಳಿಗೆ ಮಂಗಳ ಹಾಡಬಹುದಿತ್ತು. ಆವಾಗಿನಿಂದ ಈ ಪ್ರಕರಣದಲ್ಲಿ ಇನ್ನಷ್ಟು ಮೊಕದ್ದಮೆಗಳನ್ನು ಹೂಡಲಾಗಿದೆ. ಜ್ಞಾನವಾಪಿ ಮಸೀದಿ ಕೆಡವಿ ಆ ಜಾಗದಲ್ಲಿ ದೇವಸ್ಥಾನ ಕಟ್ಟಬಹುದು ಎಂದು ಪ್ರತಿಪಾದಿಸುವ ಒಂದು ಅರ್ಜಿಯೂ ಅದರಲ್ಲಿ ಸೇರಿದೆ. ಇವೆಲ್ಲವೂ ಪ್ರಧಾನಿ ನರೇಂದ್ರ ಮೋದಿಯ ಲೋಕಸಭಾ ಕ್ಷೇತ್ರದಲ್ಲಿ ನಡೆಯುತ್ತಿದೆ ಎನ್ನುವುದು ಗಮನಾರ್ಹವಾಗಿದೆ.

ನ್ಯಾಯಾಂಗದ ಉನ್ನತ ಮಟ್ಟದಲ್ಲಿನ ಈ ಹೇಡಿತನಗಳು ನಿಧಾನವಾಗಿ ಒಂದೊಂದಾಗಿಯೇ ಜ್ಞಾನವಾಪಿ ಮಸೀದಿಯ ಸ್ವರೂಪದ ಬಗ್ಗೆ ಕೆಳ ನ್ಯಾಯಾಲಯಗಳ ಮೂಲಕ ಪ್ರಶ್ನಿಸುವ ಪ್ರಕ್ರಿಯೆಗೆ ಹೇತುವಾಗಿ ಮಸೀದಿಯ ಸ್ವರೂಪದ 'ಸತ್ಯತೆಯನ್ನು ತಿಳಿಯಲು' ವಿಡಿಯೋ ಚಿತ್ರೀಕರಣ ಸಮೀಕ್ಷೆಗೆ ಮತ್ತು ಈಗ ಎಎಸ್‌ಐ ಸಮೀಕ್ಷೆಗೆ ಆದೇಶಿಸುವವರೆಗಿನ ಕ್ರಮಗಳಿಗೆ ಕಾರಣವಾಗಿದೆ. ಈ ಪ್ರಕ್ರಿಯೆಯಲ್ಲಿ, ಜಿಲ್ಲಾ ನ್ಯಾಯಾಲಯವು ಮಸೀದಿ ಸಂಕೀರ್ಣದಲ್ಲಿ ಪೂಜೆ ಸಲ್ಲಿಸುವ ಅವಕಾಶ ಕೋರಿದ ಮಹಿಳೆಯರ ಅರ್ಜಿಯನ್ನು ಎತ್ತಿ ಹಿಡಿಯಿತು. ವಿಡಿಯೋಗ್ರಾಫ್ ಸಮೀಕ್ಷೆಯು ಮಸೀದಿ ಸಂಕೀರ್ಣದ ಕೊಳದಲ್ಲಿನ ಕಾರಂಜಿಯನ್ನು 'ಶಿವಲಿಂಗ' ಎಂದಿತು. ಮತ್ತು ಇದೀಗ ಅಲಹಾಬಾದ್ ಹೈ ಕೋರ್ಟ್ ತನ್ನ ಇತ್ತೀಚಿನ ತೀರ್ಪಿನಲ್ಲಿ ಮಸೀದಿ ಸಂಕೀರ್ಣದ ಎಎಸ್‌ಐ ಸಮೀಕ್ಷೆಗೆ ಅವಕಾಶ ಕಲ್ಪಿಸಿದೆ.

ಕೃಷ್ಣ ಜನ್ಮಭೂಮಿ!

ಈದ್ಗಾ–ಕೃಷ್ಣ ಜನ್ಮಭೂಮಿ ವಿಚಾರದಲ್ಲೂ ಮಥುರಾ ಕೋರ್ಟ್‌ಗಳಲ್ಲಿ ಇದೇ ರೀತಿಯ ನ್ಯಾಯಾಂಗ ಪ್ರಕ್ರಿಯೆಗಳು ನಡೆಯುತ್ತಿವೆ. ಹಿಂದುತ್ವ ಶಕ್ತಿಗಳು ಕಾನೂನು ಸಮರವನ್ನು ತನ್ನ ಹಿತಗಳನ್ನು ಮುಂದೊತ್ತಲು ಒಂದು ಕಾರ್ಯತಂತ್ರವಾಗಿ ಬಳಸುತ್ತಿರುವಂತೆ ಕಾಣುತ್ತಿದೆ. ಹಿಂದುತ್ವವಾದಿಗಳ ಈ ಕುಸ್ಸಾಹಸದಲ್ಲಿ ಕೆಳ ನ್ಯಾಯಾಲಯಗಳು ಪಾಲ್ಗೊಳ್ಳುತ್ತಿರುವುದು ಇದಕ್ಕೆ ಕಾರಣವಾಗಿದೆ. ನ್ಯಾಯಾಂಗದ ಅವಕಾಶವನ್ನು ಬಳಸಿಕೊಂಡ ಮೇಲೆ, ಸೂಕ್ತ ಸಮಯದಲ್ಲಿ ನ್ಯಾಯಾಂಗೇತರ ವಿಧಾನಗಳನ್ನು ಬಳಸಿ ವಾಸ್ತವತೆಗಳನ್ನು ಬದಲಾಯಿಸಬಹುದಾಗಿದೆ ಎನ್ನುವುದು ಈ ಶಕ್ತಿಗಳ ಹುನ್ನಾರವಾಗಿದೆ.

ಸುಪ್ರೀಂ ಕೋರ್ಟ್ ಈ ಕಿಡಿಗೇಡಿತನವನ್ನು ಮೊಳಕೆಯಲ್ಲೇ ಚಿವುಟಬೇಕು ಹಾಗೂ ಅಯೋಧ್ಯಾ ತೀರ್ಪಿನಲ್ಲಿ ಸ್ವತಃ ತಾನೇ ಸ್ಪಷ್ಟವಾಗಿ ಅನುಮೋದಿಸಿದ 1991ರ ಪೂಜಾ ಸ್ಥಳಗಳ ಕಾನೂನನ್ನು ಅನ್ವಯಿಸಬೇಕು.

ಅನು: ವಿಶ್ವ

ಚಂದಾ ವಿವರ

ವಾರ್ಷಿಕ ಚಂದಾ : ರೂ.500.00
ದ್ವೈವಾರ್ಷಿಕ ಚಂದಾ : ರೂ.1000.00

ಚಂದಾದಾರರು ಸಂರ್ಕಿಸಿ :
ಕ್ರಿಯಾ ಪ್ರಕಾಶನ, ಸೂರಿ ಭವನ
ನಂ.40/5, 2ನೇ 'ಬಿ' ಮುಖ್ಯರಸ್ತೆ, 16ನೇ ಅಡ್ಡರಸ್ತೆ, ಸಂಪಂಗಿರಾಮನಗರ,
ಬೆಂಗಳೂರು 560027
ಕಛೇರಿ ದೂರವಾಣಿ:
080–22234369
ಫೋನ್:
9448578021, 9483966467

ಬೆಲೆ ಏರಿಕೆಗೆ ಕಾರಣಗಳೇನು? ಪರಿಹಾರ ಇಲ್ಲವೆ?

ಪ್ರೊ. ಎಂ.ಚಂದ್ರ ಪೂಜಾರಿ

ಎಲ್ಲ ಸರಕು ಸೇವೆಗಳ ಬೆಲೆ ಗಗನಕ್ಕೇರಿದೆ ಎಂದು ಸಾಬೀತು ಪಡಿಸಲು ಸಾಕ್ಷಿ ಪುರಾವೆಗಳ ಅವಶ್ಯಕತೆ ಇಲ್ಲ. ಇದು ಎಲ್ಲ ಸಾಮಾನ್ಯ ಗ್ರಾಹಕರ ಅನುಭವಕ್ಕೆ ಬಂದಿರುವ ವಿಚಾರ. ಕಳೆದ ವರ್ಷ 25 ರೂಪಾಯಿಗೆ ಸಿಗುತ್ತಿದ್ದ ಸರಕುಸೇವೆಗಳಿಗೆ ಈ ವರ್ಷ 50 ರುಪಾಯಿ ಆಗಿದೆ, 100 ರೂಪಾಯಿ ಇದ್ದದ್ದು 200 ರೂಪಾಯಿ ಆಗಿದೆ. ಅಂದರೆ ಎಲ್ಲ ಸರಕುಸೇವೆಗಳ ಬೆಲೆ ಸರಿ



ಡಬ್ಬಲ್ ಆಗಿದೆ. ಏಕೆ ಬೆಲೆ ಏರಿಕೆ ಆಗುತ್ತಿದೆ? ಬೆಲೆ ಏರಿಕೆಗೆ ರಾಜ್ಯ ಸರಕಾರದ ನೀತಿಗಳು ಕಾರಣವೇ? ಅಥವಾ ಕೇಂದ್ರ ಸರಕಾರದ ಆರ್ಥಿಕ ನೀತಿಗಳು ಕಾರಣವೇ? ಇತ್ಯಾದಿ ಪ್ರಶ್ನೆಗಳು ನಮ್ಮ ಮುಂದಿವೆ. ಈ ಲೇಖನದಲ್ಲಿ ಮೇಲಿನ ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಲು ಪ್ರಯತ್ನಿಸಿದ್ದೇನೆ.

ಬೆಲೆ ಏರಿಕೆಯ ಲಾಭ

ಬೆಲೆ ಏರಿಕೆಗೆ ಎರಡು ಮೂರು ಕಾರಣಗಳನ್ನು ಪಟ್ಟಿ ಮಾಡಬಹುದು. ಒಂದು, ಬೆಲೆ ಏರಿಕೆಯ ಕಾವು ಸಾಮಾನ್ಯ ಗ್ರಾಹಕರನ್ನು ತಟ್ಟಿದಷ್ಟು ಆರ್ಥಿಕ ನೀತಿಗಳನ್ನು ರೂಪಿಸುವವರನ್ನು ತಟ್ಟುವುದಿಲ್ಲ. ಆರ್ಥಿಕ ನೀತಿಗಳನ್ನು ಸರಕಾರ ರೂಪಿಸುವುದು ಎಲ್ಲರಿಗೂ ತಿಳಿದ ವಿಷಯ. ಸರಕಾರದ ಆರ್ಥಿಕ ನೀತಿಗಳನ್ನು ವ್ಯಾಪಾರ, ಉದ್ದಿಮೆಗಳು ಪ್ರಭಾವಿಸುವುತ್ತವೆ. ಆದರೆ ಅವುಗಳ ಬಗ್ಗೆ ನಮಗೆ ಹೆಚ್ಚು ಮಾಹಿತಿ ಇಲ್ಲ. ಅದೇ ರೀತಿ ಸರಕಾರದ ನೀತಿಗಳನ್ನು ಮೇಲ್ಮಧ್ಯಮ ವರ್ಗ ಕೂಡ ಪ್ರಭಾವಿಸುತ್ತದೆ. ಈ ಮೂರು ವರ್ಗಗಳಿಗೂ ಬೆಲೆ ಏರಿಕೆಯಿಂದ ನಷ್ಟಕ್ಕಿಂತ ಲಾಭ ಆಗುತ್ತಿದೆ. ಸರಕಾರಕ್ಕೆ ಜಿಎಸ್‌ಟಿ ಸಂಗ್ರಹ ಹೆಚ್ಚಾಗುತ್ತದೆ. ಸರಕುಸೇವೆಯ ಬೆಲೆ ರೂ.100 ಇದ್ದಾಗ ರೂ.18 ಜಿಎಸ್‌ಟಿ ಸಂಗ್ರಹವಾದರೆ ಬೆಲೆ ರೂ.200 ಆದಾಗ ರೂ.36 ಜಿಎಸ್‌ಟಿ ಸಂಗ್ರಹವಾಗುತ್ತದೆ. ವ್ಯಾಪಾರ ಉದ್ದಿಮೆಗಳಿಗೆ ಏನೇನೂ ವಿನಿಯೋಜನೆ ಇಲ್ಲದೆ ಲಾಭ ಗಳಿಸುವ ಅವಕಾಶ ಸೃಷ್ಟಿ ಆಗುತ್ತದೆ. ಮಧ್ಯಮ ಮತ್ತು ದೊಡ್ಡ ಗಾತ್ರದ ವ್ಯಾಪಾರ ಉದ್ದಿಮೆಗಳು ಕೆಲವು ತಿಂಗಳಿಗಾಗುವಷ್ಟು ಸ್ಟಾಕ್ ಇಟ್ಟಿರುತ್ತಾರೆ.

ಇವರು ಹಳೇ ಸ್ಟಾಕನ್ನು ಹೊಸ ರೇಟಲ್ಲಿ ಮಾರುತ್ತಾರೆ. ರೂ.100ಕ್ಕೆ ಖರೀದಿಸಿದ್ದನ್ನು ಬೆಲೆ ಏರಿಕೆ ಮುನ್ನ ರೂ.110ಕ್ಕೆ ಮಾರುತ್ತಿದ್ದವರು ಬೆಲೆ ಏರಿಕೆ ನಂತರ ಅದೇ ಸ್ಟಾಕನ್ನು ರೂ.120ಕ್ಕೆ ಮಾರುತ್ತಾರೆ. ಸರಕಾರ ಮತ್ತು ದೊಡ್ಡ ವ್ಯಾಪಾರ ಉದ್ದಿಮೆಗಳಲ್ಲಿ ದುಡಿಯುವವರಿಗೆ ಬೆಲೆ ಏರಿಕೆಯ ನೋವನ್ನು ಸಹಿಸಲು ತುಟ್ಟಿ ಭತ್ತೆ ಸಿಗುತ್ತದೆ. ಇವರೆಲ್ಲ ಆರ್ಥಿಕ ನೀತಿ ರೂಪಿಸುವ ಪ್ರಕ್ರಿಯೆಯಲ್ಲಿ ನೇರ ಮತ್ತು ಪರೋಕ್ಷವಾಗಿ ಪಾಲುಗೊಳ್ಳುವವರು. ಬೆಲೆ ಏರಿಕೆಯ ಕಾವು ಇವರಿಗೆ ತಟ್ಟುವುದಿಲ್ಲ. ಬೆಲೆ ಏರಿಕೆಯ ಕಾವನ್ನು ಅನುಭವಿಸುವ ಸಾಮಾನ್ಯ ಗ್ರಾಹಕರು ಲಾಬಿ ಮಾಡಿ ಸರಕಾರದ ಮೇಲೆ ಒತ್ತಡ ಹೇರಲಾಗುವುದಿಲ್ಲ, ಪೇಪರ್, ಟಿವಿಗಳಲ್ಲಿ ಬರೆದು, ಮಾತಾಡಿ ತಮ್ಮ ನೋವನ್ನು ತೋಡಿಕೊಳ್ಳಲಾಗುವುದಿಲ್ಲ. ಪೇಪರ್, ಟಿವಿಗಳಲ್ಲಿ ಬರೆಯುವ, ಮಾತಾಡುವವರು ತಮ್ಮ ರಾಜಕೀಯ ನಿಲುವಿಗೆ ಅನುಸಾರ ಬೆಲೆ ಏರಿಕೆಗೆ ಒಂದೋ ಕೇಂದ್ರ ಸರಕಾರವನ್ನು ಅಥವಾ ರಾಜ್ಯ ಸರಕಾರವನ್ನು ಕಾರಣವೆಂದು ಜನರನ್ನು ಒಪ್ಪಿಸುತ್ತಾರೆ.

ತೆರಿಗೆ–ಎರಡು ವಿಧದ ತೆರಿಗೆಗಳಿವೆ–ಸರಕು ಸೇವೆಗಳ ಮೇಲಿನ ತೆರಿಗೆ ಮತ್ತು ಆದಾಯದ ಮೇಲಿನ ತೆರಿಗೆ. ಸರಕು ಸೇವೆಗಳ ತೆರಿಗೆ ಕಡಿಮೆ ಮಾಡಿ ಆದಾಯದ ಮೇಲಿನ ತೆರಿಗೆ ಹೆಚ್ಚಿಸಿದರೆ ಸಾಮಾನ್ಯ ಗ್ರಾಹಕರ ಸ್ವಾಧೀನ ಖರೀದಿಸುವ ಶಕ್ತಿ ಹೆಚ್ಚಾಗುತ್ತದೆ. ಖರೀದಿಸುವ ಶಕ್ತಿ ಹೆಚ್ಚಾದರೆ ಬೆಲೆ ಏರಿಕೆಯ ನೋವು ಅನುಭವಕ್ಕೆ ಬರುವುದಿಲ್ಲ. ಇದರ ಬದಲು ಸರಕುಸೇವೆಗಳ ತೆರಿಗೆ ಹೆಚ್ಚು ಮಾಡಿ ಆದಾಯ ತೆರಿಗೆ ಕಡಿಮೆ ಮಾಡಿದರೆ ಸಾಮಾನ್ಯ ಗ್ರಾಹಕರ ಸ್ವಾಧೀನ ಖರೀದಿಸುವ ಶಕ್ತಿ ಕಡಿಮೆ ಆಗುತ್ತದೆ.

ಪರಿಹಾರಗಳು

ಎರಡು, ಬೆಲೆ ಏರಿಕೆ ತಡೆಯಲು ಈಗ ಸರಕಾರ ಕೈಗೊಳ್ಳುವ ಪರಿಹಾರಗಳು ಕೆಲಸ ಮಾಡುತ್ತಿಲ್ಲ. ಎರಡು ಮುಖ್ಯ ಕ್ರಮಗಳ ಮೂಲಕ ಸರಕಾರ ಬೆಲೆ ಏರಿಕೆ ತಡೆಗಟ್ಟಲು ಪ್ರಯ್ನಿಸುತ್ತಿದೆ. 1) ಹಣದ ಪೂರೈಕೆಯನ್ನು ಕಂಟ್ರೋಲ್ ಮಾಡುವುದು 2) ಸರಕುಸೇವೆಗಳ ಪೂರೈಕೆ ಹೆಚ್ಚಿಸುವುದು. ಈ ಎರಡೂ ಪರಿಹಾರಗಳ ಹಿಂದೆ ಕೆಲಸ ಮಾಡುವ ಗ್ರಹಿಕೆ ಒಂದೇ. ಅದೇನೆಂದರೆ ಜನರ ಕೈಯಲ್ಲಿ ಹೆಚ್ಚು ಹಣ ಇದೆ ಅದರೆ ಸರಕುಸೇವೆಗಳ ಪೂರೈಕೆ ಕಡಿಮೆ ಇದೆ. ಇದರಿಂದ ಸರಕುಸೇವೆಗಳ ಬೆಲೆ ಏರುತ್ತಿದೆ ಎನ್ನುವುದು ಮೊದಲ ಗ್ರಹಿಕೆ. ಸರಕಾರ ಹಣದ ಪೂರೈಕೆ ಕಡಿಮೆ ಮಾಡಲು ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದ ನೆರವು ಪಡೆಯುತ್ತದೆ. ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ಬ್ಯಾಂಕ್‌ಗಳಿಗೆ ನೀಡುವ ಸಾಲದ ಮೇಲಿನ ಬಡ್ಡಿ ದರ (ರಿಪೋ ರೇಟ್) ಹೆಚ್ಚಿಸಿ ಬ್ಯಾಂಕ್‌ಗಳು ನೀಡುವ ಸಾಲದ ಮೇಲಿನ ಬಡ್ಡಿ ರೇಟ್ ಹೆಚ್ಚಿಸುವಂತೆ ಮಾಡುತ್ತದೆ. ಸಾಲ ದುಬಾರಿ ಆದಾಗ ಜನ ಸಾಲ ಪಡೆಯುವುದು ಕಡಿಮೆ ಆಗುತ್ತದೆ. ಅರ್ಥ ವ್ಯವಸ್ಥೆಯಲ್ಲಿ ಹಣದ ಚಲಾವಣೆ ಕಡಿಮೆ ಆಗುತ್ತದೆ. ಈ ರೀತಿಯಾಗಿ ಹಣದ ಪೂರೈಕೆಯನ್ನು ಕಂಟ್ರೋಲ್ ಮಾಡಿ ಬೆಲೆ ಏರಿಕೆ ತಡೆಗಟ್ಟಲು ಸರಕಾರ ಪ್ರಯತ್ನಿಸುತ್ತಿದೆ.

ಆದರೆ ಈ ವಿಧಾನ ಕೆಲಸ ಮಾಡುತ್ತಿಲ್ಲ. ಏಕೆಂದರೆ ಎಲ್ಲರ ಸ್ವಾಧೀನ ಒಂದೇ ಪ್ರಮಾಣದ ಆದಾಯ ಇಲ್ಲ. ತಿಂಗಳಿಗೆ ಲಕ್ಷಗಟ್ಟಲೆಯಲ್ಲಿ ಆದಾಯ ಪಡೆಯುವವರ ಸಂಖ್ಯೆ ನಮ್ಮಲ್ಲಿ ಕಡಿಮೆ ಇದೆ. ಬಹುತೇಕರ ತಿಂಗಳ



ಆದಾಯ ರೂ.10–15 ಸಾವಿರ ಮೀರುವುದಿಲ್ಲ. ಇವರ ಸ್ವಾಧೀನ ಹಣ ಹೆಚ್ಚಾಗಿರುವುದರಿಂದ ಬೆಲೆ ಏರಿಕೆ ಸಮಸ್ಯೆ ಆಗಿರುವುದಲ್ಲ ಹಣ ಕಡಿಮೆ ಆಗಿರುವುದರಿಂದ ಸಮಸ್ಯೆ ಆಗುತ್ತಿರುವುದು. ಒಂದು ವೇಳೆ ಬೆಲೆ ಏರಿದಂತೆ ಇವರ ಆದಾಯವೂ ಏರಿದರೆ ಇವರಿಗೂ ಬೆಲೆ ಏರಿಕೆ ಕಾವು ತಟ್ಟುವುದಿಲ್ಲ. ಸರಕಾರದ ಮತ್ತೊಂದು ಕ್ರಮ ಸರಕುಸೇವೆಗಳ ಪೂರೈಕೆ ಹೆಚ್ಚಿಸಲು ಉತ್ಪಾದಕರಿಗೆ ಹೆಚ್ಚಿನ ಪ್ರೋತ್ಸಾಹ ನೀಡುವುದು. ಸರಕುಸೇವೆಗಳ ಪೂರೈಕೆ ಹೆಚ್ಚಿಸಲು ಸರಕಾರ ನೀಡುವ ಪ್ರೊತ್ಸಾಹಗಳ ಬಹುಭಾಗ ದೊಡ್ಡ ಕೃಷಿ, ವ್ಯಾಪಾರ, ಉದ್ದಿಮೆಗಳಿಗೆ ಹೋದರೆ ಅತ್ಯಲ್ಪ ಪ್ರಮಾಣ ಮಾತ್ರ ಸಣ್ಣಪುಟ ಕೃಷಿ, ವ್ಯಾಪಾರ, ಉದ್ದಿಮೆಗಳಿಗೆ ಹೋಗುತ್ತದೆ. ಆದರೆ ನಮ್ಮಲ್ಲಿ ಶೇ.70ಕ್ಕಿಂತಲೂ ಹೆಚ್ಚಿನ ಜನರು ಸಣ್ಣಪುಟ್ಟ ವ್ಯಾಪಾರ ಉದ್ದಿಮೆ, ಕೃಷಿಗಳಲ್ಲಿ ದುಡಿಯುವವರು. ಇವರಿಗೆ ಸರಕಾರದ ಪ್ರೋತ್ಸಾಹ ವರ್ಗಾವಣೆ ಆಗುವುದಿಲ್ಲ. ಆದುದರಿಂದ ಇವರ ಸಂಬಳ ಹೆಚ್ಚಾಗುವುದಿಲ್ಲ. ಹಾಗೆಂದು ಕೇಂದ್ರ ಸರಕಾರ ಉತ್ಪಾದಕರ ಸಾಮರ್ಥ್ಯ ವೃದ್ಧಿಸಲು ಕ್ರಮ ಕೈಗೊಂಡಂತೆ ಜನಸಾಮಾನ್ಯರ ಖರೀದಿಸುವ ಶಕ್ತಿ ಹೆಚ್ಚಿಸಲು ಪ್ರತ್ಯೇಕ ಕ್ರಮ ಕೈಗೊಂಡಿಲ್ಲ. ಹೀಗೆ ಸರಕಾರದ ಬೆಲೆ ಏರಿಕೆ ತಡೆಗಟ್ಟುವ ಎರಡೂ ಪರಿಹಾರಗಳು ನಿಜವಾಗಿ ಬೆಲೆ ಏರಿಕೆಯ ನೋವು ಅನುಭವಿಸುವವರಿಗೆ ಪರಿಹಾರ ನೀಡುತ್ತಿಲ್ಲ.

ಮಾರುಕಟ್ಟೆ

ಮೂರು, ಸರಕುಸೇವೆಗಳ ಬೇಡಿಕೆ ಪೂರೈಕೆಗಳು ಅಥವಾ ಮಾರ್ಕೆಟ್ ಬೆಲೆ ಏರಿಕೆಯನ್ನು ನಿರ್ಧರಿಸುವುದು, ಇದನ್ನು ಸರಕಾರ ಬಿಡಿ ದೇವರು ಬಂದ್ರು ತಡೆಗಟ್ಟಲು ಸಾಧ್ಯವಿಲ್ಲ ಎನ್ನುವ ನಂಬಿಕೆಯನ್ನು ನಮ್ಮ ಮಾಧ್ಯಮಗಳು, ಪತ್ರಗಳು ಪ್ರಚಾರ ಮಾಡುತ್ತಿವೆ. ಅಂದರೆ ಮಾರ್ಕೆಟನ್ನು ನಾವು ನೀವು ಚುನಾಯಿಸಿದ ಇದೇ ಎಂಪಿ, ಎಂಎಲ್‌ಎಗಳ ತೀರ್ಮಾನ ಅಲ್ಲ ದೇವರ ತೀರ್ಮಾನ ಎನ್ನುವ ಭ್ರಮೆ ಇದೆ. ಇದು ಸರಿಯಲ್ಲ. ಮಾರ್ಕೆಟ್ ಇತರ ಎಲ್ಲ ಸಂಸ್ಥೆಗಳಂತೆ ಒಂದು ಸಂಸ್ಥೆ. ಇದನ್ನು ನಾವು ಚುನಾಯಿಸುವ ಜನಪ್ರತಿನಿಧಿಗಳೇ ಸೃಷ್ಟಿಸುವುದು. ಇದು ಸರಕಾರದ ಸೃಷ್ಟಿ ಆಗಿರುವುದರಿಂದ ಸರಕಾರ ಮನಸ್ಸು ಮಾಡಿದರೆ ಯಾವುದೇ (ಅವಶ್ಯಕ ಸರಕುಸೇವೆಗಳನ್ನು ಬಿಟ್ಟು) ಸರಕುಸೇವೆಗಳ ಬೇಡಿಕೆ ಪೂರೈಕೆಯನ್ನು ಗಣನೀಯವಾಗಿ ನಿಯಂತ್ರಿಸಬಹುದು. ಉಕ್ರೇನ್ ಮತ್ತು ರಷ್ಯಾ ನಡುವಿನ ಯುದ್ಧ ಆರಂಭವಾದ ನಂತರ ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿ ಗೋಧಿ ಪೂರೈಕೆ ಕಡಿಮೆ ಆಗಿತ್ತು. ಆವಾಗ ಭಾರತದ ಬೆಳೆಗಾರರು ಗೋಧಿ ರಫ್ತು ಮಾಡಲು ಮುಂದೆ ಬಂದಿದ್ದರು. ಆದರೆ ಕೇಂದ್ರ ಸರಕಾರ ಗೋಧಿ ರಫ್ತನ್ನು ಬ್ಯಾನ್ ಮಾಡಿತ್ತು. ಏಕೆಂದರೆ ಗೋಧಿ ರಫ್ತಿಗೆ ಅವಕಾಶ ನೀಡಿದರೆ ನಮ್ಮ ದೇಶದೊಳಗಿನ ಪೂರೈಕೆ ಕಡಿಮೆ ಆಗಿ ಗೋಧಿ ಬೆಲೆ ಹೆಚ್ಚಾಗಬಹುದೆನ್ನುವ ಗ್ರಹಿಕೆಯಿಂದ ಸರಕಾರ ಗೋಧಿ ರಫ್ತನ್ನು ತಡೆಗಟ್ಟಿದೆ.

ಉಕ್ರೇನ್ ರಷ್ಯಾ ಯುದ್ಧ ನಂತರ ಅಮೇರಿಕಾ ರಷ್ಯಾದ ಕಚ್ಚಾ ತೈಲ ಖರೀದಿ ಮೇಲೆ ನಿಷೇಧ ಹೇರಿತ್ತು. ಆವಾಗ ರಷ್ಯಾ ಭಾರತಕ್ಕೆ ಅಂತರಾಷ್ಟ್ರೀಯ ಮಾರುಕಟ್ಟೆ ದರಕ್ಕಿಂತ ಕಡಿಮೆ ಬೆಲೆಗೆ ಕಚ್ಚಾ ತೈಲ ಮಾರಲು ಮುಂದಾಯಿತು. ರಷ್ಯಾದ ಕಡಿಮೆ ಬೆಲೆಯ ತೈಲವನ್ನು ನಮ್ಮ ಸರಕಾರಿ ಕಂಪೆನಿಗಳು ಖರೀದಿಸುವ ಬದಲು ಸರಕಾರ ಖಾಸಗಿ ಕಂಪೆನಿಗಳಿಗೆ ಖರೀದಿಸಲು ಅನುಮತಿ ನೀಡಿದೆ. ಖಾಸಗಿ ಕಂಪೆನಿಗಳು ರಷ್ಯಾದ ಕಡಿಮೆ ಬೆಲೆಯ ಕಚ್ಚಾ ತೈಲವನ್ನು ಸಂಸ್ಕರಿಸಿ ಪರದೇಶಗಳಿಗೆ ಮಾರಿ ಕೋಟಿಗಟ್ಟಲೆ ಡಾಲರ್ ಲಾಭ ಗಳಿಸಿದವು. ಒಂದು ವೇಳೆ ರಷ್ಯಾದ ಕಡಿಮೆ ಬೆಲೆಯ ಕಚ್ಚಾ ತೈಲವನ್ನು ಸರಕಾರಿ ಕಂಪೆನಿಗಳು ಖರೀದಿಸಿ ದೇಶದೊಳಗೆ ಮಾರುತ್ತಿದ್ದರೆ ಪೆಟ್ರೋಲ್, ಡಿಸೇಲ್ ಬೆಲೆ ಕನಿಷ್ಠ ರೂ.15–20 ಕಡಿಮೆ ಆಗುತ್ತಿತ್ತು. ಸರಕು ಸಾಗಾಟ ವೆಚ್ಚ ಕಡಿಮೆ ಆಗುತ್ತಿತ್ತು ಮತ್ತು ಸರಕುಗಳ ಬೆಲೆ ಈ ರೀತಿಯಲ್ಲಿ ಗಗನಕ್ಕೆ ಏರುತ್ತಿರಲಿಲ್ಲ. ಹೀಗೆ ಬೆಲೆ ಏರಿಕೆಯನ್ನು ನಿಯಂತ್ರಿಸುವ ಹಲವು ಅಸ್ತ್ರಗಳಯ ಸರಕಾರದ ಬತ್ತಳಿಕೆಯಲ್ಲಿವೆ. ತೆರಿಗೆ, ಆಮದು ರಫ್ತು, ಹಣದ ಪೂರೈಕೆ ನಿಯಂತ್ರಣ, ಪ್ರೊತ್ಸಾಹ ಧನ ಹೀಗೆ ಹಲವು ಕ್ರಮಗಳ ಮೂಲಕ ಸರಕಾರ ಬೆಲೆ ಏರಿಕೆಯನ್ನು ತಡೆಗಟ್ಟಬಹುದು.

ತೆರಿಗೆ – ಎರಡು ವಿಧದ ತೆರಿಗೆಗಳಿವೆ – ಸರಕುಸೇವೆಗಳ ಮೇಲಿನ ತೆರಿಗೆ ಮತ್ತು ಆದಾಯದ ಮೇಲಿನ ತೆರಿಗೆ. ಸರಕುಸೇವೆಗಳ ತೆರಿಗೆ ಕಡಿಮೆ ಮಾಡಿ ಆದಾಯದ ಮೇಲಿನ ತೆರಿಗೆ ಹೆಚ್ಚಿಸಿದರೆ ಸಾಮಾನ್ಯ ಗ್ರಾಹಕರ ಸ್ವಾಧೀನ ಖರೀದಿಸುವ ಶಕ್ತಿ ಹೆಚ್ಚಾಗುತ್ತದೆ. ಖರೀದಿಸುವ ಶಕ್ತಿ ಹೆಚ್ಚಾದರೆ ಬೆಲೆ ಏರಿಕೆಯ ನೋವು ಅನುಭವಕ್ಕೆ ಬರುವುದಿಲ್ಲ. ಇದರ ಬದಲು ಸರಕುಸೇವೆಗಳ ತೆರಿಗೆ ಹೆಚ್ಚು ಮಾಡಿ ಆದಾಯ ತೆರಿಗೆ ಕಡಿಮೆ ಮಾಡಿದರೆ ಸಾಮಾನ್ಯ ಗ್ರಾಹಕರ ಸ್ವಾಧೀನ ಖರೀದಿಸುವ ಶಕ್ತಿ ಕಡಿಮೆ ಆಗುತ್ತದೆ. ಆಮದು ರಫ್ತುಗಳು ಕೆಲಸ ಮಾಡುವ ವಿಧಾನ ಮೇಲಿನ ಗೋಧಿ ಮತ್ತು ಕಚ್ಚಾತೈಲಗಳ ಉದಾಹರಣೆಯಲ್ಲಿ ನೋಡಿದ್ದೇವೆ. ಮೇಲಿನ ಎರಡೂ ಉದಾಹರಣೆಗಳಲ್ಲೂ ಅನುಕೂಲಸ್ಥರ ಸ್ವಾಧೀನ ಹೆಚ್ಚು ಖರೀದಿಸುವ ಶಕ್ತಿ ಕ್ರೋಢೀಕರಣಗೊಂಡಿದೆ. ಆಹಾರ ಪದಾರ್ಥ, ಕಚ್ಚಾ ಸಾಮಾಗ್ರಿ, ಮೆಶಿನರಿ ಮುಂತಾದ ಸರಕುಗಳ ಆಮದುರಫ್ತು ಪಾಲಿಸಿಗಳನ್ನು ಏರುಪೇರು ಮಾಡುವ ಮೂಲಕ ಸರಕಾರ ಬೆಲೆ ಏರಿಕೆಯ ಮೇಲೆ ಪ್ರಭಾವ ಬೀರುತ್ತದೆ.

ಒಂದು ವೇಳೆ ಇಲ್ಲಿನ ಕಚ್ಚಾ ಸಾಮಾಗ್ರಿಗಳ ಬೆಲೆ ಹೆಚ್ಚಾಗಿದೆಯೆಂದು ಉದ್ದಿಮೆಗಳು ಸರಕಾರಕ್ಕೆ ದೂರಿದರೆ ಸರಕಾರ ಹೊರಗಿನಿಂದ ಕಚ್ಚಾ ಸಾಮಾಗ್ರಿಗಳನ್ನು (ಅಡಿಕೆ, ತೆಂಗು, ಜೋಳ, ಕಬ್ಬಿಣದ ಅದಿರು ಇತ್ಯಾದಿಗಳನ್ನು) ಆಮದು ಮಾಡಿಕೊಳ್ಳಲು ಅನುಮತಿ ನೀಡುತ್ತದೆ. ಆವಾಗ ಇಲ್ಲಿನ ಕಚ್ಚಾ ಸಾಮಾಗ್ರಿಗಳನ್ನು ಕಡಿಮೆ ಬೆಲೆಗೆ

ಪುಟ 14 ಕ್ಕೆ

ಶೈಕ್ಷಣಿಕ ವರ್ಷದ ಷರತ್ತುಗಳಿಲ್ಲದೆ, ಕಾಲಮಿತಿ ಇಲ್ಲದೆ, ಎಲ್ಲಾ ನಿರುದ್ಯೋಗಿಗಳಿಗೂ, ಅವರಿಗೆ ಉದ್ಯೋಗ ಸಿಗುವವರೆಗೂ ನಿರುದ್ಯೋಗ ಭತ್ಯೆ ನೀಡುವ ಯೋಜನೆ ಬರಬೇಕಿದೆ. ಮಾಸಿಕ ನಿರುದ್ಯೋಗ ಭತ್ಯೆಯನ್ನು ಕನಿಷ್ಠ 5,000 ರೂ. ಗಳನ್ನು ನಿಗದಿಪಡಿಸಬೇಕು. ಜೊತೆಗೆ ಹೆಚ್ಚೆಚ್ಚು ಉದ್ಯೋಗ ಸೃಷ್ಟಿ ಮಾಡುವ ಯೋಜನೆಗಳನ್ನು ರೂಪಿಸುವ ಮೂಲಕ ಉದ್ಯೋಗ ಬಯಸುವ ಎಲ್ಲರಿಗೂ ಉದ್ಯೋಗ ದೊರಕುವಂತೆ ಮಾಡಬೇಕಿದೆ. ಶೈಕ್ಷಣಿಕ ಅರ್ಹತೆಗೆ ತಕ್ಕ ಉದ್ಯೋಗ ಸಿಗುವಂತಾಗಬೇಕು. ಕೌಶಲ್ಯ ರಹಿತ ಕಾರ್ಮಿಕರಿಗೂ ಉದ್ಯೋಗ ಒದಗಿಸಿಕೊಡಬೇಕು. ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಲ್ಲಿ ವರ್ಷಕ್ಕೆ 200 ದಿನಗಳ ಕೆಲಸ ಮತ್ತು 600 ರೂ ಕೂಲಿ ನಿಗಧಿ ಮಾಡಬೇಕು. ಈ ಯೋಜನೆಯನ್ನು ನಗರ ಪ್ರದೇಶಗಳಿಗೂ ವಿಸ್ತರಿಸಬೇಕು. ಆ ಮೂಲಕ ನಿರುದ್ಯೋಗ ಸಮಸ್ಯೆ ಬಗೆಹರಿಸಲು ಸರ್ಕಾರ ಕಾರ್ಯ ಯೋಜನೆ ರೂಪಿಸುವ ಅಗತ್ಯವಿದೆ.

‘ಕರ್ನಾಟಕ ಯುವ ನಿಧಿ ಯೋಜನೆ’ ನಿರುದ್ಯೋಗಿ ಯುವಜನತೆಗೆ ಎಷ್ಟು ಸಹಕಾರಿ?

ಐದು ಗ್ಯಾರಂಟಿ ಯೋಜನೆಗಳ ಅನುಷ್ಠಾನಕ್ಕೆ ಸಚಿವ ಸಂಪುಟ ಸಭೆ ತೀರ್ಮಾನ ಕೈಗೊಂಡ ಬೆನ್ನಲ್ಲೇ ನಿರುದ್ಯೋಗಿಗಳಿಗೆ ಮಾಸಿಕ ಭತ್ಯೆ ನೀಡುವ 'ಕರ್ನಾಟಕ ಯುವ ನಿಧಿ ಯೋಜನೆ' ಜಾರಿಗೆ ಜುಲೈ 29 ರಂದು ಸರ್ಕಾರ ಅಧಿಕೃತ ಆದೇಶ ಹೊರಡಿಸಿದೆ.

ರಾಜ್ಯ ಬಜೆಟ್ ನಲ್ಲಿ ಐದು ಗ್ಯಾರೆಂಟಿ ಯೋಜನೆಗಳ ಜಾರಿಗಾಗಿ ಅಗತ್ಯವಿರುವಷ್ಟು ಹಣ ಮೀಸಲಿಡದಿದ್ದರೂ, ನಂತರ ಕೊರತೆಯನ್ನು ತುಂಬಿಕೊಳ್ಳಲು ಇತರೆ ಸಾಮಾಜಿಕ ಭದ್ರತಾ ಯೋಜನೆಗಳಿಗೆ ಮೀಸಲಿಟ್ಟಿರುವ ಅನುಧಾನಗಳನ್ನು ಇದಕ್ಕಾಗಿ ಬಳಕೆ ಮಾಡಿಕೊಳ್ಳಲು ಮುಂದಾಗಿರುವುದು ಈಗಾಗಲೇ ಎದ್ದು ಕಾಣುತ್ತಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸಮುದಾಯಗಳ ಅಭಿವೃದ್ಧಿಗೆ ಬಳಕೆ ಆಗಬೇಕಿದ್ದ ಈ ಸಾಲಿನ ಅನುದಾನದಲ್ಲಿನ 11,000 ಕೋಟಿ ರೂ.ಗಳನ್ನು ಗ್ಯಾರಂಟಿ ಯೋಜನೆಗಳಿಗಾಗಿ ಬಳಕೆ ಮಾಡಿಕೊಳ್ಳಲು ನಿರ್ಧರಿಸಿರುವುದು ಇದಕ್ಕೊಂದು ಉದಾಹರಣೆ.

ವರ್ಷದ ಹಿಂದೆ ಉತ್ತೀರ್ಣರಾದ ನಿರುದ್ಯೋಗಿಗಳಿಗಿಲ್ಲ ಭತ್ಯೆ

ಐದು ಗ್ಯಾರಂಟಿಗಳಿಗೆ ರಾಜ್ಯ ಸರ್ಕಾರ ಹೇಗೆ ಸಂಪನ್ಮೂಲ ಸಂಗ್ರಹಿಸುತ್ತದೆ ಎಂಬುದನ್ನು ಚರ್ಚೆ ಮಾಡುವ ಸಮಯದಲ್ಲೇ, ಸರ್ಕಾರ ಘೋಷಿಸಿ ಜಾರಿಗೆ ತರಲು ಹೊರಟಿರುವ 'ಯುವ ನಿಧಿ' ಯೋಜನೆ ನಿರುದ್ಯೋಗಿಗಳಿಗೆ ನಿಜಕ್ಕೂ ಸಹಕಾರಿಯಾಗಲಿದೆಯೇ? ಎಂಬ ಪ್ರಶ್ನೆಯನ್ನು ಹುಟ್ಟುಹಾಕಿದೆ. ಈ ಯೋಜನೆ ಯಡಿಯಲ್ಲಿ 2022– 23ನೇ ಸಾಲಿನಲ್ಲಿ ಉತ್ತೀರ್ಣರಾಗಿ 6 ತಿಂಗಳು (180 ದಿನಗಳು) ಉದ್ಯೋಗ ಸಿಗದ, ವೃತ್ತಿಪರ ಕೋರ್ಸ್ ಒಳಗೊಂಡು ಎಲ್ಲಾ ಪದವೀಧರರರಿಗೆ ಪ್ರತಿ ತಿಂಗಳು 3,000 ರೂ. ಹಾಗೂ ಡಿಪ್ಲೊಮಾ ಪದವೀಧರರಿಗೆ ಮಾಸಿಕ 1,500 ರೂ. ನಿರುದ್ಯೋಗ ಭತ್ಯೆ ಸಿಗಲಿದೆ. ಉದ್ಯೋಗ ಸಿಗುವವರೆಗೆ ಅಥವಾ ಗರಿಷ್ಠ 2 ವರ್ಷಗಳ ಅವಧಿಗೆ ಈ ಯೋಜನೆಯಡಿ ನಿರುದ್ಯೋಗ ಭತ್ಯೆ ಸಿಗಲಿದೆ.

> ಉದ್ಯೋಗದ ಹಕ್ಕನ್ನು ಮೂಲಭೂತ ಹಕ್ಕು ಎಂದು ಶಾಸನಬದ್ಧಗೊಳಿಸಬೇಕು. ಹಾಗೊಂದು ವೇಳೆ ಶಾಸನ ಮಾಡಿದರೆ, ಉದ್ಯೋಗ ಸಿಗುವವರೆಗೂ ನಿರುದ್ಯೋಗ ಪರಿಹಾರ ನೀಡಲಾಗುವುದು.

2022–23 ಕ್ಕೂ ಹಿಂದಿನ ಸಾಲಿನಲ್ಲಿ ಉತ್ತೀರ್ಣರಾಗಿ, ಉದ್ಯೋಗಕ್ಕಾಗಿ ಅಲೆದಾಡುತ್ತಿರುವ ನಿರುದ್ಯೋಗಿ ಯುವಜನತೆ 'ಯುವ ನಿಧಿ' ಯೋಜನೆಯಿಂದ ಪ್ರಯೋಜನ ಪಡೆಯಲು ವಂಚಿತರಾಗುತ್ತಾರೆ. ಹಾಗೂ ಈ ವರ್ಷ ಉತ್ತೀರ್ಣರಾಗಿ, 6 ತಿಂಗಳು ಉದ್ಯೋಗಕ್ಕಾಗಿ ಅಲೆದಾಡಿ, ಯಾವುದೇ ಉದ್ಯೋಗ ಸಿಗದಿದ್ದಾಗ, ನಂತರ ಯುವ ನಿಧಿ ಮೂಲಕ ಸರ್ಕಾರದಿಂದ 2 ವರ್ಷಗಳ ಕಾಲ ನಿರುದ್ಯೋಗ ಭತ್ಯೆ ಪಡೆಯುವವರು, 2 ವರ್ಷಗಳ ನಂತರವೂ ಉದ್ಯೋಗ ಸಿಗದಿದ್ದರೆ, ನಂತರವೂ ನಿರುದ್ಯೋಗಿ ಭತ್ಯೆ ಪಡೆಯಲಾಗದು. ಯುವ ನಿಧಿ ಮೂಲಕ ನಿರುದ್ಯೋಗ ಭತ್ಯೆ ಪಡೆಯುವವರು ತಮಗೆ ಉದ್ಯೋಗ ಸಿಕ್ಕ ನಂತರ ಸರ್ಕಾರಕ್ಕೆ ಮಾಹಿತಿ ನೀಡಿ, ಭತ್ಯೆ ಪಡೆಯುವುದರಿಂದ ಹೊರ ಬರಬೇಕು. ಉದ್ಯೋಗ ದೊರೆತ ನಂತರ ಘೋಷಣೆ ಮಾಡಿಕೊಳ್ಳದಿದ್ದರೆ ದಂಡ ವಿಧಿಸಲಾಗುವುದು ಎಂಬ ಎಚ್ಚರಿಕೆಯನ್ನು ಸರ್ಕಾರ ನೀಡಿದೆ.

ಪದವಿ ಶಿಕ್ಷಣ ಮುಗಿಸಿದ ನಂತರ ಉನ್ನತ ವ್ಯಾಸಂಗಕ್ಕೆ ದಾಖಲಾಗಿ, ವಿದ್ಯಾಭ್ಯಾಸ ಮುಂದುವರಿಸುವವರು, ಅಪ್ರೆಂಟಿಸ್ ವೇತನ ಪಡೆಯುತ್ತಿರುವವರು, ಸರಕಾರಿ ಅಥವಾ ಖಾಸಗಿ ಉದ್ಯೋಗ ಪಡೆದಿರುವವರು, ಸರ್ಕಾರದ ನಾನಾ ಯೋಜನೆಗಳಡಿ ಅಥವಾ ಬ್ಯಾಂಕ್ ಸಾಲ ಪಡೆದು ಸ್ವಯಂ ಉದ್ಯೋಗ ಹೊಂದಿದವರು ಈ ಯೋಜನೆಯ ಲಾಭ ಪಡೆಯಲು ಅರ್ಹರಲ್ಲ.

ನಿಗದಿತ ಅವಧಿಯ ಉದ್ಯೋಗವೂ ಉದ್ಯೋಗ ಎಂಬ ಲೆಕ್ಕಕ್ಕೆ ಬರುತ್ತದೆಯೇ?

ಇಂದು ಯಾವುದಾದರೂ ಒಂದು ಉದ್ಯೋಗವನ್ನು ಪಡೆಯುವುದೇ ಒಂದು ದೊಡ್ಡ ಸಾಹಸವಾಗಿದೆ. ಆದರಲ್ಲೂ ಸಾಮಾಜಿಕ ಭದ್ರತೆಯೊಂದಿಗೆ ಖಾಯಂ ಉದ್ಯೋಗ ಪಡೆಯುವ ಬಹು ಜನರ ಕನಸು ಕನಸಾಗಿಯೇ ಉಳಿಯುತ್ತದೆ. ಕೆಲಸಕ್ಕೆ ಸೇರುವ ಸಮಯದಲ್ಲಿ, ನಿರ್ಗಮನ ದಿನಾಂಕವನ್ನು ಪ್ರಮಾಣ ಪತ್ರದಲ್ಲಿ ನಮೂದಿಸಿದರೆ, ಅದು ನಿವೃತ್ತಿಯ ವಯಸ್ಸಿನ ಮೇಲೆ ಅವಲಂಬಿತವಾಗಿರುತ್ತದೆ. ಆದರೆ ಒಂದು ನಿರ್ದಿಷ್ಟ ಅವಧಿಗೆ ಮಾತ್ರ ಬಳಸಲು ದಿನಾಂಕವನ್ನು ಗುರುತಿಸಿ ನಂತರ ಬಿಡುಗಡೆ ಮಾಡಿದರೆ, ಅದು 'ನಿಗದಿತ ಅವಧಿಯ ಉದ್ಯೋಗ'ವಾಗಿದೆ. ಇಂದು, ನವ ಉದಾರವಾದವು ನೀಡುವ ಉದ್ಯೋಗದ ಸ್ವರೂಪವು 'ನಿಶ್ಚಿತ ಅವಧಿಯ ಉದ್ಯೋಗ' ರೂಪದಲ್ಲಿದೆ. ಖಾಯಂ ಉದ್ಯೋಗವಿಲ್ಲ ಎಂದು ಸರಕಾರ ಮತ್ತು ಖಾಸಗಿಯವರು ಜಂಟಿಯಾಗಿ ಹೇಳುತ್ತಿರುವುದು ಸ್ಪಷ್ಟವಾಗಿದೆ.

ಸರ್ಕಾರಿ ಮತ್ತು ಖಾಸಗಿ ಕಂಪನಿಗಳು ಗುತ್ತಿಗೆ ಅಥವಾ ಹೊರಗುತ್ತಿಗೆ ಮೂಲಕ ಉದ್ಯೋಗವನ್ನು ನೀಡುತ್ತವೆ. ಸರ್ಕಾರದ ಸಾಮಾಜಿಕ ಭದ್ರತಾ ಕ್ರಮಗಳ ಕೊರತೆಯಿಂದಾಗಿ ಯುವಕರು ಬಲವಂತವಾಗಿ ಇಂತಹ ಕೆಲಸ ಮಾಡುತ್ತಿದ್ದಾರೆ. ಗುತ್ತಿಗೆ ಉದ್ಯೋಗವು ಸಾಮಾಜಿಕ ಭದ್ರತೆಗೆ ಬದಲಿಯಾಗಿರಲು ಸಾಧ್ಯವಿಲ್ಲ. ಇದು ಖಾಸಗಿ ಲೂಟಿಗೆ ಮಾತ್ರ ದಾರಿ ಮಾಡಿಕೊಡುತ್ತದೆ. ಸಾಮಾಜಿಕ ಭದ್ರತಾ ಯೋಜನೆಗಳು ಇಲ್ಲದಿರುವುದು, ಕೆಲಸಕ್ಕೆ ಹೋಗುವ ಯುವಕರ ಸ್ಥಿತಿ, ಅನಿಯಮಿತ ಕೆಲಸದ ಅವಧಿ, ಕನಿಷ್ಠ ವೇತನ ಕಾನೂನು ಪಾಲಿಸದಿರುವುದು ಕರ್ನಾಟಕ ಸೇರಿದಂತೆ ಭಾರತದಾದ್ಯಂತ ಯುವಜನತೆ ರೋಗಗಳಿಗೆ ತುತ್ತಾಗುತ್ತಿರುವುದನ್ನು ಕಾಣಬಹುದು. ರಕ್ತದೊತ್ತಡ, ಆಯಾಸ, ಮಧುಮೇಹ ಮತ್ತು ಖಿನ್ನತೆಯಂತೆ. ಭಾರತದ ಮಾನವ ಸಂಪನ್ಮೂಲ ಸೂಚ್ಯಂಕವು ಸರಿಯಾದ ದಿಕ್ಕಿನಲ್ಲಿ ಸಾಗಲು ಇದು ಅತ್ಯಂತ ದೊಡ್ಡ ಅಡಚಣೆಯಾಗಿದೆ ಎಂಬುದನ್ನು ಸರ್ಕಾರಗಳು ಅರಿತುಕೊಳ್ಳಬೇಕು.

ಸರ್ಕಾರ ಹೇಳುವ ಉದ್ಯೋಗ ಯಾವುದು? ಖಾಯಂ ಅಲ್ಲದ, ಸುರಕ್ಷಿತವಲ್ಲದ, ನಿಗದಿತ ಅವಧಿಯ, ಉದ್ಯೋಗಗಳೂ ಉದ್ಯೋಗದ ಲೆಕ್ಕಕ್ಕೆ ಬರುತ್ತದೆಯೇ? ಪದವೀದರನೊಬ್ಬ ತಾನು ಪಡೆದ ಶಿಕ್ಷಣಕ್ಕೆ ಅರ್ಹವಾದ ಉದ್ಯೋಗ ಸಿಗದೆ, ಹೊಟೆಲುಗಳಲ್ಲೋ, ಮಾಲ್ ಗಳಲ್ಲೋ, ಆಹಾರ ಮತ್ತು ದಿನಸಿ ವಿತರಣಾ ಸಂಸ್ಥೆಗಳಲ್ಲಿ



ಸುರಕ್ಷಿತವಲ್ಲದ, ಖಾಯಂ ಅಲ್ಲದ, ಪಾರ್ಟ್ ಟೈಮ್ ಉದ್ಯೋಗ ಮಾಡುವವರನ್ನೂ, ತನ್ನ ಶೈಕ್ಷಣಿಕ ಅರ್ಹತೆಗೆ ತಕ್ಕ ಉದ್ಯೋಗ ಸಿಗದೆ, ಅನಿವಾರ್ಯವಾಗಿ ಆಟೋ ರಿಕ್ಷಾ ಅಥವಾ ಟ್ಯಾಕ್ಸಿ ಚಾಲಕರಾಗಿ ತಾತ್ಕಾಲಿಕ ಸ್ವಯಂ ಉದ್ಯೋಗ ಮಾಡುವವರನ್ನೂ ಉದ್ಯೋಗಿಗಳು ಎಂದು ಪರಿಗಣಿಸುವುದು ಸರಿಯೇ?

ನಿರುದ್ಯೋಗ ಪರಿಹಾರದ ಇತಿಹಾಸ

ಜಗತ್ತಿನ ಎರಡನೆಯ ಮಹಾಯುದ್ಧದ ನಂತರ ಸೋವಿಯತ್ ಒಕ್ಕೂಟದಂತಹ ಸಮಾಜವಾದವನ್ನು ಅನುಸರಿಸುವ ದೇಶಗಳ ಸಂಖ್ಯೆ ಹೆಚ್ಚಾಯಿತು. ಸಮಾಜವಾದಿ ರಾಷ್ಟ್ರಗಳು ಉದ್ಯೋಗ ಅಥವಾ ನಿರುದ್ಯೋಗಿಗಳಿಗೆ ಪರಿಹಾರವನ್ನು ಖಾತರಿಪಡಿಸಿದವು. ಇದು ಹಲವಾರು ಸಾಮಾಜಿಕ ಭದ್ರತಾ ನೀತಿಗಳನ್ನು ಸಹ ಹೊಂದಿತ್ತು. ಈ ಕಾರಣದಿಂದಾಗಿ, ಹಿಂದಿನ ಸಮಾಜವಾದಿ ದೇಶಗಳಲ್ಲಿನ ಸಾಮಾಜಿಕ ಭದ್ರತಾ ವ್ಯವಸ್ಥೆಗಳು ಪ್ರಪಂಚದ ಅನೇಕ ದೇಶಗಳ ಆಡಳಿತದ ಮೇಲೆ ಬೀರಿತು. ಇದರ ಪರಿಣಾಮವಾಗಿ ಬಂಡವಾಳಶಾಹಿ ವ್ಯವಸ್ಥೆಯನ್ನು ಅನುಸರಿಸುವ ದೇಶಗಳೂ ತಮ್ಮನ್ನು ತಾವು 'ಕಲ್ಯಾಣ ರಾಜ್ಯ' ಎಂದು ಘೋಷಿಸಿಕೊಂಡವು. ಈ ದೇಶಗಳು ತಮ್ಮ ಪ್ರಜೆಗಳಿಗೆ ಉದ್ಯೋಗ ಅಥವಾ ನಿರುದ್ಯೋಗಿಗಳಿಗೆ ತಾತ್ಕಾಲಿಕ ಪರಿಹಾರದ ನೀತಿಯನ್ನು ಸಹ ಜಾರಿಗೊಳಿಸಿದವು. ಅನೇಕ ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಈ ಸಾಮಾಜಿಕ ಭದ್ರತಾ ನೀತಿಯು ಇಂದಿಗೂ ಜಾರಿಯಲ್ಲಿದೆ. ಆದರೆ ಸೋವಿಯತ್ ಯೂನಿಯನ್ ಸೇರಿದಂತೆ ಕೆಲವು ಸಮಾಜವಾದಿ ದೇಶಗಳು ಹಿನ್ನಡೆ ಅನುಭವಿಸಿದ ನಂತರ, ಬಂಡವಾಳಶಾಹಿ ರಾಷ್ಟ್ರಗಳು ಕಾರ್ಮಿಕರ ಶೋಷಣೆಯ ನೀತಿಗಳನ್ನು ಇನ್ನಷ್ಟು ವೇಗವಾಗಿ ತೀವ್ರಗೊಳಿಸಿದವು. ಆಧುನಿಕ ಯಂತ್ರೋಪಕರಣಗಳು, ಯಾಂತ್ರೀಕೃತಗೊಂಡ ಮತ್ತು ರೋಬೋಟೈಸೇಶನ್ ಮೂಲಕ ಹೆಚ್ಚಿನ ಕೆಲಸಗಳನ್ನು ಮಾಡಿಸುವುದು, ಸ್ಪರ್ಧೆಯನ್ನು ಹೆಚ್ಚಿಸುವುದು ಮತ್ತು ಕಾರ್ಮಿಕರಿಗೆ ಉದ್ಯೋಗಾವಕಾಶಗಳನ್ನು ಕುಗ್ಗಿಸುವುದು ಇಂದು ಸಾಮಾನ್ಯವಾಗಿದೆ. ಇದು ಶೋಷಣೆ ಮತ್ತು ಬಂಡವಾಳ ಕ್ರೋಢೀಕರಣದಲ್ಲಿ ಉತ್ತಮ ಸಹಾಯವಾಗಿದೆ. ಇನ್ನೂ ವಿಶೇಷವೆಂದರೆ, ಈ ದೇಶಗಳು ನಿರುದ್ಯೋಗ ಭತ್ಯೆಗಳನ್ನು ಕೈಬಿಡುತ್ತಿವೆ.

ಗ್ರಾಮೀಣ ಉದ್ಯೋಗ ಖಾತ್ರಿ

2004ರ ಲೋಕಸಭಾ ಚುನಾವಣೆಯಲ್ಲಿ ಎಡಪಕ್ಷಗಳು 61 ಸಂಸತ್ ಸದಸ್ಯರನ್ನು ಹೊಂದಿದ್ದವು. ಯುಪಿಎ ಒಂದರ ಸರ್ಕಾರಕ್ಕೆ ಹೊರಗಿನಿಂದ ಬೆಂಬಲ ಕೊಟ್ಟಿದ್ದ ಎಡಪಕ್ಷಗಳ ಒತ್ತಡಕ್ಕೆ ಮಣಿದು, 2004ರಲ್ಲಿ ಗ್ರಾಮೀಣ ಉದ್ಯೋಗ ಖಾತ್ರಿ (ನರೇಗಾ) ಯೋಜನೆಯನ್ನು ಅನುಷ್ಠಾನಕ್ಕೆ ತಂದಿತು. ಈಗಿನ ಬಿಜೆಪಿ ಸರ್ಕಾರ ನರೇಗಾ ಯೋಜನೆಗೆ ಹಣ ಕಡಿತಗೊಳಿದುತ್ತಾ ಬಂದಿದೆ. ಇದರಿಂದಾಗಿ 100 ದಿನಗಳ ಕೆಲಸದ ಬದಲಾಗಿ ಸರಾಸರಿ 42 ಕೆಲಸದ ದಿನಗಳು ಮಾತ್ರ ಇರಲು ಕಾರಣವಾಗಿದೆ. ಬಿಜೆಪಿ ಆಡಳಿತ ಸಾಮಾಜಿಕ ಭದ್ರತಾ ಯೋಜನೆಗಳನ್ನು ಹೇಗೆ ಹಾಳು ಮಾಡುತ್ತಿದೆ ಎಂಬುದಕ್ಕೆ ಇದೊಂದು ನಿದರ್ಶನ.

ಉದ್ಯೋಗದ ಹಕ್ಕು ಮೂಲಭೂತ ಹಕ್ಕಾಗಬೇಕು

ನಿರುದ್ಯೋಗಿ ಯುವಜನತೆ ತಮ್ಮ ಆಯ್ಕೆಯ ಉದ್ಯೋಗವನ್ನು ಪಡೆಯುವವರೆಗೆ ಅಥವಾ ತಮ್ಮ ಶೈಕ್ಷಣಿಕ ಅರ್ಹತೆಗಾಗಿ ಕಾಯಲು ಸಾಧ್ಯವಿಲ್ಲ. ಬದಲಾಗಿ ಯಾವುದಾದರೂ ಕೆಲಸಕ್ಕೆ ಹೋಗಲೇಬೇಕು. ಈ ಕಾರಣದಿಂದಾಗಿ, ಕಾರ್ಮಿಕರ ಮಾರುಕಟ್ಟೆಯು ಕಿಕ್ಕಿರಿದು ತುಂಬಿದೆ. ಈ ಕಾರಣದಿಂದಾಗಿ ಕಾರ್ಮಿಕನು ತನ್ನ ಶ್ರಮ ಶಕ್ತಿಯನ್ನು ಅಗ್ಗದ ಬೆಲೆಗೆ ಮಾರಲು ಒತ್ತಾಯಿಸಲ್ಪಡುತ್ತಾನೆ. ಬಹುಶಃ ಪದವೀಧರರು ನಿರುದ್ಯೋಗ ಪರಿಹಾರವನ್ನು ಪಡೆದರೆ, ಅವರು ಬಯಸಿದ ಉದ್ಯೋಗಕ್ಕಾಗಿ ಒಂದಷ್ಟು ಸಮಯ ಕಾಯಲು ಅನುಕೂಲವಾಗುತ್ತದೆ, ಇದರಿಂದಾಗಿ ಹೆಚ್ಚಿನ ಸ್ಪರ್ಧೆ ಇರುವುದಿಲ್ಲ. ಕಾರ್ಮಿಕ ಶಕ್ತಿಯನ್ನು ಅಗ್ಗದ ಬೆಲೆಗೆ ಮಾರಲು ಬಲವಂತದ ವಾತಾವರಣವನ್ನು ಸೃಷ್ಟಿಸುವುದಿಲ್ಲ. ಈ ಹಿನ್ನೆಲೆಯಲ್ಲಿ ಉದ್ಯೋಗದ ಹಕ್ಕನ್ನು ಮೂಲಭೂತ ಹಕ್ಕು ಎಂದು ಶಾಸನಬದ್ಧಗೊಳಿಸಬೇಕು. ಹಾಗೊಂದು ವೇಳೆ ಶಾಸನ ಮಾಡಿದರೆ, ಉದ್ಯೋಗ ಸಿಗುವವರೆಗೂ ನಿರುದ್ಯೋಗ ಪರಿಹಾರ ನೀಡಲಾಗುವುದು. ಆದ್ದರಿಂದಲೇ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಶನ್ (ಡಿವೈಎಫ್ಐ) ನಂತಹ ಎಡ ಸಂಘಟನೆಗಳು ದಶಕಗಳ ಕಾಲದಿಂದ ಈ ಬೇಡಿಕೆಯನ್ನು ಇಟ್ಟು ಹೋರಾಟ ನಡೆಸುತ್ತಾ ಬಂದಿವೆ.

ನಿರುದ್ಯೋಗ ಭತ್ಯೆ ನೀಡುವ ಕರ್ನಾಟಕ ರಾಜ್ಯ ಸರ್ಕಾರದ ಇಂದಿನ 'ಯುವ ನಿಧಿ' ಯೋಜನೆಯನ್ನು ಸ್ವಾಗತಿಸುತ್ತಲೇ, ಈ ಮೇಲಿನ ಎಲ್ಲಾ ಬೇಡಿಕೆಗಳಿಗಾಗಿ ಹೋರಾಟ ಮುಂದುವರಿಸೋಣ.

–ಸಿಚಿ

ನೂಹ್‌ನಿಂದ ಗುರುಗ್ರಾಮ್ ವರೆಗೆ ಕೋಮುದಳ್ಳುರಿ

"ಕೋಮು ಧ್ರುವೀಕರಣದ ಸಂಘಟಿತ ಪ್ರಯತ್ನ"

ಹರ್ಯಾಣಾದ ಮೇವಾತ್ ಪ್ರದೇಶದಲ್ಲಿ ಕೋಮು ದಳ್ಳುರಿ ನೂಹ್‌ನಿಂದ ಪ್ರಾರಂಭವಾಗಿ ಈಗ ಗುರುಗ್ರಾಮ್‌ಗೆ ಹರಡಿ, ಐದು ಜನರ ಸಾವು ಮತ್ತು ಅಗ್ನಿಕಾಂಡದ ಘಟನೆಗಳಿಗೆ ಕಾರಣವಾಗಿದೆ. ರಾಜ್ಯ ಸರ್ಕಾರದ ಲೋಪ–ದೋಷಗಳೇ ಇದಕ್ಕೆ ಸಂಪೂರ್ಣ ಹೊಣೆಯಾಗಿದೆ ಮತ್ತು ಈ ಬೆಳವಣಿಗೆಗಳಲ್ಲಿ ಅದು ಶಾಮೀಲಾಗಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಖಂಡಿಸಿದೆ.

ಬ್ರಜ್ ಮಂಡಲ್ ಯಾತ್ರೆಯನ್ನು ನಡೆಸುವ ನೆಪದಲ್ಲಿ ಹಿಂದುತ್ವ ಶಕ್ತಿಗಳಾದ ಭಜರಂಗದಳ ಮತ್ತು ವಿಶ್ವ ಹಿಂದೂ ಪರಿಷತ್ ಸಾಮಾಜಿಕ ಮಾಧ್ಯಮಗಳಲ್ಲಿ ಅತ್ಯಂತ ಪ್ರಚೋದನಾಕಾರಿ ಪ್ರಚಾರವನ್ನು ಹರಿಯ ಬಿಟ್ಟವು. ನಾಸಿರ್ ಮತ್ತು ಜುನೈದ್‌ರನ್ನು ಹೊಡೆದು ಸಾಯಿಸಿದ ಪ್ರಕರಣದಲ್ಲಿ ಹೆಸರಿಸಲಾದ ಕುಖ್ಯಾತ ವ್ಯಕ್ತಿ ಮೋನು ಮಾನೇಸರ್ ತನ್ನ ಬೆಂಬಲಿಗರಿಗೆ ಯಾತ್ರೆಯಲ್ಲಿ ಸೇರಲು ಬಹಿರಂಗ ಕರೆ ನೀಡಿದರು.

ನೂಹ್‌ನ ಜವಾಬ್ದಾರಿಯುತ ನಾಗರಿಕರ ಮನವಿಗೆ ಕಿವಿಗೊಡದ ರಾಜ್ಯ ಸರ್ಕಾರವು ಮೋನು ಮಾನೇಸರ್ ವಿರುದ್ಧ ಕ್ರಮ ಕೈಗೊಳ್ಳುವ ಬದಲು, ಯಾವುದೇ ಮುಂಜಾಗ್ರತಾ ಕ್ರಮಗಳನ್ನೂ ಕೈಗೊಳ್ಳದೆ, ಅಥವಾ ಅಹಿತಕರ ಘಟನೆಗಳನ್ನು ತಡೆಯಲು ಸಿದ್ಧತೆಗಳನ್ನೂ ಮಾಡಿಕೊಳ್ಳದೆ ಯಾತ್ರೆಗೆ ಅನುಮತಿ ನೀಡಿತು.

ಇದು ಮುಂಬರುವ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಕೋಮು ಧ್ರುವೀಕರಣವನ್ನು ತೀಕ್ಷ್ಣಗೊಳಿಸುವ ಏಕೈಕ ಉದ್ದೇಶದಿಂದ ನಡೆಸಿರುವ ಸಂಘಟಿತ ಪ್ರಯತ್ನ ಎಂದು ನಿಸ್ಸಂದಿಗ್ಧವಾಗಿ ಖಂಡಿಸುವುದಾಗಿ ಸಿಪಿಐ(ಎಂ) ಪೊಲಿಟ್ ಬ್ಯೂರೋ ಹೇಳಿದೆ.

ಮಹಾರಾಷ್ಟ್ರದ ಥಾಣೆಯಲ್ಲಿ 17 ಕಟ್ಟಡ ಕಾರ್ಮಿಕರ ದುರಂತ ಸಾವು

ಉನ್ನತ ಮಟ್ಟದಲ್ಲಿ ಹೊಣೆಗಾರಿಕೆಯನ್ನು ನಿಗದಿಪಡಿಸಲು ಸಿಡಬ್ಲ್ಯುಎಫ್‌ಐ ಆಗ್ರಹ

ಮಹಾರಾಷ್ಟ್ರದ ಥಾಣೆ ಜಿಲ್ಲೆಯ ಮುಂಬೈ–ನಾಗ್ಪುರ ಸಮೃದ್ಧಿ ಎಕ್ಸ್‌ಪ್ರೆಸ್‌ವೇಯ ಮೂರನೇ ಹಂತದ ನಿರ್ಮಾಣದ ವೇಳೆ ಆಗಸ್ಟ್ 1 ರಂದು ಗರ್ಡರ್ ಯಂತ್ರ ಕುಸಿದುಬಿದ್ದು ಸಾವನ್ನಪ್ಪಿದ 17 ಕಟ್ಟಡ ಕಾರ್ಮಿಕರ ಕುಟುಂಬಗಳಿಗೆ ಭಾರತೀಯ ನಿರ್ಮಾಣ ಕಾರ್ಮಿಕರ ಫೆಡರೇಶನ್ (ಸಿಡಬ್ಲ್ಯುಎಫ್‌ಐ) ತೀವ್ರ ಸಂತಾಪ ವ್ಯಕ್ತಪಡಿಸಿದೆ. ಮರಣ ಹೊಂದಿದ ಕಾರ್ಮಿಕರು ಹೆಚ್ಚಾಗಿ ವಲಸೆ ಕಾರ್ಮಿಕರು.

ಈ ದುರಂತ ಘಟನೆಯು ಮತ್ತೊಮ್ಮೆ ರಾಜ್ಯ ಮತ್ತು ಕೇಂದ್ರದಲ್ಲಿ ಸಾರ್ವಜನಿಕ ಮೂಲಸೌಕರ್ಯ ನಿರ್ವಹಣೆಯನ್ನು ಖಾಸಗಿ ಕಾರ್ಪೊರೇಟ್ ಗುತ್ತಿಗೆದಾರರಿಗೆ ಉದಾರ ಮತ್ತು ಯಾವುದೇ ನಿಯಂತ್ರಣಗಳಿಲ್ಲದ ರೀತಿಯಲ್ಲಿ ಹಸ್ತಾಂತರಿಸುವುದರ ವಿನಾಶಕಾರಿ ಪರಿಣಾಮವನ್ನು ಮತ್ತೊಮ್ಮೆ ಬಯಲಿಗೆಳೆದಿದೆ. ಮಹಾರಾಷ್ಟ್ರ ರಾಜ್ಯ ರಸ್ತೆ ಅಭಿವೃದ್ಧಿ ನಿಗಮ ಸ್ವಿಸ್ ಕಂಪನಿಯೊಂದಕ್ಕೆ ಈ ಕಾಮಗಾರಿಯ ಹೊರಗುತ್ತಿಗೆ ಗುತ್ತಿಗೆ ನೀಡಿದ್ದು, ಸಮೃದ್ಧಿ ಎಕ್ಸ್‌ಪ್ರೆಸ್‌ವೇಯಲ್ಲಿ ಕಳೆದ ಆರು ತಿಂಗಳಲ್ಲಿ ಇದುವರೆಗೆ 88 ಜನರು ರಸ್ತೆ ಅಪಘಾತಗಳಲ್ಲಿ ಪ್ರಾಣ ಕಳೆದುಕೊಂಡಿದ್ದಾರೆ ಎಂಬುದನ್ನು ಗಮನಿಸಬೇಕು ಎಂದು ಸಿಡಬ್ಲ್ಯುಎಫ್‌ಐ ಹೇಳಿದೆ.

ಜೀವಹಾನಿಗೆ ಸಂತಾಪ ಸೂಚಿಸುತ್ತಲೇ ಸಿಡಬ್ಲ್ಯುಎಫ್‌ಐ ಈ ಭೀಕರ ಘಟನೆಯ ತನಿಖೆ ಮಾಡಲು ಮತ್ತು ಹೊಣೆಗಾರಿಕೆಯನ್ನು ನಿಗದಿಪಡಿಸಲು ಇಡೀ ವಿಷಯದ ಬಗ್ಗೆ ಉನ್ನತ ಮಟ್ಟದ ನ್ಯಾಯಾಂಗ ತನಿಖೆಗೆ ಒತ್ತಾಯಿಸಿದೆ. ಕೆಲವು ಗುತ್ತಿಗೆ ಕಂಪನಿಯ ಅಧಿಕಾರಿಗಳನ್ನು ಮಾತ್ರ ಬಂಧಿಸುವುದಕ್ಕೆ ಸೀಮಿತಗೊಳಿಸಿದರೆ ಅದು ಸರಕಾರದ ಅಮಾನವೀಯ ನಿರ್ಲಕ್ಷ್ಯ ಮತ್ತು ನಿರ್ದಾಕ್ಷಿಣ್ಯತೆಯನ್ನು ಮುಚ್ಚಿಹಾಕಿದಂತಾಗುತ್ತದೆ. ಸಂತ್ರಸ್ತ ಕುಟುಂಬಗಳಿಗೆ ಸೂಕ್ತ ಪರಿಹಾರ ಮತ್ತು ಉದ್ಯೋಗ ನೀಡಬೇಕು ಎಂದು ಸಿಡಬ್ಲ್ಯುಎಫ್‌ಐ ಕೇಂದ್ರ ಮತ್ತು ರಾಜ್ಯದ ಸರ್ಕಾರಗಳಿಗೆ ಒತ್ತಾಯಿಸಿದೆ. ಕಟ್ಟಡ, ದುರಸ್ತಿ ಮತ್ತು ನಿರ್ವಹಣೆ ಮತ್ತು ಸಾರ್ವಜನಿಕ ಮೂಲಸೌಕರ್ಯಗಳ ಕಾಮಗಾರಿಗಳಿಗೆ ಗುತ್ತಿಗೆಯ ಹೆಸರಿನಲ್ಲಿ ಖಾಸಗೀಕರಣವನ್ನು ನಿಲ್ಲಿಸಬೇಕು, ಬೇಡಿಕೆಯನ್ನು ಸಿಡಬ್ಲ್ಯುಎಫ್‌ಐ ಪುನರುಚ್ಚರಿಸಿದೆ. ಸಾರ್ವಜನಿಕ ಹೂಡಿಕೆಗಳನ್ನು ಮತ್ತು ಲೋಕೋಪಯೋಗಿ ಇಲಾಖೆಗಳನ್ನು ಬಲಪಡಿಸುವಲ್ಲಿ ರಾಜ್ಯದ ಮಧ್ಯಪ್ರವೇಶವನ್ನು ಹೆಚ್ಚಿಸಬೇಕು ಎಂದೂ ಸಿಡಬ್ಲ್ಯುಎಫ್‌ಐ ಕೇಂದ್ರ ಮತ್ತು ರಾಜ್ಯದ ಸರ್ಕಾರಗಳನ್ನು ಒತ್ತಾಯಿಸಿದೆ.

ದಿಲ್ಲಿಯಲ್ಲೂ ಪ್ರಚೋದನಾಕಾರಿ ಪ್ರಚಾರ ನಿಲ್ಲಿಸಲು ದಿಲ್ಲಿ ಪೋಲೀಸರಿಗೆ ಪತ್ರ

ವಿಶ್ವ ಹಿಂದೂ ಪರಿಷತ್ ಮತ್ತು ಬಜರಂಗದಳ ನಡೆಸುತ್ತಿರುವ ಪ್ರಚೋದನಕಾರಿ ಮತ್ತು ಕೋಮುವಾದಿ ಪ್ರಚಾರವನ್ನು ನಿಲ್ಲಿಸುವಂತೆ ಆಗ್ರಹಿಸಿ ಸಿಪಿಐ(ಎಂ) ದಿಲ್ಲಿ ರಾಜ್ಯ ಸಮಿತಿಯು ದಿಲ್ಲಿ ಪೊಲೀಸ್ ಆಯುಕ್ತರಿಗೆ ಪತ್ರ ಬರೆದಿದೆ. ನಂಗ್ಲೋಯಿ ಪೊಲೀಸ್ ಠಾಣೆಯ ಮುಂದೆ ಕೋಮುವಾದಿ ಮತ್ತು ಪ್ರಚೋದನಕಾರಿ ಹೇಳಿಕೆಗಳನ್ನು ನೀಡಲಾಯಿತು, ನಿರ್ದಿಷ್ಟ ಸಮುದಾಯವನ್ನು ಗುರಿಯಾಗಿಸಿಕೊಂಡು, ಅವರ ಜೀವನೋಪಾಯದ ಮೇಲೆ ದಾಳಿ ನಡೆಸಲಾಯಿತು ಮತ್ತು ದಿಲ್ಲಿಯನ್ನು ಮತ್ತೊಂದು ಯುಪಿ ಅಥವಾ ಉತ್ತರಾಖಂಡ್ ಮಾಡುವ ಘೋಷಣೆಗಳನ್ನು ಎತ್ತಲಾಯಿತು. ಇದಾದ ನಂತರವೂ ಪೊಲೀಸರು ಯಾವುದೇ ಕ್ರಮ ಕೈಗೊಂಡಂತೆ ಕಾಣುತ್ತಿಲ್ಲ. ಪೋಲೀಸರು ಇದರಲ್ಲಿ ಶಾಮೀಲಾಗಿದ್ದಾರೆ, ಮತ್ತು ಸ್ವಲ್ಪವೇ ನಿರ್ಲಕ್ಷ್ಯ ಕೂಡ ಅಪಾರ ಹಾನಿಯನ್ನುಂಟುಮಾಡುತ್ತದೆ ಎಂದು ಅವರಿಗೆ ಅರ್ಥವಾಗುತ್ತಿಲ್ಲ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ ಎಂದು ಸಿಪಿಐ(ಎಂ) ಖೇದ ವ್ಯಕ್ತಪಡಿಸಿದೆ.

ಶಾಂತಿ ಮತ್ತು ಸೌಹಾರ್ದತೆಯನ್ನು ಕಾಪಾಡಿಕೊಳ್ಳಬೇಕು ಮತ್ತು ವಿಭಜಕ ಕೋಮು ಪ್ರಚಾರಕ್ಕೆ ಬಲಿಯಾಗಬಾರದು ಎಂದು ಸಿಪಿಐ(ಎಂ) ದೆಹಲಿ ರಾಜ್ಯ ಸಮಿತಿಯು ದಿಲ್ಲಿಯ ಸಾರ್ವಜನಿಕರಿಗೆ ಮನವಿ ಮಾಡಿದೆ.

ಚಾಟ್ ಜಿಪಿಟಿ ಮತ್ತು ಮಾರ್ಕ್ಸ್ ಚಿಂತನೆಗಳು... ಪುಟ 16 ರಿಂದ

ಮಾಡಿದಂತೆಯೇ, ಕಮ್ಯುನಿಸ್ಟರು ಮತ್ತು ಕಮ್ಯುನಿಸ್ಟ್ ಪಕ್ಷಗಳಿಂದ ಮಾರ್ಕ್ಸ್ ಅವರ ಚಿಂತನೆಗಳು ಮತ್ತು ಮಾರ್ಕ್ಸ್‌ವಾದಿ ತತ್ವಗಳ ಬಗ್ಗೆ ಲಕ್ಷಾಂತರ ಮಾಹಿತಿಯನ್ನು ಅಪ್‌ಲೋಡ್ ಮಾಡಲಾಗಿದೆ. ಅದರಿಂದ ಸಂಕಲನಗೊಂಡ ಚಾಟ್ ಜಿಪಿಟಿ ಈ ರೀತಿ ಹೇಳುತ್ತದೆ. ಅದೃಶ್ಯ ಅಂತರ್ಜಾಲ ಜಗತ್ತಿನಲ್ಲಿ ಮಾರ್ಕ್ಸ್ ಕೂಡ ಸಕ್ರಿಯವಾಗಿದೆ. ಬಂಡವಾಳಶಾಹಿ ವರ್ಗವು ಹೊಂದಿರುವ ಎಲ್ಲಾ ಬೌದ್ಧಿಕ ಆಸ್ತಿಯು ಶ್ರಮಜೀವಿಗಳ ದಣಿವರಿಯದ ದುಡಿಮೆಯಿಂದ ರಚಿಸಲ್ಪಟ್ಟಿದೆ. ಆ ಎಲ್ಲಾ ಆಸ್ತಿಗಳನ್ನು ವಶಪಡಿಸಿಕೊಳ್ಳಲು ಮಾರ್ಕ್ಸ್ ಶಾಶ್ವತವಾಗಿ ಮಾರ್ಗದರ್ಶಿಸುತ್ತಾನೆ.

ಕೃಪೆ–ತೀಕದಿರ್

ರೈಲಿನಲ್ಲಿ ದ್ವೇಷ ಕೃತ್ಯಕ್ಕೆ ಖಂಡನೆ:

ವಿಷಕಾರಿ ಅಜೆಂಡಾ ದೇಶವನ್ನು ಆಳವಾದ ಪ್ರಪಾತಕ್ಕೆ ಕೊಂಡೊಯ್ಯುತ್ತಿರುವುದರ ಎಚ್ಚರಿಕೆಯ ಗಂಟೆ

ಮುಂಬೈಗೆ ತೆರಳುತ್ತಿದ್ದ ರೈಲಿನಲ್ಲಿ ಒಬ್ಬ ರೈಲ್ವೇ ಪೋಲೀಸ್ ಫೋರ್ಸ್(ಆರ್‌ಪಿಎಫ್‌ಪಿ) ಕಾನ್ಸ್‌ಟೇಬಲ್ ತನ್ನ ಮೇಲಧಿಕಾರಿ ಮತ್ತು ಇತರ ಮೂವರು ಪ್ರಯಾಣಿಕರನ್ನು ಹತ್ಯೆಗೈದ ಭಯಾನಕ ಘಟನೆ ವರದಿಯಾಗಿದೆ. ಅದನ್ನು ತನಿಖೆ ಮಾಡುವುದಾಗಿ ಹೇಳಿದ ಅಧಿಕಾರಿಗಳ ಆರಂಭಿಕ ವಿವರಣೆಯಂತೆ ಇದನ್ನು ವಿಚಲಿತ ಮನಸ್ಸಿನ ಕ್ರಿಯೆಗಳಾಗಿ ನೋಡಬಾರದು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ. ಕೊಲ್ಲಲ್ಪಟ್ಟ ಎಲ್ಲಾ ಪ್ರಯಾಣಿಕರು ಮುಸ್ಲಿಮರು. ಕಾನ್ಸ್‌ಸ್ಟೆಬಲ್ ಒಂದು ಕೋಚ್‌ನಿಂದ ಇನ್ನೊಂದು ಕೋಚ್‌ಗೆ ಹೋಗಿ ಉದ್ದೇಶಪೂರ್ವಕವಾಗಿ ಮುಸ್ಲಿಮರನ್ನು ಗುರಿಯಾಗಿಸಿಕೊಂಡಿದ್ದಾನೆ. ಅಧಿಕಾರದಲ್ಲಿರುವವರು ಹಗಲಿರುಳು ಮಾಡುತ್ತಿರುವ ದ್ವೇಷ ಭಾಷಣಗಳು, ಮುಸ್ಲಿಂ ಸಮುದಾಯವನ್ನು ರಾಕ್ಷಸರೆಂಬಂತೆ ಚಿತ್ರಿಸುವುದು ಮತ್ತು ಅವರ ವಿರುದ್ಧ ಕೋಮುವಾದದ ನಿಘಂಟಿನಲ್ಲಿರುವ ಪ್ರತಿಯೊಂದು ನಿಂದನೆಯ ಪದಗಳನ್ನು ಬಳಸುತ್ತಿರುವುದರ ನೇರ ಪರಿಣಾಮ ಇದು. ಇನ್ನೂ ದೃಢೀಕರಿಸಬೇಕಾದ ವೀಡಿಯೊವೊಂದು, ವ್ಯಕ್ತಿಯೊಬ್ಬ ಮುಸ್ಲಿಮರನ್ನು ಪಾಕಿಸ್ತಾನ ಮುನ್ನಡೆಸುತ್ತಿದೆ ಮತ್ತು ಅವರು ಭಾರತದಲ್ಲಿ ಬದುಕ ಬಯಸಿದರೆ ಮೋದಿ ಮತ್ತು ಯೋಗಿಗೆ ಮತ ಹಾಕಬೇಕು ಎಂದು ನಿರ್ದಿಷ್ಟವಾಗಿ ಉಲ್ಲೇಖಿಸಿರುವುದನ್ನು ತೋರಿಸುತ್ತದೆ. ಬಿಜೆಪಿ ನಾಯಕರು ಬಳಸುವ ಭಾಷೆಯನ್ನೇ ಆ ವ್ಯಕ್ತಿ ಪ್ರತಿಧ್ವನಿಸುತ್ತಿದ್ದ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಟಿಪ್ಪಣಿ ಮಾಡಿದೆ.

ದ್ವೇಷದ ಭಾಷಣವು ದೇಶಕ್ಕೆ ವಿನಾಶಕಾರಿಯಾಗುವ ಪರಿಣಾಮಗಳತ್ತ ಒಯ್ಯುತ್ತದೆ, ಇದರ ವಿರುದ್ಧ ಕಠಿಣವಾಗಿ ವ್ಯವಹರಿಸಬೇಕು ಎಂದು ಸುಪ್ರೀಂ ಕೋರ್ಟ್ ಪದೇ ಪದೇ ಎಚ್ಚರಿಸಿದೆ. ಇನ್ನೂ ಆತಂಕಕಾರಿ ಸಂಗತಿಯೆಂದರೆ, ಇಂತಹ ಕೋಮುವಾದಿ ಚಿಂತನೆಯು ಅಧಿಕೃತವಾಗಿ ಭದ್ರತೆಯನ್ನು ಒದಗಿಸುವ ಕರ್ತವ್ಯಕ್ಕೆ ನೇಮಕರಾದವರ ಮೇಲೆ ಪರಿಣಾಮ ಬೀರುತ್ತಿದೆ ಎಂಬುದನ್ನು ಈ ಘಟನೆಯು ಸ್ಪಷ್ಟವಾಗಿ ತೋರಿಸುತ್ತದೆ ಎಂದಿರುವ ಪೊಲಿಟ್‌ಬ್ಯುರೊ ಈ ಖಂಡನೀಯ ಘಟನೆಯು ಭಾರತಕ್ಕೆ, ಹಿಂದುತ್ವ ಶಕ್ತಿಗಳ ವಿಷಕಾರಿ ಅಜೆಂಡಾ ದೇಶವನ್ನು ಆಳವಾದ ಪ್ರಪಾತಕ್ಕೆ ಕೊಂಡೊಯ್ಯುತ್ತಿದೆ ಎಂಬುದರ ಎಚ್ಚರಿಕೆಯ ಗಂಟೆಯಾಗಿದೆ ಎಂದು ಹೇಳಿದೆ.

ಬೆಲೆ ಏರಿಕೆಗೆ ಕಾರಣಗಳೇನು..... ಪುಟ 8 ರಿಂದ

ಮಾರಾಟ ಮಾಡಬೇಕಾಗುತ್ತದೆ. ಅಂದರೆ ಇಲ್ಲಿನ ಕಚ್ಚಾ ಸಾಮಾಗ್ರಿ ಉತ್ಪಾದಕರ ಆದಾಯ ಕಡಿಮೆ ಆಗುತ್ತದೆ. ಹಣದ ಪೂರೈಕೆಯ ನಿಯಂತ್ರಣ ಹಾಗು ಸರಕಾರದ ಪ್ರೋತ್ಸಾಹಗಳು ಕೆಲಸ ಮಾಡುವ ವಿಧಾನವನ್ನು ಮೇಲಿನ ಪ್ಯಾರಾಗಳಲ್ಲಿ ನೋಡಿದ್ದೇವೆ. ಒಟ್ಟಾರೆಯಾಗಿ ಹೇಳುವುದಾದರೆ ಬೆಲೆ ಏರಿಕೆಯನ್ನು ನಿಯಂತ್ರಿಸುವ ಶಕ್ತಿ ಸರಕಾರಕ್ಕೆ ಇದೆ. ಆದರೆ ಸರಕಾರದ ಅಭಿವೃದ್ಧಿ ನೀತಿಯ ಜಿಡಿಪಿ ಗ್ರೋಥ್‌ಗೆ ಮಹತ್ವ ನೀಡುವುದರಿಂದ ಆರ್ಥಿಕ ನೀತಿಗಳು ದೊಡ್ಡ ವ್ಯಾಪಾರ, ಉದ್ದಿಮೆ, ಕೃಷಿ ಪರ ಇರುತ್ತವೆ. ಸಾಮಾನ್ಯರ ಗ್ರಾಹಕರ ಸ್ವಾಧೀನ ಖರೀದಿಸುವ ಶಕ್ತಿ ತುಂಬುವುದು ಸರಕಾರದ ಆದ್ಯತೆ ಆಗಿಲ್ಲ. ಈ ಆದ್ಯತೆಗಳು ಬದಲಾಗದಿದ್ದರೆ ಸರಕಾರದ ಆರ್ಥಿಕ ನೀತಿಗಳು ಬದಲಾಗುವುದಿಲ್ಲ.

> **ಏಕೆ ಬೆಲೆ ಏರಿಕೆ ಆಗುತ್ತಿದೆ? ಬೆಲೆ ಏರಿಕೆಗೆ ರಾಜ್ಯ ಸರಕಾರದ ನೀತಿಗಳು ಕಾರಣವೇ? ಅಥವಾ ಕೇಂದ್ರ ಸರಕಾರದ ಆರ್ಥಿಕ ನೀತಿಗಳು ಕಾರಣವೇ? ಇತ್ಯಾದಿ ಪ್ರಶ್ನೆಗಳು ನಮ್ಮ ಮುಂದಿವೆ.**

ಸರಕಾರಗಳ ಪಾಲು

ಮೇಲಿನ ಪ್ಯಾರಾಗಳಲ್ಲಿ ಏಕೆ ಬೆಲೆ ಏರಿಕೆ ಆಗುತ್ತಿದೆ ಎನ್ನುವುದನ್ನು ವಿವರಿಸಿದ್ದೇನೆ. ಈ ವಿವರಣೆ ಹಿನ್ನೆಲೆಯಲ್ಲಿ ಬೆಲೆ ಏರಿಕೆಗೆ ರಾಜ್ಯ ಸರಕಾರ ಕಾರಣವೇ? ಅಥವಾ ಕೇಂದ್ರ ಸರಕಾರ ಕಾರಣವೇ? ತೀರ್ಮಾನಿಸುವುದು. ತೆರಿಗೆ, ಆಮದು ರಫ್ತು, ಹಣದ ಪೂರೈಕೆ ನಿಯಂತ್ರಣ, ಪ್ರೋತ್ಸಾಹ ಧನ ಇವೆಲ್ಲ ಸರಕಾರ ಸ್ವಾಧೀನ ಇರುವ ಬೆಲೆ ಏರಿಕೆ ನಿಯಂತ್ರಿಸುವ ಅಸ್ತ್ರಗಳು. ಇವುಗಳಲ್ಲಿ ಹೆಚ್ಚಿನ ಕ್ರಮಗಳು ಕೇಂದ್ರ ಸರಕಾರದ ಸ್ವಾಧೀನ ಇವೆ. ಹಿಂದೆ ಕೇಂದ್ರ ಸರಕಾರ ಆದಾಯ ತೆರಿಗೆ, ಕಾರ್ಪೋರೇಟ್ ತೆರಿಗೆ, ಸೆಂಟ್ರಲ್ ಎಕ್ಸೈಸ್, ಸೆಂಟ್ರಲ್ ಕಸ್ಟಮ್ಸ್‌ಗಳನು ಸಂಗ್ರಹಿಸುತ್ತಿತ್ತು. ಜಿಎಸ್‌ಟಿ ಬಂದ ನಂತರ ರಾಜ್ಯಗಳು ಸಂಗ್ರಹಿಸುತ್ತಿದ್ದ ಶೇ.80ರಷ್ಟು ಪರೋಕ್ಷ ತೆರಿಗೆಯನ್ನು ಕೇಂದ್ರ ಸರಕಾರ ಸಂಗ್ರಹಿಸುತ್ತಿದೆ. ಮೂರನೇ ಎರಡರಷ್ಟು ತೆರಿಗೆ ವಿಧಿಸುವ ಮತ್ತು ಸಂಗ್ರಹಿಸುವ ಅಧಿಕಾರ ಕೇಂದ್ರಕ್ಕಿದೆ. ಕೇಂದ್ರ ಸಂಗ್ರಹಿಸುವ ತೆರಿಗೆಯಲ್ಲಿ ರಾಜ್ಯಗಳ ಪಾಲು ಶೇ.41 ಮಾತ್ರ, ಆಮದು, ರಫ್ತನ್ನು ನಿಯಂತ್ರಿಸುವುದು, ಹಣದ ಪೂರೈಕೆ ನಿಯಂತ್ರಿಸುವುದು ಇತ್ಯಾದಿಗಳೆಲ್ಲ ಕೇಂದ್ರ ಸರಕಾರದ ಸ್ವಾಧೀನ ಇವೆ. ಆದುದರಿಂದ ಬೆಲೆ ಏರಿಕೆಯ ಬಹುಭಾಗ ಜವಾಬ್ದಾರಿ ಕೇಂದ್ರ ಸರಕಾರದ್ದಾದರೆ ಅಲ್ಪಭಾಗ ಜವಾಬ್ದಾರಿ ರಾಜ್ಯಗಳದ್ದು.

ಕೇಂದ್ರ ಸರಕಾರದ ಜಿಡಿಪಿಗೆ ಮಹತ್ವ ನೀಡುವ ಅಭಿವೃದ್ಧಿ ನೀತಿಗಳು ಉತ್ಪಾದಕರಪರ ಇವೆ. ಉತ್ಪಾದಕರ ಸಾಮರ್ಥ್ಯ ವೃದ್ಧಿಸಲು ಅವರಿಗೆ ಕಡಿಮೆ ಬಡ್ಡಿಗೆ ಸಾಲ, ಸಾಲ ಕಟ್ಟದಿದ್ದರೆ ಸಾಲಮನ್ನಾ, ರಫ್ತನ್ನು ಪ್ರೋತ್ಸಾಹಿಸಲು ಸಬ್ಸಿಡಿ, ಬಡಜನರ ತೆರಿಗೆ ಬಳಸಿಕೊಂಡು ರಸ್ತೆ, ರೈಲು ಇತ್ಯಾದಿ ಮೂಲಸೌಕರ್ಯಗಳನ್ನು ಸೃಷ್ಟಿಸುವುದು ಇತ್ಯಾದಿ ಕ್ರಮಗಳನ್ನು ಕೈಗೊಳ್ಳುತ್ತದೆ. ಆದರೆ ಇದೇ ಉತ್ಪಾದಕರು ಉತ್ಪಾದಿಸುವ ಸರಕುಸೇವೆಗಳನ್ನು ಖರೀದಿಸಿ ಅನುಭವಿಸುವ ಸಾಮಾನ್ಯ ಗ್ರಾಹಕರ ಸ್ವಾಧೀನ ಖರೀದಿಸುವ ಶಕ್ತಿ ತುಂಬುವ ಕಾರ್ಯಕ್ರಮಗಳು ತುಂಬಾ ಕಡಿಮೆ ಇವೆ. ಕೇಂದ್ರಕ್ಕೆ ಹೋಲಿಸಿದರೆ ಕೆಲವು ರಾಜ್ಯ ಸರಕಾರಗಳು ಅದರಲ್ಲೂ ದಕ್ಷಿಣದ ರಾಜ್ಯಗಳು ವಿವಿಧ ಜನಪರ ಕಾರ್ಯಕ್ರಮಗಳ ಮೂಲಕ ಜನರ ಖರೀದಿಸುವ ಶಕ್ತಿ ಹೆಚ್ಚಿಸಲು ಪ್ರಯತ್ನಿಸುತ್ತಿವೆ. ಈ ವರ್ಷ ಕರ್ನಾಟಕ ಸರಕಾರ ನೀಡುತ್ತಿರುವ 5 ಗ್ಯಾರಂಟಿಗಳು ಇದೇ ಸಾಲಿನಲ್ಲಿ ಬರುವ ಕಾರ್ಯಕ್ರಮಗಳು. ಈ ಎಲ್ಲ ಕಾರ್ಯಕ್ರಮಗಳು ಜನರ ಸ್ವಾಧೀನ 4–5 ಸಾವಿರದಷ್ಟು ಖರೀದಿಸುವ ಶಕ್ತಿ ನೀಡಬಹುದು. ಅಷ್ಟರ ಮಟ್ಟಿಗೆ ಕರ್ನಾಟಕದ ಸಾಮಾನ್ಯ ಗ್ರಾಹಕರು ಬೆಲೆ ಏರಿಕೆಯನ್ನು ನೋವನ್ನು ಸಹಿಸಿಕೊಳ್ಳಬಹುದು. ■

ಇ–ಶ್ರಮ್
ದೊಡ್ಡ ಭರವಸೆ ನಿಜವಾಗಲಿಲ್ಲ, ನಿಜವೂ ಅಲ್ಲ



ಕೇಂದ್ರದಲ್ಲಿ ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದು ಮೇ 30 ಕ್ಕೆ 9 ವರ್ಷಗಳು ಕಳೆದಿವೆ. ಮೋದಿ ಆಡಳಿತದ ಸಾಧನೆಗಳ ಬಗ್ಗೆ ಬಿಜೆಪಿ, ಸಂಘಪರಿವಾರ ಹಾಗೂ ಕಾರ್ಪೊರೇಟ್ ಒಡೆತನದ ಮಾಧ್ಯಮಗಳು ಮತ್ತು ಸಾಮಾಜಿಕ ಜಾಲತಾಣಗಳಲ್ಲಿ ನಿರಂತರವಾಗಿ ಪ್ರಚಾರ ಮಾಡುತ್ತಿದ್ದಾರೆ. ಅವರು ಸಾಧನೆಗಳೆಂದು ಹೇಳುತ್ತಿರುವುದೆಲ್ಲಾ ನಿಜವಾಗಿಯೂ ಸಾಧನೆಗಳೇ? ಅವುಗಳು ಜನಪರವಾಗಿವೆಯೇ? ರಾಷ್ಟ್ರದ ಹಿತ ರಕ್ಷಿಸುವಂಥವೇ? ಸರ್ಕಾರದ ಈ ಎಲ್ಲಾ ಯೋಜನೆಗಳ ನಿಜವಾದ ಉದ್ದೇಶಗಳೇನು? ನವ ಉದಾರೀಕರಣ ನೀತಿಗಳ ಜಾರಿಗೆ ಈ ಯೋಜನೆಗಳನ್ನು ರೂಪಿಸಿ ಜಾರಿಗೆ ತರಲಾಗುತ್ತಿದೆಯೇ? ಭಾರತದ ಪ್ರತಿಯೊಂದು ವಲಯಗಳನ್ನು ಕಾರ್ಪೊರೇಟ್ ಸಂಸ್ಥೆಗಳಿಗೆ ಒಪ್ಪಿಸಲು ಏನೆಲ್ಲಾ ಯೋಜನೆಗಳನ್ನು ಜಾರಿಗೆ ತರಲಾಗಿದೆ. ವಿದೇಶಿ ನೇರ ಬಂಡವಾಳ ಹೂಡಿಕೆ (FDI)ಗೆ ಮುಕ್ತ ಅವಕಾಶದ ಕಾರಣದಿಂದ ದೇಶದ ಹಲವು ವಲಯಗಳ ಮೇಲೆ ವಿದೇಶಿ ಹಣಕಾಸು ಸಂಸ್ಥೆಗಳು ಹೇಗೆಲ್ಲಾ ಹಿಡಿತ ಸಾಧಿಸಿವೆ. ಖಾಸಗೀಕರಣ ನೀತಿಗೆ ಅನುಗುಣವಾಗಿ ರೂಪಿಸಲಾಗಿರುವ ಯೋಜನೆಗಳನ್ನು 'ಜನಪರ ಯೋಜನೆಗಳು' ಎಂದು ಹೇಗೆಲ್ಲಾ ನಂಬಿಸ ತೊಡಗಿದ್ದಾರೆ. ಈ ಕುರಿತು, ಬಿಜೆಪಿ ಹೇಳುತ್ತಿರುವ ಒಂದೊಂದೇ "ಸಾಧನೆಗಳ" ವಿಮರ್ಶಾತ್ಮಕ ಲೇಖನಗಳ ಸರಣಿ.

ಮೋದಿ 9 ವರ್ಷಗಳು ಸಾಧನೆಗಳೆಂಬ ಸುಳ್ಳಿನ ಕಂತೆ! ಭಾಗ – 10

ಇ–ಶ್ರಮ್ ಕಾರ್ಡ್ ಅಥವಾ 'ಶ್ರಮಿಕ್ ಕಾರ್ಡ್' ಯಾರೆಲ್ಲಾ ಮಾಡಿಸಿದ್ದೀರಿ? ಅಥವಾ ಅಸಂಘಟಿತ ಕಾರ್ಮಿಕರಿಗೆ ತಾವೇ ಮುಂದೆ ನಿಂತು ಮುತುರ್ಜಿಯಿಂದ ಮಾಡಿಸಿಕೊಟ್ಟಿದ್ದೀರಿ? ಹೀಗೆ ಕಾರ್ಡ್ ಮಾಡಿಸುವಾಗ ಇದರಿಂದ ಏನೆಲ್ಲಾ ಸೌಲಭ್ಯಗಳು ಸಿಗುತ್ತವೆ ಎಂದು ಭರವಸೆ ಇಟ್ಟುಕೊಂಡಿದ್ದಿರಿ? (3,000 ರೂ. ಪಿಂಚಣಿ, 2 ಲಕ್ಷ ರೂ ಅಪಘಾತ ಪರಿಹಾರ... ಇತ್ಯಾದಿ) ಈ ಕಾರ್ಡ್ ಪಡೆದ ಯಾರಿಗಾದರೂ, ನೀವು ನಂಬಿದ್ದ ಅಥವಾ ನೀವು ಬೇರೆಯವರಿಗೆ ಹೇಳಿದ ಯಾವುದಾದರೂ ಪ್ರಯೋಜನ ದೊರೆತಿದೆಯೇ? ಖಂಡಿತಾ ಸಿಕ್ಕಿರಲಾರದು. ಏಕೆಂದರೆ, ಇ–ಶ್ರಮ್ ಕಾರ್ಡ್ ಪಡೆದವರಿಗೆ ಸರ್ಕಾರದಿಂದ ಯಾವುದೇ ಉಚಿತ ಸೌಲಭ್ಯದ ಯೋಜನೆಗಳಿಲ್ಲ.

ಸಿದ್ದಯ್ಯ ಸಿ.

ಮತ್ತೇಕೆ ಬೇಕು ಇ–ಶ್ರಮ್ ಕಾರ್ಡ್ ಎಂಬ ಪ್ರಶ್ನೆ ಮೂಡುತ್ತದಲ್ಲವೇ? ಒಂದು ಉದಾಹರಣೆ ಇದಕ್ಕೆ ಉತ್ತರ ಕೊಡಬಹುದೇನೋ. ನಾವು ಯಾವುದಾದರೂ ಒಂದು ಸೂಪರ್ ಮಾರ್ಕೆಟ್ ಒಳ ಪ್ರವೇಶಿಸುತ್ತಿರುವಂತೆ ಬಾಗಿಲಲ್ಲೇ ಇಟ್ಟಿರುವ ಒಂದು ಖಾಲಿ ಬುಟ್ಟಿಯನ್ನು ಕೈಗೆ ತೆಗೆದುಕೊಂಡು ಒಳಹೋಗುತ್ತೇವೆ. ಈ ಬುಟ್ಟಿ ಉಚಿತ, ಆದರೆ, ನಂತರ ನಾವು ಆಯ್ಕೆ ಮಾಡಿಕೊಂಡು ಬುಟ್ಟಿಗೆ ಹಾಕುವ ವಸ್ತುಗಳಿಗೆ ಹಣ ಕೊಡಬೇಕು. ಹಣ ಇಲ್ಲದಿದ್ದರೆ, ಖಾಲಿ ಬುಟ್ಟಿ ಹೊತ್ತು ಅಲ್ಲಿ ತಿರುಗಬೇಕಷ್ಟೆ.

ಸರ್ಕಾರ ಹೇಳುವ ಸಾಮಾಜಿಕ ಭದ್ರತಾ ಯೋಜನೆಗಳ ಲಾಭ ಪಡೆಯಬೇಕಾದರೆ, ಇ–ಶ್ರಮ್ ಕಾರ್ಡ್ ಅವಶ್ಯಕತೆ ಇದೆ ಎಂದು ಸರ್ಕಾರ ಹೇಳುತ್ತದೆ. ಇ–ಶ್ರಮ್ ಕಾರ್ಡ್ ಮೂಲಕವೇ ಈ ಯೋಜನೆಗಳ ಫಲಾನುಭವಿಗಳಿಗೆ ಸಾಮಾಜಿಕ ಭದ್ರತಾ ಯೋಜನೆಗಳ ಲಾಭ ಒದಗಿಸಿಕೊಡಬೇಕು ಎಂದು ಸರ್ಕಾರ ಹೇಳುತ್ತಿದೆ. ಇ–ಶ್ರಮ್ ಕಾರ್ಡ್ ಇಲ್ಲದಿದ್ದರೂ ಇದುವರೆಗೆ ಸಾಮಾಜಿಕ ಭದ್ರತೆಯ ಯೋಜನೆಗಳ ಲಾಭ ಸಿಗುತಿತ್ತಲ್ಲವೇ? ಮತ್ತೇಕೆ ಇ–ಶ್ರಮ್ ಕಾರ್ಡ್ ಬೇಕಿದೆ? ಈ ಪ್ರಶ್ನೆ ಸಹಜವಾಗಿ ಮೂಡುತ್ತದೆ.

ಸುಪ್ರೀಂ ಕೋರ್ಟ್ ಆದೇಶದ ನಂತರ

ಕೋವಿಡ್–19 ರ ಮೊದಲ ಅಲೆಯ ಸಮಯದಲ್ಲಿ ಪ್ರಧಾನಿ ಮೋದಿಯವರು ದಿಡೀರ್ ಆಗಿ ರಾತ್ರೋ ರಾತ್ರಿ ಲಾಕ್ ಡೌನ್ ಘೋಷಣೆ ಮಾಡಿಬಿಟ್ಟರು. ಜನರು ತಮ್ಮ ಅಗತ್ಯಗಳಿಗೆ ಪೂರ್ವ ಸಿದ್ದತೆ ಮಾಡಿಕೊಳ್ಳಲು ಅವಕಾಶವೇ ಇಲ್ಲದಂತಾಯಿತು. ಏಕಾ ಏಕಿ ಕೆಲಸ ಇಲ್ಲದಂತಾಯ್ತು. ಹತ್ತಾರು ಕೋಟಿ ಅಸಂಘಟಿತ ಕಾರ್ಮಿಕರ ಮನೆಯಲ್ಲಿ ಆಹಾರದ ಶೇಕರಣೆ ಇರಲಿಲ್ಲ. ಒಂದು ದಿನ ಕೂಲಿ ಸಿಗದಿದ್ದರೆ ಹಸಿವಿನಿಂದ ಜೀವನ ಸಾಗಿಸುವ ಲಕ್ಷಾಂತರ ಕಡು ಬಡತನದ ಕುಟುಂಬಗಳು ಇರುವ ಭಾರತದಲ್ಲಿ ಅನಿರ್ಧಿಷ್ಟಾವಧಿ ಲಾಕ್ ಡೌನ್ ಘೋಷಣೆ ಸಾವು ಬದುಕಿನ ಹೋರಾಟವಾಗಿ ಪರಿಣಮಿಸಿತು. ಸಹಸ್ರಾರು ಜನರು ಹಸಿವಿನಿಂದ ಸತ್ತರು. ಸಾರಿಗೆ ಸಂಚಾರವೂ ಸ್ಥಗಿತಗೊಂಡಿದ್ದರಿಂದಾಗಿ ತಮ್ಮ ತಮ್ಮ ಊರುಗಳಿಗೆ, ಸಾವಿರಾರು ಕಿಮೀ ದೂರ, ಎಳೆ ಮಕ್ಕಳು, ಹಿರಿಯ ನಾಗರೀಕರು, ಗರ್ಬಿಣಿ, ಬಾಣಂತಿಯರು ಸೇರಿದಂತೆ ಲಕ್ಷಾಂತರ ವಲಸೆ ಕಾರ್ಮಿಕರು ನಡೆದೆ ಹೋಗುತ್ತಿದ್ದ ದೃಶ್ಯ ಇಂದಿಗೂ ಕಣ್ಣಿಗೆ ಕಟ್ಟಿದಂತಿದೆ. ಈ ರೀತಿ ನಡೆದು ಹೋಗುವಾಗ ಸಾವಿರಾರು ಕಾರ್ಮಿಕರು ದಾರಿಯಲ್ಲೇ ಜೀವ ಬಿಟ್ಟಿದ್ದಾರೆ. ದಿನಸಿ ಅಂಗಡಿಗಳೂ ಮುಚ್ಚಲ್ಪಟ್ಟವು. ಲಾಕ್ ಡೌನ್ ನ ಅನಾಹುತಗಳನ್ನು ಮತ್ತೊಂದು ಲೇಖನದಲ್ಲಿ ನೆನಪಿಸಿಕೊಳ್ಳೋಣ.

ಲಾಕ್ ಡೌನ್ ಗೂ, ಇ–ಶ್ರಮ್ ಕಾರ್ಡ್ ಯೋಜನೆಗೂ ಏನು ಸಂಬಂಧ ಎಂಬ ಪ್ರಶ್ನೆ ಓದುಗರಲ್ಲಿ ಮೂಡಿರಬಹುದು. ಸಂಭಂದ ಇದೆ. ವಲಸೆ ಕಾರ್ಮಿಕರ ದುಸ್ಥಿತಿಗೆ ಪರಿಹಾರ ಕಂಡುಕೊಳ್ಳುವ ಪ್ರಯತ್ನವಾಗಿ 'ಭಂದುವಾ ಮುಕ್ತಿ ಮೋರ್ಚಾ' ಎಂಬ ಸಂಘಟನೆಯು ಅಸಂಘಟಿತ ಕಾರ್ಮಿಕರ ನೆರವಿಗೆ ಸರ್ಕಾರ ಮುಂದಾಗುವಂತೆ ಸರ್ಕಾರಕ್ಕೆ ಆದೇಶ ನೀಡಬೇಕು ಎಂದು ಸುಪ್ರೀಂ ಕೋರ್ಟ್ ಮೊರೆಹೋದರು. ವಿಚಾರಣೆಯನ್ನು ಕೈಗೆತ್ತಿಕೊಂಡ ಸುಪ್ರೀಂ ಕೋರ್ಟ್ ದೇಶದ ಅಸಂಘಟಿತ ಕಾರ್ಮಿಕರ ಅಂಕಿ ಅಂಶಗಳ ಕುರಿತಾದ ಮಾಹಿತಿ ನೀಡುವಂತೆ ಕೇಂದ್ರ ಸರ್ಕಾರವನ್ನು ಕೇಳಿತು. ಅಂತಹ ನಿಖರವಾದ ಮಾಹಿತಿ ಸರ್ಕಾರದ ಬಳಿ ಇರಲಿಲ್ಲ.

ಇದಕ್ಕೂ ಮೊದಲು, ದೇಶದಲ್ಲಿ ವಲಸೆ



ಕಾರ್ಮಿಕರು, ಕೌಶಲ್ಯರಹಿತ ಮತ್ತು ಕೃಷಿ ಕಾರ್ಮಿಕರ ದಾಖಲೆಯನ್ನು ಸರ್ಕಾರವು ಹೊಂದಿದೆಯೇ ಎಂಬ ಸಂಸತ್ ಸದಸ್ಯರ ಪ್ರಶ್ನೆಗೆ ಉತ್ತರವಾಗಿ. "ಅಂತಹ ಯಾವುದೇ ನೋಂದಣಿ" ಯನ್ನು ನಿರ್ವಹಿಸಲಾಗಿಲ್ಲ" ಎಂದು ಸರ್ಕಾರ ಸಂಸತ್ತಿಗೆ ತಿಳಿಸಿತ್ತು.

NUDW ನಲ್ಲಿ ಎಲ್ಲಾ ಅಸಂಘಟಿತ ಕಾರ್ಮಿಕರ ನೋಂದಣಿ

ಲಾಕ್‌ಡೌನ್ ಕಾರಣದಿಂದ ವಲಸೆ ಕಾರ್ಮಿಕರ ಮೇಲಿನ ತೀವ್ರ ಸಂಕಷ್ಟಗಳ ಏರಿಕೆಗೆ ಒಂದು ದೊಡ್ಡ ಕಾರಣವೆಂದರೆ, ಭಾರತದಲ್ಲಿ ವಲಸೆ ಕಾರ್ಮಿಕರ ಡೇಟಾದ ಅಸಹಜ ಕೊರತೆ. ದತ್ತಾಂಶದ ಕೊರತೆಯಿಂದಾಗಿ ಮತ್ತು ದುರ್ಬಲವಾಗಿ ಜಾರಿಗೊಳಿಸಲಾದ ಲಾಕ್‌ಡೌನ್ ಕಾರಣದಿಂದ ವಲಸೆ ಕಾರ್ಮಿಕರ ಮೇಲೆ ಬೀರುವ ಪರಿಣಾಮವನ್ನು ಪರಿಣಾಮಕಾರಿಯಾಗಿ ಯೋಜಿಸಲು ಸರ್ಕಾರಕ್ಕೆ ಸಾಧ್ಯವಾಗಲಿಲ್ಲ. ತನ್ನ ಎರಡನೇ ನಿರ್ದೇಶನದ ಮೂಲಕ ಸುಪ್ರೀಂ ಕೋರ್ಟ್ ಜುಲೈ 31, 2021 ರೊಳಗೆ ಎಲ್ಲಾ ಅಸಂಘಟಿತ ಕಾರ್ಮಿಕರನ್ನು ರಾಷ್ಟ್ರೀಯ ಡೇಟಾಬೇಸ್ (NUDW) ನಲ್ಲಿ ನೋಂದಾಯಿಸಲು ರಾಜ್ಯಗಳು ಮತ್ತು ಕೇಂದ್ರಕ್ಕೆ ನಿರ್ದೇಶಿಸಿತು. ಅವರು ಪಡಿತರ ಚೀಟಿಗಳನ್ನು ಹೊಂದಿಲ್ಲ ಎಂಬ ಕಾರಣಕ್ಕಾಗಿ, ಅಥವಾ ಬೇರೆ ಯಾವುದೇ ಕಾರಣಕ್ಕೆ, ವಿಶೇಷವಾಗಿ ಸಾಂಕ್ರಾಮಿಕ ಸಮಯದಲ್ಲಿ ವಲಸೆ ಕಾರ್ಮಿಕರಿಗೆ ಆಹಾರ ಒದಗಿಸುವ ತನ್ನ ಕರ್ತವ್ಯಗಳಿಂದ ಸರ್ಕಾರವು "ವಿಮುಖವಾಗಲು" ಸಾಧ್ಯವಿಲ್ಲ. ಯಾವುದೇ ವಲಸೆ ಕಾರ್ಮಿಕರು ಹಸಿವಿನಿಂದ ಬಳಲದಂತೆ ನೋಡಿಕೊಳ್ಳಿ ಎಂದು ಸುಪ್ರೀಂಕೋರ್ಟ್ ಸೂಚನೆ ನೀಡಿತು. (2018–2019 ರ ಆರ್ಥಿಕ ಸಮೀಕ್ಷೆ ಪ್ರಕಾರ ಭಾರತದಲ್ಲಿ 93% ಕ್ಕಿಂತ ಹೆಚ್ಚು ಕಾರ್ಮಿಕರು ಅಸಂಘಟಿತ ವಲಯದಲ್ಲಿ ಕೆಲಸ ಮಾಡುತ್ತಾರೆ. ಇತ್ತೀಚಿನ ಅಂದಾಜಿನ ಪ್ರಕಾರ 44 ಕೋಟಿ ಅಸಂಘಟಿತ ಕಾರ್ಮಿಕರಿದ್ದಾರೆ) ಅಸಂಘಟಿತ ಕಾರ್ಮಿಕರ ರಾಷ್ಟ್ರೀಯ ಡೇಟಾಬೇಸ್ (NUDW) ಗಾಗಿಯೇ ಮೋದಿ ಸರ್ಕಾರ ಇ–ಶ್ರಮ್ ಯೋಜನೆ ಜಾರಿಗೆ ತಂದಿದ್ದು.

ಕಾರ್ಮಿಕರಿಗೆ ಹಲವು ಪೊಳ್ಳು ಭರವಸೆಗಳ ಆಮಿಷ

ಜೂನ್ 2021 ರ ಸುಪ್ರೀಂ ಕೋರ್ಟ್ ಆದೇಶದ ನಂತರ, 26 ಆಗಸ್ಟ್ 2021 ರಂದು, ಕಾರ್ಮಿಕ ಮತ್ತು ಉದ್ಯೋಗ ಸಚಿವ ಭೂಪೇಂದರ್ ಯಾದವ್ ಅವರು ಇ–ಶ್ರಮ್ ಪೋರ್ಟಲ್ ಅನ್ನು ಪ್ರಾರಂಭಿಸಿದಾಗ, 16 ರಿಂದ 59 ವರ್ಷ ವಯಸ್ಸಿನ ಮತ್ತು ಅಸಂಘಟಿತ ವಲಯದಲ್ಲಿ ತೊಡಗಿರುವ ಕಾರ್ಮಿಕರ, "ದೇಶ ಕಟ್ಟುವ ಭಾರತೀಯರಿಗೆ" ಡೇಟಾಬೇಸ್ ಇತಿಹಾಸದಲ್ಲೇ ಮೊದಲನೆಯದು ಎಂದು ಹೇಳಿದರು.

ಅಸಂಘಟಿತ ಕೆಲಸಗಾರರನ್ನು ನೋಂದಾಯಿಸುವ ಮತ್ತು ಲೆಕ್ಕ ಹಾಕುವ ಬೇಡಿಕೆಯು ದಶಕದ ಹಿಂದೆಯೇ ಅಧಿಕೃತವಾಗಿ ಅಂಗೀಕರಿಸಲ್ಪಟ್ಟಿದೆ. ಯುನೈಟೆಡ್ ಪ್ರೋಗ್ರೆಸ್ಸಿವ್ ಅಲೈಯನ್ಸ್ ಯುಪಿಎ–1 ರ ಸರ್ಕಾರದಿಂದ 2004 ರಲ್ಲಿ ಅಸಂಘಟಿತ ವಲಯದ ಉದ್ಯಮಗಳ ರಾಷ್ಟ್ರೀಯ ಆಯೋಗ ಸ್ಥಾಪಿಸಲಾಯಿತು. ಮತ್ತು 2013 ರಲ್ಲಿ ವಿಸರ್ಜಿಸಲಾಯಿತು. ಅಂದರೆ, ಎಡಪಕ್ಷಗಳು ಹೊರಗಿನಿಂದ ಬೆಂಬಲ ಕೊಟ್ಟಿದ್ದ ಯುಪಿಎ–1 ರ ಸರ್ಕಾರದ ಅವಧಿಯಲ್ಲಿ ಸ್ಥಾಪಿತಗೊಂಡಿದ್ದ ಆಯೋಗವನ್ನು ಯುಪಿಎ 2ರ ಅವಧಿಯಲ್ಲಿ ವಿಸರ್ಜಿಸಲಾಯಿತು. ಈ ಆಯೋಗ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಕ್ರಮಗಳ ಕುರಿತು ಹಲವಾರು ವರದಿಗಳನ್ನು ಸಂಗ್ರಹಿಸಿದೆ, ಅಸಂಘಟಿತ ವಲಯದ ಕೊಡುಗೆಯನ್ನು ಲೆಕ್ಕಹಾಕುವ ಮತ್ತು ಅಳೆಯುವ ಅಗತ್ಯವನ್ನು ಅದು ಒತ್ತಿ ಹೇಳುತ್ತದೆ.

ಇ–ಶ್ರಮ್ ಡೇಟಾಬೇಸ್ ಅನ್ನು ಭಾರತದ ರಾಷ್ಟ್ರೀಯ ಗುರುತಿನ ಡೇಟಾಬೇಸ್, ಆಧಾರ್ ವ್ಯವಸ್ಥೆಯೊಂದಿಗೆ ಸೀಡ್ ಮಾಡಲಾಗುತ್ತದೆ ಮತ್ತು ಕಾರ್ಮಿಕರ ಹೆಸರು, ಉದ್ಯೋಗ, ವಿಳಾಸ, ಶೈಕ್ಷಣಿಕ ಅರ್ಹತೆ, ಕೌಶಲ್ಯ ಪ್ರಕಾರಗಳು ಮತ್ತು ಕುಟುಂಬದ ವಿವರಗಳಂತಹ ಅನೇಕ ವಿವರಗಳನ್ನು ಒಳಗೊಂಡಿರುತ್ತದೆ.

ಸುಪ್ರೀಂ ಕೋರ್ಟ್ ಇದಕ್ಕಾಗಿ ಕಾಲಮಿತಿ ನಿಗದಿ ಮಾಡಿತ್ತು. ಹೀಗಾಗಿ ಒಕ್ಕೂಟ ಸರ್ಕಾರ ಡೇಟಾ ಬೇಸ್ ಮಾಡುವಂತೆ ತನ್ನೆಲ್ಲಾ ಇಲಾಖೆಗಳಿಗೆ ಹಾಗೂ ಎಲ್ಲಾ ರಾಜ್ಯಗಳಿಗೆ ಸೂಚನೆ ನೀಡಿತು. ರಾಜ್ಯ ಸರ್ಕಾರಗಳು ತನ್ನ ಇಲಾಖೆಗಳಿಗೆ ಗುರಿ ನಿಗಧಿಪಡಿಸಿ ಆ ಗುರಿ ತಲುಪುವಂತೆ ಒತ್ತಾಯಪಡಿಸಲಾಯಿತು. ಇಲಾಖೆಗಳು ತಮ್ಮ ಅಧಿಕಾರಿಗಳಿಗೆ, ಆ ಅಧಿಕಾರಿಗಳು ತಮ್ಮ ಸಿಬ್ಬಂದಿಗಳಿಗೆ ಮತ್ತು ಕಾರ್ಮಿಕರ ಸಮಸ್ಯೆಗಳನ್ನು ಹೊತ್ತು ತರುವ ಕಾರ್ಮಿಕ ಸಂಘಟನೆಗಳಿಗೆ, ಅಸಂಘಟಿತ ಕಾರ್ಮಿಕರು ಇ–ಶ್ರಮ್ ಕಾರ್ಡ್ ಮಾಡಿಸುವಂತೆ ಒತ್ತಾಯ/ಮನವೊಲಿಕೆ ಮಾಡತೊಡಗಿದರು.

ಅಸಂಘಟಿತ ವಲಯದ ಕಾರ್ಮಿಕರಿಗೆ ಇ–ಶ್ರಮ್ ಕಾರ್ಡ್ ಮಾಡಿಸಿಕೊಳ್ಳಿ ಎಂದು ಹೇಳಿದರೆ, ಅದರಿಂದ ಲಾಭ ಇಲ್ಲದಿದ್ದರೆ ಅವರು ಮುಂದೆ ಬರಲಾರರು. ಅದಕ್ಕಾಗಿ ಒಂದಷ್ಟು ಪೊಳ್ಳು ಭರವಸೆಗಳನ್ನು ನೀಡುವ ಮೂಲಕ, ಸ್ವಇಚ್ಚೆಯಿಂದ ಇ–ಶ್ರಮ್ ಕಾರ್ಡ್ ಪಡೆಯಲು ಮುಂದೆ ಬರುವಂತೆ ತಂತ್ರ ಹೆಣೆದರು. ಇ–ಶ್ರಮ್ ಕಾರ್ಡುದಾರರಿಗೆ ಸಾಮಾಜಿಕ ಭದ್ರತಾ ವ್ಯವಸ್ಥೆಯಡಿಯಲ್ಲಿ ವಿವಿಧ ಸೌಲಭ್ಯಗಳು ಸಿಗುತ್ತವೆ ಎಂದು ಹೇಳಲಾಯ್ತು. ಇವರಿಗೆ ಸಿಗುತ್ತವೆ ಎಂದು ಹೇಳಲಾಗುವ ವಿಮೆ, ಪಿಂಚಣಿ ಮತ್ತು ವೃದ್ಧಾಪ್ಯ ಯೋಜನೆಗಳನ್ನು ನೀಡುತ್ತಿದ್ದರೂ, ಬಹುತೇಕವುಗಳು ಉಚಿತ ಪ್ರಯೋಜನಗಳಲ್ಲ, ಬದಲಿಗೆ ಪ್ರೀಮಿಯಂ ಪಾವತಿಯ ಅಗತ್ಯವಿರುತ್ತದೆ, ಹೆಚ್ಚಿನ ಕಾರ್ಮಿಕರು ಆ ಪ್ರೀಮಿಯಂ ಭರಿಸಲಾಗುವುದಿಲ್ಲ.

ಸಾಕಷ್ಟು ಯೋಜನೆಗಳು, ಆದರೆ ಪ್ರವೇಶ ಅಸ್ಪಷ್ಟವಾಗಿದೆ

ಇ–ಶ್ರಮ್ ವೆಬ್‌ಸೈಟ್ ಅದರ ಪ್ರಯೋಜನಗಳಲ್ಲಿ 20 ಕ್ಕೂ ಹೆಚ್ಚು ವಿಭಿನ್ನ ಸಾಮಾಜಿಕ ಭದ್ರತೆ ಮತ್ತು ಉದ್ಯೋಗ ಯೋಜನೆಗಳನ್ನು ಪಟ್ಟಿ ಮಾಡುತ್ತದೆ. ಇವುಗಳಲ್ಲಿ ಪ್ರಧಾನ ಮಂತ್ರಿ ಸುರಕ್ಷಾ ಬಿಮಾ ಯೋಜನೆ (PMSBY), ಪ್ರಧಾನ ಮಂತ್ರಿ ಶ್ರಮ ಯೋಗಿ ಮಾನ್–ಧನ್ ಯೋಜನೆ. ಇದು ಫಲಾನುಭವಿಗಳಿಗೆ 60 ವರ್ಷ ತುಂಬಿದ ನಂತರ ತಿಂಗಳಿಗೆ ರೂ 3,000 ಪಿಂಚಣಿಗೆ ಅರ್ಹತೆ ನೀಡುತ್ತದೆ; ಮತ್ತು ಆಯುಷ್ಮಾನ್ ಭಾರತ್– ಪ್ರಧಾನ ಮಂತ್ರಿ ಜನ ಆರೋಗ್ಯ ಯೋಜನೆ. ಇದು ಪ್ರತಿ ಕುಟುಂಬಕ್ಕೆ ಪ್ರತಿ ವರ್ಷಕ್ಕೆ 5,00,000 ರೂ.ಗಳ ಆರೋಗ್ಯ ರಕ್ಷಣೆಯನ್ನು ದ್ವಿತೀಯ ಮತ್ತು ತೃತೀಯ ಆರೈಕೆ ಆಸ್ಪತ್ರೆಗೆ ಒದಗಿಸುತ್ತದೆ. ಈ ಎಲ್ಲಾ ಸಾಮಾಜಿಕ ಭದ್ರತಾ ಸೌಲಭ್ಯಗಳನ್ನು ಇ–ಶ್ರಮ್ ಪೋರ್ಟಲ್ ಮೂಲಕ ಒದಗಿಸಲಾಗುವುದು ಎಂದು ಹೇಳಲಾಗಿದೆ.

ಪ್ರೀಮಿಯಂ ಪಾವತಿಯ ವಿಮೆ, ಪಿಂಚಣಿ ಮತ್ತು ವೃದ್ಧಾಪ್ಯ ಯೋಜನೆಗಳು

ಇವುಗಳಲ್ಲಿ ಬಹುತೇಕ ಯೋಜನೆಗಳು ಕೊಡುಗೆ ರಹಿತ ಪ್ರಯೋಜನಗಳಲ್ಲ ಪುಟ 14 ಕ್ಕೆ

ಮಣಿಪುರ...ಹರ್ಯಾಣ...ಮುಂಬೈ ಎಕ್ಸ್‌ಪ್ರೆಸ್.....ಮತ್ತು 2024

ಮಣಿಪುರದ ಮೇ 4ರ ಭೀಕರ ಘಟನೆ ಒಂದು ವೀಡಿಯೋ ಮೂಲಕ ಬಯಲಿಗೆ ಬಂದಾಗ ಅದನ್ನು ತಾನಾಗಿಯೇ ಗಮನ ತಗೊಂಡು ಸರಕಾರ ಕ್ರಮ ಕೈಗೊಳ್ಳಬೇಕು, ಇಲ್ಲವಾದರೆ ತಾನೇ ಕ್ರಮ ಕೈಗೊಳ್ಳಬೇಕಾಗುತ್ತದೆ ಎಂದಿದ್ದ ಸುಪ್ರಿಂ ಕೋರ್ಟ್ ಜುಲೈ 31ರಂದು ವಿಚಾರಣೆ ವೇಳೆಯಲ್ಲಿ ಕೇಂದ್ರ ಮತ್ತು ಮಣಿಪುರ ಸರ್ಕಾರವನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಂಡಿದೆ ಮತ್ತು ಮಹಿಳೆಯರನ್ನು ಬೆತ್ತಲೆಯಾಗಿ ಮೆರವಣಿಗೆ ಮಾಡಿ, ಹಲ್ಲೆ ಮಾಡಿದ 14 ದಿನಗಳ ನಂತರವೇ ಶೂನ್ಯ ಎಫ್‌ಐಆರ್ ಅನ್ನು ದಾಖಲಿಸಿದ್ದೇಕೆ ಎಂದು ಮಣಿಪುರ ಪೊಲೀಸರನ್ನು ಕೇಳಿದೆ. ಇದು ದೇಶವನ್ನು ತಲ್ಲಣಗೊಳಿಸಿದ ನಿರ್ಭಯಾ ಘಟನೆಯಂತ ಭಯಾನಕ ಘಟನೆಯಾಗಿದ್ದರೂ, ಅದರಂತೆ ಇದೊಂದು ಪ್ರತ್ಯೇಕ ಘಟನೆಯಲ್ಲ, ಬದಲಿಗೆ ಒಂದು ವ್ಯವಸ್ಥಿತ ಹಿಂಸಾಚಾರದ ಭಾಗವಾಗಿದೆ. ಇದನ್ನು ಬೇರೆಡೆಯ ಹಿಂಸಾಚಾರವನ್ನು ತೋರಿಸಿ ಸಮರ್ಥಿಸಿಕೊಳ್ಳಲು ಸಾಧ್ಯವಿಲ್ಲ ಎಂದೂ ನ್ಯಾಯಪೀಠ ಟಿಪ್ಪಣಿ ಮಾಡಿದೆ.

"ಮಹಿಳೆಯರನ್ನು ಗಲಭೆಕೋರ ಜನಜಂಗುಳಿಗೇ ಹಸ್ತಾಂತರಿಸಿದಂತಿರುವ" ಕಾರಣದಿಂದಾಗಿ ತಾನು ಈ ವಿಷಯವನ್ನು ರಾಜ್ಯ ಪೊಲೀಸರು ತನಿಖೆ ಮಾಡಬೇಕೆಂದು ಬಯಸುವುದಿಲ್ಲ ಎಂದು ಹೇಳಿರುವುದಾಗಿ ವರದಿಯಾಗಿದೆ. ಮೇ 4 ರಿಂದ ಮೇ 18 ರವರೆಗೆ ಪೊಲೀಸರು ಏನು ಮಾಡುತ್ತಿದ್ದರು? ಮೇ 4ರಂದೇ ಎಫ್‌ಐಆರ್ ದಾಖಲಿಸಲು ಪೋಲೀಸರಿಗೆ ಅಡ್ಡಿಯಾದ ಸಂಗತಿಯೇನು ಎಂದು ಪೀಠ ಮಣಿಪುರ ರಾಜ್ಯ ಸರ್ಕಾರವನ್ನು ಪ್ರತಿನಿಧಿಸುತ್ತಿದ್ದ ಭಾರತದ ಸಾಲಿಸಿಟರ್ ಜನರಲ್ (ಎಸ್‌ಜಿ) ತುಷಾರ್ ಮೆಹ್ತಾರನ್ನು ಪ್ರಶ್ನಿಸಿತು.

ಎಫ್‌ಐಆರ್‌ಗಳ ಸಂಖ್ಯೆ ಇತ್ಯಾದಿಗಳ ಬಗ್ಗೆ ತಮ್ಮ ಬಳಿ ನಿರ್ದಿಷ್ಟ ಸೂಚನೆಗಳಿಲ್ಲ ಎಂದು ಮೆಹ್ತಾ ಉತ್ತರಿಸಿದಾಗ, ಮುಖ್ಯ ನ್ಯಾಯಾಧೀಶರು ಆಶ್ಚರ್ಯ ವ್ಯಕ್ತಪಡಿಸಿದರು, "ಇವೆಲ್ಲ ಮಾಧ್ಯಮಗಳಲ್ಲಿ ಇರುವ ಸಂಗತಿಗಳು. ಮಣಿಪುರ ರಾಜ್ಯ ವಾಸ್ತವಾಂಶಗಳನ್ನು ಹೊಂದಿಲ್ಲದಿರುವುದು ನನಗೆ ಆಶ್ಚರ್ಯವಾಗಿದೆ" ಎಂದರು. ಇಲ್ಲಿ, ನಾವು ವ್ಯವಸ್ಥಿತ ಹಿಂಸಾಚಾರವನ್ನು ಕಾಣುತ್ತಿದ್ದೇವೆ, ಇದನ್ನು ಭಾರತೀಯ ದಂಡ ಸಂಹಿತೆ ವಿಶೇಷ ಅಪರಾಧವೆಂದು ಗುರುತಿಸುತ್ತದೆ ಎಂದು ಮುಖ್ಯ ನ್ಯಾಯಾಧೀಶರು ಭಾರತ ಸರಕಾರದ ಮುಖ್ಯ ನ್ಯಾಯವಾದಿಗಳ ಗಮನಕ್ಕೆ ತಂದರು."ಘಟನೆಯು ವಿಶೇಷ ಅಪರಾಧವಾಗಿರುವಾಗ ನೀವು ವಿಶೇಷ ತಂಡವನ್ನು ಹೊಂದಿರುವುದು ಮುಖ್ಯವಲ್ಲವೇ" ಎಂದು ಅವರು ಮೆಹ್ತಾರನ್ನು ಕೇಳಿದರು.

ಮತ್ತೊಂದು ಡಬಲ್ ಇಂಜಿನ್ ರಾಜ್ಯದಲ್ಲಿ...

ಮಣಿಪುರದ ಹಿಂಸಾಚಾರದ ಬಗ್ಗೆ ದೇಶದ ಸರ್ವೋಚ್ಚ ನ್ಯಾಯಾಲಯ ಡಬಲ್ ಎಂಜಿನ್ ಸರಕಾರವನ್ನು ತರಾಟೆಗೆ ತಗೊಂಡು, ಅಲ್ಲಿ ಕಾನೂನು ವ್ಯವಸ್ಥೆ ಮುರಿದು ಬಿದ್ದಿದೆ ಎಂದು ಹೇಳಲು ಹೊರಟಿದ್ದಾಗಲೇ ಇನ್ನೊಂದು ಡಬಲ್ ಇಂಜಿನ್ ಸರಕಾರವಿರುವ ಹರ್ಯಾಣದಲ್ಲಿ ಕೋಮು ಹಿಂಸಾಚಾರ ಭುಗಿಲೇಳುತ್ತಿತ್ತು. ಅದೇ ಜುಲೈ 31ರ ಬೆಳಿಗ್ಯೆ ಗುರುಗ್ರಾಮದಿಂದ ಬಿಜೆಪಿ ಜಿಲ್ಲಾ ಅಧ್ಯಕ್ಷರು ಉದ್ಘಾಟಿಸಿದ ಭಜರಂಗ ದಳ ಮತ್ತು ವಿಹೆಚ್‌ಪಿಯ "ಬ್ರಜಮಂಡಲ್ ಜಲಾಭಿಷೇಕ ಯಾತ್ರಾ' ಮಧ್ಯಾಹ್ನದ ವೇಳೆ ಮೇವಾತ್ ಪ್ರದೇಶದ ನೂಹ್ ತಲುಪಿದಾಗ ಹಿಂಸಾಚಾರ ಭುಗಿಲೆದ್ದಿತು, ಮೂರು ಪ್ರಾಣಗಳು ಇದಕ್ಕೆ ಬಲಿಯಾದವು, ನಂತರ ಇದು ಗುರುಗ್ರಾಮ್ ವರೆಗೂ ಹಬ್ಬಿ ಇದುವರೆಗೆ ಇಬ್ಬರು ಹೋಮ್ ಗಾರ್ಡ್‌ಗಳು ಮತ್ತು ಗುರುಗ್ರಾಂನ ಮಸೀದಿಯ ಇಮಾಂ ಸೇರಿದಂತೆ 7 ಜೀವಗಳನ್ನು ಬಲಿ ತೆಗೆದುಕೊಂಡಿದೆ, 50ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ. ಈಗ ನೂಹ್, ಗುರುಗ್ರಾಮ್, ಫರಿದಾಬಾದ್, ಪಲ್ವಾಲ್ ಮತ್ತು ಜಜ್ಜರ್ ಜಿಲ್ಲೆಗಳಲ್ಲಿ ಸೆಕ್ಷನ್–144 ಜಾರಿಯಲ್ಲಿದೆ. 10 ಡ್ಯೂಟಿ ಮ್ಯಾಜಿಸ್ಟ್ರೇಟ್‌ಗಳು ಮತ್ತು ಆರು ವಿಶೇಷ ಡ್ಯೂಟಿ ಮ್ಯಾಜಿಸ್ಟ್ರೇಟ್‌ಗಳನ್ನು ಜಿಲ್ಲಾಡಳಿತ ನೇಮಿಸಿದೆಯಂತೆ ಮತ್ತು 14 ಕಂಪನಿಗಳ ಪೊಲೀಸರು ನಿಯೋಜಿಸಲಾಗಿದೆಯಂತೆ.

ಹರ್ಯಾಣಾದ ಮುಖ್ಯಮಂತ್ರಿ, ಗೃಹಮಂತ್ರಿ, ಉಪಮುಖ್ಯಮಂತ್ರಿ, ಗುರುಗ್ರಾಮ್‌ನ ಬಿಜೆಪಿ ಸಂಸದ ಮತ್ತು ನೂಹ್‌ನ ಕಾಂಗ್ರೆಸ್ ಶಾಸಕ ಸೇರಿದಂತೆ ಎಲ್ಲರೂ ಈ ಗಲಭೆ ಇದ್ದಕ್ಕಿದ್ದಂತೆ ನಡೆದದ್ದಲ್ಲ, ಪೂರ್ವ–ತಯಾರಿಯೊಂದಿಗೆ ನಡೆದಿದೆ ಎನ್ನುತ್ತಾರೆ. ಆದರೆ ಈ ಪೂರ್ವತಯಾರಿ ಯಾರದ್ದು ಎಂಬುದೇ ಪ್ರಶ್ನೆ.

ಮುಖ್ಯವಾಗಿ ಇದೇ ಮೇವಾತ್ ಪ್ರದೇಶದ ರಾಜಸ್ತಾನ ರಾಜ್ಯದ ಭಾಗದ ಭಿವಾನಿಯ ಜುನೈದ್ ಮತ್ತು ನಾಸಿರ್ ಎಂಬವರನ್ನು ಕೊಂದು ತಲೆಮರೆಸಿಕೊಂಡಿರುವ ಈ ಪ್ರದೇಶದ ಸ್ವಯಂಘೋಷಿತ ಗೋರಕ್ಷಕ ಮೋನು ಮನೇಸರ್ ಮತ್ತು ಭಜರಂಗ ದಳದ ಬಿಟ್ಟು ಬಜರಂಗಿಯ ವೀಡಿಯೋಗಳು ಯಾತ್ರೆಯ ಸಿದ್ಧತೆಯ ವೇಳೆಗಾಗಲೇ ನೂಹ್‌ನಲ್ಲಿ ಕೋಮು ಸಾಮರಸ್ಯವನ್ನು ಕೆಡಿಸುವ ಪ್ರಯತ್ನ ಆರಂಭಿಸಿದ್ದವು. ಈ ಬಗ್ಗೆ ಆ ಪ್ರದೇಶದ ಪ್ರತಿಷ್ಠಿತ ನಾಗರಿಕರು ಆಡಳಿತವನ್ನು ಎಚ್ಚರಿಸಿದ್ದರು ಎಂದೂ ವರದಿಯಾಗಿದೆ. ಸಿಐಡಿ ಯವರಿಗೂ ಈ ಬಗ್ಗೆ ಮಾಹಿತಿ ಇತ್ತು, ಅವರು ಆಡಳಿತಕಾಯ್ದನ್ನು ತಿಳಿಸಿದ್ದರು ಎಂದೂ ವರದಿಯಾಗಿದೆ. ಆದರೂ ಈ ಗಲಭೆ ಸಂಭವಿಸಿದೆ, ಪ್ರಾಣಬಲಿಗಳು ನಡೆದಿವೆ.

"ಅವರಿಗೆ ಮೆರವಣಿಗೆಯಲ್ಲಿ ಹೋಗುವಾಗ ಆಯುಧಗಳನ್ನು ಕೊಟ್ಟವರು ಯಾರು? ತಲ್ವಾರು, ದೊಣ್ಣೆ ಹಿಡಿದುಕೊಂಡು ಯಾರಾದರೂ ಮೆರವಣಿಗೆಯಲ್ಲಿ ಹೋಗುತ್ತಾರೆಯೇ? ಇದು ತಪ್ಪು" –ಹೀಗಂದವರು ಸ್ವತ: ಗುರುಗ್ರಾಮ್‌ನ ಬಿಜೆಪಿ ಸಂಸದರಾದ ರಾವ್ ಇಂದರ್ಜಿತ್ ಸಿಂಗ್. ಅವರು ಕೇಂದ್ರ ಮಂತ್ರಿಗಳೂ ಕೂಡ. ಅವರ ಪ್ರಕಾರ 'ಎರಡೂ ಕಡೆಯವರು' ಈ ಹಿಂಸಾಚಾರಕ್ಕೆ ಹೊಣೆ!

'ಯಾತ್ರೆ'ಯ ಸಂಘಟಕರು ಜಿಲ್ಲಾ ಆಡಳಿತಕ್ಕೆ ಪೂರ್ಣ ಮಾಹಿತಿ ಕೊಟ್ಟಿರಲಿಲ್ಲ ಎಂದು ಉಪಮುಖ್ಯಮಂತ್ರಿ ದುಷ್ಯಂತ ಚೌತಾಲಾ ಹೇಳಿದ್ದಾರೆ.

ಗೃಹಮಂತ್ರಿ ಅನಿಲ್ ವಿಜ್‌ರಂತೂ ಇಂತಹ ಸಮಯದಲ್ಲಿ ತನ್ನ ಪೋಲೀಸರಿಗಿಂತ ಹೆಚ್ಚಾಗಿ ಊಹಾಪೋಹಗಳನ್ನು ಹರಡುವವರನ್ನೇ ನಂಬಿದಂತೆ ಕಾಣುತ್ತದೆ. 3000–4000 ಮಂದಿಯನ್ನು ಒಂದು ನಿರ್ದಿಷ್ಟ ದೇವಸ್ಥಾನದಲ್ಲಿ ಸೆರೆಯಾಳುಗಳಾಗಿ ಇಟ್ಟುಕೊಳ್ಳಲಾಗಿದೆ ಎಂದು ಅವರು ಹೇಳಿದ್ದನ್ನು ಆ ದೇವಸ್ಥಾನದ ಅರ್ಚಕ ದೀಪಕ್ ಶರ್ಮ ನಿರಾಕರಿಸುತ್ತ "ನಾವೇನು ಜನಗಳನ್ನು ಸೆರೆಯಾಳುಗಳಾಗಿ ಮಾಡುವುದು, ಅವರು ಪರಮಾತ್ಮನ ಆಶ್ರಯದಲ್ಲಿ ಇದ್ದರು" ಎಂದಿದ್ದಾರೆ (ದಿ ವೈರ್, ಆಗಸ್ಟ್1).

ಒಟ್ಟಿನಲ್ಲಿ, ರಾಜ್ಯದ ಮುಖ್ಯಮಂತ್ರಿಗಳೂ ಸೇರಿದಂತೆ ಜವಾಬ್ದಾರಿ ಸ್ಥಾನಗಳಲ್ಲಿರುವವರೂ ಹೇಳುವಂತೆ ಇದು ಪೂರ್ವ ತಯಾರಿಯಿಂದ ನಡೆದ ಹಿಂಸಾಚಾರ. ಇದಕ್ಕೆ ಮುಖ್ಯ ಹೊಣೆ ಯಾರು ಎಂಬುದಕ್ಕೆ ಉತ್ತರ ಕೂಡ ಅವರ ಮಾತುಗಳಲ್ಲೇ ಸಿಗುತ್ತದೆ!

...ಮತ್ತು ಚಲಿಸುವ ರೈಲಿನಲ್ಲಿ....!

ಈ ನಡುವೆ, ಅದೇ ಜುಲೈ 31 ರ ಬೆಳಿಗ್ಯೆ ಜಯಪುರ–ಮುಂಬೈ ಸೂಪರ್ ಫಾಸ್ಟ್ ರೈಲಿನಲ್ಲಿ ಪ್ರಯಾಣಿಕರ ಭದ್ರತೆಯ ಡ್ಯೂಟಿಯ ಮೇಲಿದ್ದ ರೈಲ್ವೆ ರಕ್ಷಣಾ ಪಡೆ(ಆರ್‌ಪಿಎಫ್)ಯ ಕಾನ್ಸ್‌ಟೇಬಲ್ ಚೇತನ್ ಬಚ್ಚೂ ಸಿಂಗ್ ಎಂಬಾತನೇ ತನ್ನ ಮೇಲಧಿಕಾರಿಯನ್ನು ಮತ್ತು ಮೂರು ಮುಸ್ಲಿಂ ಪ್ರಯಾಣಿಕರನ್ನು ಗುಂಡಿಟ್ಟು ಕೊಂದ ಭೀಕರ ಘಟನೆಯ ಸುದ್ದಿ ಬಂದಿತ್ತು.

ಇದು ಅಮೃತ ಕಾಲ....

ಕ್ಷಣಗಣನೆ ಆರಂಭ....



ವ್ಯಂಗ್ಯಚಿತ್ರ: ಸತೀಶ ಆಚಾರ್ಯ, ಫೇಸ್‌ಬುಕ್

ಮೂರನೇ ಪ್ರಯಾಣಿಕನನ್ನು ಕೊಂದ ನಂತರ ರೈಫಲನ್ನು ಬದಿಗಿಟ್ಟು ಆತ ಈ ಕೃತ್ಯವನ್ನು ಸ್ತಂಭೀಭೂತರಾಗಿ ನೋಡುತ್ತಿದ್ದ ಇತರ ಪ್ರಯಾಣಿಕರನ್ನು ಉದ್ದೇಶಿಸಿ "ಪಾಕಿಸ್ತಾನದಿಂದ ಅಪರೇಟ್ ಆಗ್ತಿದ್ದಾರೆ, ಇದನ್ನೇ ಮೀಡಿಯಾ ಕವರೇಜ್ ತೋರಿಸುತ್ತಿದೆ, ಅವರಿಗೆ ಎಲ್ಲವೂ ಗೊತ್ತಾಗುತ್ತಿದೆ, ಇವರ ಯಜಮಾನರುಗಳು ಅಲ್ಲಿದ್ದಾರೆ.. ವೋಟು ಕೊಡಬೇಕೆಂದಿದ್ದರೆ, ಹಿಂದುಸ್ತಾನದಲ್ಲಿ ಇರಬೇಕೆಂದಿದ್ದರೆ, ನಾನು ಹೇಳುತ್ತೇನೆ, ಮೋದಿ ಮತ್ತು ಯೋಗಿ ಇವರಿಬ್ಬರಿದ್ದಾರೆ, ಮತ್ತು ಮತ್ತು ನಿಮ್ಮ ಠಾಕ್ರೆ" ಎನ್ನುವ ವೀಡಿಯೋ ಪ್ರಕಟಗೊಂಡಿದೆ.

ಈತ ಮೂಲತಃ ಉತ್ತರಪ್ರದೇಶದವನು, ಈ ಹತ್ಯೆ ನಡೆಯುವ ವೇಳೆಗೆ ರೈಲು ಮುಂಬೈ ಸಮೀಪಿಸುತ್ತಿತ್ತು, 100 ಕಿ.ಮೀ. ದೂರದ ಪಾಲ್ಘರ್(ಮಹಾರಾಷ್ಟ್ರ) ಬಳಿ ಇತ್ತು ಎನ್ನಲಾಗಿದೆ. ಮುಂಬೈ ಪ್ರವೇಶಿಸುತ್ತಿದ್ದಂತೆ ರೈಲಿನಿಂದಿಳಿದು ಓಡಿ ಹೋಗಲು ಪ್ರಯತ್ನಿಸುತ್ತಿದ್ದ ಆತನನ್ನು ಆರ್‌ಪಿಎಫ್ ಸಿಬ್ಬಂದಿ ಬಂಧಿಸಿ ಎಫ್‌ಐಆರ್ ಹಾಕಲಾಗಿದೆ ಎಂದು ರೈಲ್ವೆ ಪ್ರಕಟಣೆ ತಿಳಿಸುತ್ತದೆ. ಆತನ ಮಾತುಗಳಲ್ಲಿ ದ್ವೇಷ ತುಂಬಿ ತುಳುಕುತ್ತಿದ್ದರೂ, ಎಫ್‌ಐಆರ್‌ನಲ್ಲಿ ಆತನ 'ಅಶುಭಾಷಣ'ದ ಬಗ್ಗೆ ಪ್ರಸ್ತಾಪವಿಲ್ಲ, ಬದಲಾಗಿ ಆತನ ಮನಸ್ಥಿತಿ ಅಸ್ಥಿರವಾಗಿತ್ತು ಎಂಬುದಕ್ಕೇ ಒತ್ತು ಕೊಡಲಾಗಿದೆ ಎಂದು ವರದಿಯಾಗಿದೆ.

ಆದರೆ ನಂತರ ಆಗಸ್ಟ್ 2ರಂದು ನೀಡಿದ ರೈಲ್ವೆಯ ಹೇಳಿಕೆಯಲ್ಲಿ, ಆತನ ಇತ್ತೀಚಿನ ನಿಯಮಿತ ವೈದ್ಯಕೀಯ ಪರೀಕ್ಷೆಯಲ್ಲಿ ಮಾನಸಿಕ ಕಾಯಿಲೆ ಪತ್ತೆಯಾಗಿರಲಿಲ್ಲ ಎಂದು ಹೇಳಲಾಯಿತು. ಆದರೆ ಒಂದು ಗಂಟೆಯೊಳಗೇ ಆ ಹೇಳಿಕೆಯನ್ನು ಹಿಂತೆಗೆದುಕೊಂಡಿರುವುದಾಗಿ ಹೇಳಿಕೆ ನೀಡಿತು.

ಆದರೆ ಈ ಮೂರೂ ಘಟನೆಗಳ ವಿವಿಧ ಪಾತ್ರಧಾರಿಗಳ ಮಾನಸಿಕ ಸ್ಥಿತಿಯಲ್ಲಿ ಸಮಾನತೆ, ಅಂದರೆ ದ್ವೇಷ ಭಾಷಣಗಳ ಪರಿಣಾಮವಂತೂ ಎದ್ದು ಕಾಣುತ್ತಿದೆ ಮತ್ತು ಹಿನ್ನೆಲೆಯಲ್ಲಿ 2024ರ ಸಾರ್ವತ್ರಿಕ ಚುನಾವಣೆಗಳಿಗೆ ಸಿದ್ಧತೆಯ ನೋಟಗಳೂ ಹಲವು ವಿಶ್ಲೇಷಕರಿಗೆ ಕಾಣುತ್ತಿದೆ.

ಯಥಾಪ್ರಕಾರ ಪ್ರಧಾನಿಗಳ ದಿವ್ಯಮೌನ, ಗುಂಡಿಕ್ಕಿದ ನಂತರ ಅವರ ಹೆಸರನ್ನೇ ಉಚ್ಚರಿಸಿದರೂ, ಅದನ್ನು ಅಲ್ಲಗಳೆಯಲಾದರೂ ಬಾಯಿ ತೆರೆಯದೆ ಮುಂದುವರೆದಿದೆ.

ಅವರು ಮತ್ತು ನಮ್ಮಲ್ಲಿ ವ್ಯತ್ಯಾಸವಿದೆ. ನಾವು ಮೂರ್ಖರಷ್ಟೇ. ಅವರು ಹುಚ್ಚರು.



ಇಲ್ಲ-ನೀವು ತಪ್ಪು ತಿಳಿದಿದ್ದೀರಿ ವಾಟ್ಸಾಪ್ ಅಂಕಲ್

ವ್ಯಂಗ್ಯಚಿತ್ರ: ರಾಜೇಂದ್ರ ಧೋಡಪ್‌ಕರ್, ಫೇಸ್‌ಬುಕ್

ಚರಿತ್ರೆಯ ಮರು ಲೇಖನದ ನಂತರ, ಈಗ ಅಂಕಿ–ಅಂಶಗಳ 'ಮರುಲೇಖನ'!

ಪ್ರತಿಷ್ಠಿತ ಸಂಶೋಧನಾ ಸಂಸ್ಥೆಯಾದ 'ಅಂತರರಾಷ್ಟ್ರೀಯ ಜನಸಂಖ್ಯಾಶಾಸ್ತ್ರಗಳ ಸಂಸ್ಥೆ'(ಇಂಟರ್‌ನ್ಯಾಷನಲ್ ಇನ್ ಸ್ಟಿಟ್ಯೂಟ್ ಆಫ್ ಪಾಪ್ಯುಲೇಶನ್ ಸೈನ್ಸಸ್– ಐಐಪಿಎಸ್) ನ ನಿರ್ದೇಶಕ ಪ್ರೊ. ಕೆ.ಎಸ್. ಜೇಮ್ಸ್ ಅವರನ್ನು ಮೋದಿ ಸರ್ಕಾರ ಅಮಾನತು ಮಾಡಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಅಡಿಯಲ್ಲಿ ನೂರಾರು ಸ್ವತಂತ್ರ ಸಂಶೋಧನಾ ಸಂಸ್ಥೆಗಳಿವೆ. ಅವುಗಳ ಪೈಕಿ ನಿರ್ದೇಶಕರನ್ನು ಯಾವುದೇ ನಿರ್ದಿಷ್ಟ ಕಾರಣವಿಲ್ಲದೆ ಅಮಾನತು ಮಾಡಿರುವುದು ಇದೇ ಮೊದಲು ಎನ್ನಲಾಗಿದೆ.

ಕೇಂದ್ರ ಸರ್ಕಾರವು ಅವರಿಗೆ ಕಳುಹಿಸಿದ ಅಮಾನತು ಪತ್ರದಲ್ಲಿ ಅವರ ವಿರುದ್ಧ ವಿಚಾರಣೆ ನಡೆಸಲಾಗುತ್ತಿದ್ದು, ಅದರ ಆಧಾರದ ಮೇಲೆ ಅಮಾನತುಗೊಳಿಸಲಾಗಿದೆ ಎಂದು ತಿಳಿಸಲಾಗಿತ್ತಂತೆ. ಈ ಬಗ್ಗೆ ಆಕ್ರೋಶ ವ್ಯಕ್ತವಾಗುವ ಲಕ್ಷಣ ಕಂಡಾಗ 'ಎ' ವರ್ಗದ ನೇಮಕಾತಿಗಳಲ್ಲಿ ಅಕ್ರಮ ನಡೆದಿರುವುದರ ಬಗ್ಗೆ ವಿಚಾರಣೆ ನಡೆಸುತ್ತಿರುವುದರಿಂದ ವಿಚಾರಣೆಯ ಅವಧಿಗೆ ಮಾತ್ರ ಈ ಕ್ರಮ ಕೈಗೊಳ್ಳಲಾಗಿದೆ ಎಂದು 'ಸ್ಪಷ್ಟೀಕರಣ' ನೀಡಲಾಯಿತು. ಆದರೆ ಈ ನೇಮಕಾತಿಯನ್ನು ಸಂಸ್ಥೆಯ ಆಡಳಿತ ಮಂಡಳಿ ಮಾಡುತ್ತಿದ್ದು, ಅದರಲ್ಲಿ ನಿರ್ದೇಶಕರ ಪಾತ್ರ ಗೌಣ ಎಂದು ಕಂಡು ಬಂದಿದೆ.

ಅಂದರೆ ಇದರರ್ಥ ಅಮಾನತಿಗೆ ವಾಸ್ತವ ಕಾರಣ ಬೇರೆಯೇ ಇದೆ.

ಐಐಪಿಎಸ್, ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆಗಳನ್ನು (ಎನ್‌ಎಫ್‌ಹೆಚ್‌ಎಸ್) ನಡೆಸುವ ಜವಾಬ್ದಾರಿಯುತ ಸ್ವಾಯತ್ತ ಸಂಸ್ಥೆಯಾಗಿದೆ. ಎನ್‌ಎಫ್‌ಹೆಚ್‌ಎಸ್–5ರ ಫಲಿತಾಂಶಗಳು ಮೋದಿ ಸರ್ಕಾರಕ್ಕೆ ರುಚಿಸಿಲ್ಲ, ಅದಕ್ಕೇ ಈ ನಡೆ ಎನ್ನಲಾಗಿದೆ.

ಆ ಸಮೀಕ್ಷಾ ವರದಿಯ ಪ್ರಕಾರ ಇಂದು ಭಾರತದಲ್ಲಿ ಶೇಕಡ 19ರಷ್ಟು ಮನೆಗಳಲ್ಲಿ ಶೌಚಾಲಯ ವ್ಯವಸ್ಥೆ ಇಲ್ಲ. ಆದರೆ ಇದಕ್ಕೆ ಮೊದಲೇ ಇಡೀ ದೇಶವನ್ನು ಬಯಲು ಶೌಚಮುಕ್ತ ದೇಶ ಎಂದು ಘೋಷಿಸಿ ಭಾರತ ಸರ್ಕಾರ ಸಂಭ್ರಮಿಸುತ್ತಿತ್ತು.

ಇಷ್ಟೇ ಅಲ್ಲ, ಭಾರತ ಸರ್ಕಾರವು ಉಜ್ವಲ ಯೋಜನೆ ಮೂಲಕ ಪ್ರತಿ ಕುಟುಂಬಕ್ಕೂ ಅಡುಗೆ ಅನಿಲ ಸಿಲಿಂಡರ್‌ಗಳನ್ನು ತಲುಪಿಸಿದೆ ಎಂದು ಹೆಮ್ಮೆಪಡುತ್ತಿರುವಾಗ, ಸಮೀಕ್ಷಾ ವರದಿ ಪುಟ 14 ನೋಡಿ

ಭಾರತದಲ್ಲಿ ಬಡತನ ಕುರಿತ ವಿಶ್ವಸಂಸ್ಥೆಯ ಅಂದಾಜು – ಹುಸಿ ಸಂಭ್ರಮವಷ್ಟೇ

2005 ರಿಂದ 2019 ರ ನಡುವೆ ಭಾರತವು 41.5 ಕೋಟಿ ಜನರನ್ನು ಬಡತನದಿಂದ ಮೇಲಕ್ಕೆತ್ತಿದೆ ಎಂದು ಯುಎನ್‌ಡಿಪಿ ಘೋಷಿಸಿತು. ಭಾರತ ಸರಕಾರ ಅದನ್ನು ಸಂಭ್ರಮದಿಂದ ಪ್ರಚುರಗೊಳಿಸಿತು. ಆದರೆ ಯುಎನ್‌ಡಿಪಿಯ 'ಬಡತನ' ಎಂಬ ಪದದ ಅರ್ಥವು ನಾವು ಸಾಮಾನ್ಯವಾಗಿ ಬಳಸುವ ಬಡತನ ಎಂಬ ಪದ ಸೂಚಿಸುವ ಅರ್ಥಕ್ಕಿಂತ ಸಂಪೂರ್ಣವಾಗಿ ಭಿನ್ನವಾಗಿದೆ. ಇದನ್ನು ಮನಸ್ಸಿನಲ್ಲಿಟ್ಟುಕೊಳ್ಳದಿದ್ದರೆ, 2022 ರಲ್ಲಿ ವಿಶ್ವ ಹಸಿವು ಸೂಚ್ಯಂಕದಲ್ಲಿ 121 ದೇಶಗಳ ಪೈಕಿ 107 ನೇ ಸ್ಥಾನಕ್ಕೆ ಜಾರಿರುವ ದೇಶವು ಅದೇ ಕಾಲದಲ್ಲಿ, ಹತ್ತಾರು ಕೋಟಿ ಜನರನ್ನು "ಬಡತನದಿಂದ ಹೊರಗೆತ್ತಲು" ಹೇಗೆ ಸಾಧ್ಯವಾಯಿತು ಎಂಬುದನ್ನು ವಿವರಿಸುವುದು ಕಷ್ಟಸಾಧ್ಯವೇ ಸರಿ! ಇದು ಯುಎನ್‌ಡಿಪಿಯ 'ಬಹು-ಆಯಾಮೀಯ ಬಡತನ' ಎಂಬುದರ ಪರಿಭಾಷೆಯೇ ಎಷ್ಟೊಂದು ಬಡವಾಗಿದೆ ಎಂಬುದನ್ನು ಸೂಚಿಸುತ್ತದೆ.

ಪ್ರೊ. ಪ್ರಭಾತ್ ಪಟ್ನಾಯಕ್





ಈ ವರ್ಷದ ಏಪ್ರಿಲ್ 3 ರಂದು, ರಾಜ್ಯಸಭೆಯಲ್ಲಿ ಯೋಜನಾ ಖಾತೆಯ ರಾಜ್ಯ ಸಚಿವ ರಾವ್ ಇಂದರ್‌ಜೀತ್ ಸಿಂಗ್, 2011–12 ರ ನಂತರ ಬಡತನವನ್ನು ಅಂದಾಜು ಮಾಡಲು ಸರ್ಕಾರದ ಬಳಿ ಯಾವುದೇ ದತ್ತಾಂಶ ಇಲ್ಲ, ಆದ್ದರಿಂದ ಅಂದಿನಿಂದ ಎಷ್ಟು ಜನರನ್ನು ಬಡತನದಿಂದ ಮೇಲೆತ್ತಲಾಗಿದೆ ಎಂದು ತಿಳಿದಿಲ್ಲ ಎಂದು ಹೇಳಿದರು. ಆದರೂ, ಜುಲೈ 18 ರಂದು ಯುಎನ್‌ಡಿಪಿ 2005 ರಿಂದ 2019 ರ ನಡುವೆ ಭಾರತವು 41.5 ಕೋಟಿ ಜನರನ್ನು ಬಡತನದಿಂದ ಮೇಲಕ್ಕೆತ್ತಿದೆ ಎಂದು ಘೋಷಿಸಿತು; ನಿಜ, ಸಾಂಕ್ರಾಮಿಕ ನಂತರದ ಅವಧಿಯ ಯಾವುದೇ ಮಾಹಿತಿ ಅದರ ಬಳಿ ಇರಲಿಲ್ಲ, ಆದರೆ ಸಾಂಕ್ರಾಮಿಕ–ಪೂರ್ವ ಅವಧಿಯ ಬಗ್ಗೆ ಅದು ಹೇಳಿದ್ದು ಭಾರೀ ಉಬ್ಬರವನ್ನು ಸೃಷ್ಟಿಸಿತು. ಆದಾಗ್ಯೂ ಈ ಉಬ್ಬರದಲ್ಲಿ ಕಾಣದೇ ಹೋದ ಸಂಗತಿಯೆಂದರೆ, ಯುಎನ್‌ಡಿಪಿ ಯ ಬಡತನದ ಪರಿಕಲ್ಪನೆಯು ಸಾಮಾನ್ಯವಾಗಿ ಬಡತನ ಪದ ಏನನ್ನು ಅರ್ಥೈಸುತ್ತದೋ ಅದಕ್ಕಿಂತ ಬಹಳಷ್ಟು ಭಿನ್ನವಾಗಿದೆ ಮಾತ್ರವಲ್ಲ, ಯುಎನ್‌ಡಿಪಿ ಯ ಪರಿಕಲ್ಪನೆಯು ಸೈದ್ಧಾಂತಿಕವಾಗಿ ದೃಢವಾದದ್ದೂ ಅಲ್ಲ, ಸಾಂಖ್ಯಿಕವಾಗಿ ಕೂಡ ಸರಿಯಾದ ಆಧಾರವನ್ನು ಹೊಂದಿಲ್ಲ. ಅದು ಸೃಷ್ಟಿಸಿದ ಸಂಭ್ರಮ ಸುಳ್ಳೇ ಆಗಿತ್ತು.

ಭಾರತದ ಅಧಿಕೃತ ಬಡತನದ ಅಂದಾಜುಗಳು, ಈಗ ನೇರವಾಗಿ ಪೌಷ್ಟಿಕಾಂಶದ ಅಭಾವವನ್ನು ಆಧರಿಸಿಲ್ಲದಿದ್ದರೂ, ಇನ್ನೂ ಅದರ ಆರಂಭ ಬಿಂದು ಪೌಷ್ಟಿಕತೆಯೇ ಆಗಿದೆ; ಮತ್ತು ಎನ್‌ಎಸ್‌ಎಸ್(ನ್ಯಾಷನಲ್ ಸ್ಯಾಂಪಲ್ ಸರ್ವೆ)ನ ದೊಡ್ಡ ಸ್ಯಾಂಪಲ್ ಗ್ರಾಹಕ ವೆಚ್ಚ ಸಮೀಕ್ಷೆಗಳು ಈ ಅಂದಾಜುಗಳಿಗೆ ಅಂಕಿ–ಅಂಶಗಳ ಆಧಾರವನ್ನು ಒದಗಿಸುತ್ತವೆ. 2011–12ರ ನಂತರದ ವರ್ಷಗಳಲ್ಲಿ ಬಡತನದ ಅಂದಾಜು ಇಲ್ಲ ಏಕೆಂದರೆ, ಆ ನಂತರ ಸಮೀಕ್ಷೆ ನಡೆದದ್ದು 2017–18 ರಲ್ಲಿ, ಅದರ ಫಲಿತಾಂಶಗಳನ್ನು ಕೇಂದ್ರ ಸರ್ಕಾರವು ಹತ್ತಿಕ್ಕಿತು ಮತ್ತು ತದನಂತರ ಯಾವುದೇ ಸಮೀಕ್ಷೆಗಳು ನಡೆದಿಲ್ಲ.

ಇದಕ್ಕೆ ತದ್ವಿರುದ್ಧವಾಗಿ ಯುಎನ್‌ಡಿಪಿ ಹಲವಾರು ಸೂಚಕಗಳನ್ನು ತೆಗೆದುಕೊಳ್ಳುತ್ತದೆ, ಸಂಯೋಜಿತ ಅಳತೆಗೆ ಬರಲು ನಿರ್ದಿಷ್ಟ ತೂಕಗಳನ್ನು ನಿಯೋಜಿಸುತ್ತದೆ. ಈ ಸೂಚಕಗಳಲ್ಲಿ ಕೆಲವು : ದೇಹ–ದ್ರವ್ಯರಾಶಿ ಸೂಚ್ಯಂಕ(ಬಾಡಿ–ಮಾಸ್ ಇಂಡೆಕ್ಸ್–ಬಿಎಂಐ) 18.5 ಕೆ.ಜಿ./ಮೀ2 ಗಿಂತ ಕೆಳಗಿದೆಯೇ; ಹಿಂದಿನ ಐದು ವರ್ಷಗಳಲ್ಲಿ ಕುಟುಂಬದಲ್ಲಿ 18 ವರ್ಷಕ್ಕಿಂತ ಕಡಿಮೆ ವಯಸ್ಸಿನ ಯಾವುದೇ ಮಗು ಸಾವನ್ನಪ್ಪಿದೆಯೇ; ಶಾಲಾ ಪ್ರವೇಶ ವಯಸ್ಸಿಗಿಂತ ಆರು ವರ್ಷಗಳು ಅಥವಾ ಅದಕ್ಕಿಂತ ಹೆಚ್ಚಿನ ವಯಸ್ಸಿನ ಯಾವುದೇ ಮನೆಯ ಸದಸ್ಯರು ಕನಿಷ್ಠ ಆರು ವರ್ಷಗಳ ಶಾಲಾ ಶಿಕ್ಷಣವನ್ನು ಪೂರ್ಣಗೊಳಿಸಿದ್ದಾರೆಯೇ; ಯಾವುದೇ ಶಾಲಾ ವಯಸ್ಸಿನ ಮಗು ಅವನು ಅಥವಾ ಅವಳು ಎಂಟನೇ ತರಗತಿಯನ್ನು ಪೂರ್ಣಗೊಳಿಸುವ ವಯಸ್ಸಿನವರೆಗೆ ಶಾಲೆಗೆ ಹೋಗುತ್ತಿಲ್ಲವೇ; ಇತ್ಯಾದಿ.

ಈಗ, "ಆಧುನೀಕರಣ" ಕ್ಕೆ ಒಳಗಾಗುತ್ತಿರುವ ಯಾವುದೇ ಸಮಾಜದಲ್ಲಿ ಈ ಸೂಚ್ಯಂಕಗಳು ಸುಧಾರಣೆಯನ್ನು ತೋರಿಸುತ್ತಿರುತ್ತವೆ: ಹದಿನೆಂಟು ವರ್ಷಗಳ ಮಕ್ಕಳ ಸಾವಿನ ಪ್ರಮಾಣ ಇಳಿಯುತ್ತವೆ; ಗೆಳೆಯರ ಸಮವಯಸ್ಕರ ಒತ್ತಡ ಮತ್ತು ಆಕಾಂಕ್ಷೆಗಳು ಪೋಷಕರು ತಮ್ಮ ಮಕ್ಕಳನ್ನು (ವಿಶೇಷವಾಗಿ ಶಾಲೆಯ ಹಾಜರಾತಿಯಿಂದ ಮಗುವು ಉಚಿತ ಮಧ್ಯಾಹ್ನದ ಊಟಕ್ಕೆ ಅರ್ಹವಾಗುವುದಾದರೆ) ಶಾಲೆಗೆ ಕಳುಹಿಸುವಂತೆ ಮಾಡುತ್ತದೆ; ಮಕ್ಕಳು ಶಾಲೆಯಿಂದ ಹೊರಗುಳಿಯುವಾಗಲೂ, ಅದಕ್ಕೆ ಮೊದಲು ಕನಿಷ್ಠ ಆರು ವರ್ಷಗಳ ಶಾಲಾ ಶಿಕ್ಷಣವನ್ನು ಪೂರ್ಣಗೊಳಿಸುವುದು ಸಾಮಾನ್ಯವಾಗುತ್ತದೆ; ಇತ್ಯಾದಿ. ಕುಟುಂಬದ ನಿಜ ಆದಾಯ ಕುಂಠಿತಗೊಂಡಾಗಲೂ ಈ ಎಲ್ಲಾ ಮಾನದಂಡಗಳು ನೆರವೇರಬಹುದು. ಬೇರೆ ರೀತಿಯಲ್ಲಿ ಹೇಳುವುದಾದರೆ, ಕುಟುಂಬಗಳ ಜೀವನ ಹದಗೆಡುತ್ತಿದ್ದರೂ, ಆ ಮೂಲಕ ಸಾಮಾನ್ಯವಾಗಿ ತಿಳಿದಿರುವ ಅರ್ಥದಲ್ಲಿ ಬಡತನ ಎಂಬುದು ದೇಶದಲ್ಲಿ ಹೆಚ್ಚುತ್ತಿದ್ದರೂ, ಯುಎನ್‌ಡಿಪಿ ಸೂಚ್ಯಂಕ ಬಡತನ ಇಳಿಯುತ್ತಿದೆ ಎಂದು ಸೂಚಿಸುವ ಸಾಧ್ಯತೆ ಇದೆ.

"ಬಹು ಆಯಾಮೀಯ ಬಡತನ" ಮತ್ತು 'ಆಧುನೀಕರಣ'

ಮತ್ತೊಂದು ರೀತಿಯಲ್ಲಿ ಹೇಳುವುದಾದರೆ, ಯುಎನ್‌ಡಿಪಿ ಹೇಳುವಂತೆ "ಬಹು ಆಯಾಮೀಯ ಬಡತನ" ಎಂಬುದನ್ನು ಬಿಂಬಿಸುವ ಅಳತೆಯು ಬಡತನದ ಕುಸಿತವನ್ನು "ಆಧುನೀಕರಣ" ಕ್ಕೆ ಸಮಾನಾರ್ಥಕವಾಗಿ ಮಾಡುತ್ತದೆ. ಆದರೆ ನಿಜವಾದ ಬಡತನವು ಕೇವಲ "ಆಧುನೀಕರಣ"ದ ಸಂಭವಕ್ಕೆ ಸಂಬಂಧಿಸಿದ್ದಲ್ಲ, ಬದಲಿಗೆ ಆಧುನೀಕರಣದ ವೆಚ್ಚವನ್ನು ಯಾರು ಭರಿಸುತ್ತಾರೆ, ದುಡಿಯುವ ಜನರೇ ಅಥವಾ ಶ್ರೀಮಂತರೇ ಎಂಬ ಪ್ರಶ್ನೆಗೆ ಸಂಬಂಧಿಸಿದೆ. ಮತ್ತು ಯುಎನ್‌ಡಿಪಿ ಅಳತೆಯಲ್ಲಿ ಯಾವುದೂ ಈ ಪ್ರಶ್ನೆಗೆ ಸಂಬಂಧಿಸಿಲ್ಲ.

"ಆಧುನೀಕರಣ" ಭಾರತದಲ್ಲಿ ವೇಗವಾಗಿ ನಡೆಯುತ್ತಿದೆ ಮತ್ತು ಗಣನೀಯವಾಗಿ ಪ್ರಭುತ್ವದ ಅಡಿಯಲ್ಲಿ ನಡೆಯುತ್ತಿದೆ ಎಂಬ ಅಂಶವನ್ನು ನಿರಾಕರಿಸಲಾಗದು; ಯುಎನ್‌ಡಿಪಿ ಅಳತೆಯಲ್ಲಿ ಕಾಣುವುದು ಇದೇ. ಆದರೆ ಬಡತನವು ಸಾಮಾನ್ಯವಾಗಿ ಅರ್ಥಮಾಡಿಕೊಂಡಂತೆ, ನಾವು ನೋಡಿದಂತೆ, ಆಧುನೀಕರಣದ ವೆಚ್ಚಗಳೊಂದಿಗೆ ಸಂಬಂಧ ಹೊಂದಿದೆ: "ಆಧುನೀಕರಣ"ಕ್ಕೆ ಸಾಮಾಜಿಕವಾಗಿ ಒದಗಿಸಬೇಕಾದ ಹಣಕಾಸು ಸಾಧನಗಳ ವೆಚ್ಚವನ್ನು ಭರಿಸಲು ದುಡಿಯುವ ಜನರ ಬಳಕೆಯನ್ನು ಕಡಿತಮಾಡಲಾಗುತ್ತದೆಯೇ; ಮತ್ತು ಬದಲಾಗುತ್ತಿರುವ ಕಾಲಕ್ಕೆ ಅನುಗುಣವಾಗಿ ತಮ್ಮ ಜೀವನವನ್ನು "ಆಧುನೀಕರಿಸಲು" ಕುಟುಂಬವು ತನ್ನ ಜೀವನಮಟ್ಟದಲ್ಲಿ ಕುಸಿತವನ್ನು ಅನುಭವಿಸಬೇಕೇ– ಇದು ಎಲ್ಲಕ್ಕಿಂತ ಹೆಚ್ಚಾಗಿ ಅದರ ಆಹಾರ ಬಳಕೆಯ ವೆಚ್ಚದಲ್ಲಿ ವ್ಯಕ್ತವಾಗುತ್ತದೆ (ಕುಟುಂಬದ ಬಜೆಟ್ ಕಠಿಣವಾದಾಗ ಅದು ಸಾಮಾನ್ಯವಾಗಿ ಅದರ ಆಹಾರ ಬಳಕೆಯ ವೆಚ್ಚವನ್ನು ಕಡಿತಗೊಳಿಸುತ್ತದೆ.)

ಪೌಷ್ಟಿಕತೆಯ ಅಭಾವ ಮತ್ತು ಬಡತನ

ಇದು ಪ್ರಾಸಂಗಿಕವಾಗಿ, ಬಡತನವನ್ನು ಅಂದಾಜು ಮಾಡಲು ಪೌಷ್ಟಿಕಾಂಶವನ್ನು ಮೂಲಭೂತ ಮಾನದಂಡವಾಗಿ ತೆಗೆದುಕೊಳ್ಳುವುದರ ಹಿಂದಿರುವ ತರ್ಕವಾಗಿದೆ. ಇದರ ಅರ್ಥ ಪೌಷ್ಠಿಕಾಂಶವನ್ನು ಮಾತ್ರವೇ (ಪೌಷ್ಠಿಕಾಂಶದ ಅಭಾವದ ಅಂಶಕ್ಕೆ ಒತ್ತು ನೀಡುವ ವಿದ್ವಾಂಸರನ್ನು "ಕ್ಯಾಲೋರಿ ಮೂಲಭೂತವಾದಿಗಳು" ಎಂದು ದೂಷಿಸುವವರು ತಪ್ಪಾಗಿ ಭಾವಿಸಿರುವಂತೆ) ಪರಿಗಣಿಸಲಾಗುತ್ತದೆ ಎಂದೇನೂ ಅಲ್ಲ; ಆದರೆ ಪೌಷ್ಠಿಕಾಂಶದ ಕೊರತೆಯು ಒಟ್ಟಾರೆ ದರಿದ್ರೀಕರಣವನ್ನು ತೋರಿಸುವ ಒಂದು ಪಕ್ಕಾ ಒರೆಗಲ್ಲಾಗಿದೆ. ಪೌಷ್ಟಿಕಾಂಶ ಸೇವನೆಯ ಪ್ರಮಾಣವು ನಿಜ ಆದಾಯವನ್ನು ಬಿಂಬಿಸುತ್ತದೆ, ಖಂಡಿತವಾಗಿಯೂ, ಪ್ರಶ್ನಾರ್ಹವಾದ ಯಾವುದೋ ಗ್ರಾಹಕ ಬೆಲೆ–ಸೂಚ್ಯಂಕದಿಂದ ಹಣ ಆದಾಯವನ್ನು ಕುಗ್ಗಿಸಿ ಅಳೆಯುವದಕ್ಕಿಂತ ಉತ್ತಮವಾದ ಸೂಚಕವಾಗಿದೆ. ಹದಗೆಡುತ್ತಿರುವ ಪೌಷ್ಠಿಕಾಂಶದ ಸೇವನೆಯು ("ಅತಿ–ಬಳಕೆಯನ್ನು" ತಪ್ಪಿಸಲು ಆರೋಗ್ಯದ ಕಾರಣಗಳಿಗಾಗಿ ಉದ್ದೇಶಪೂರ್ವಕವಾಗಿ ಅಂತಹ ಸೇವನೆಯನ್ನು ಕಡಿಮೆಗೊಳಿಸುವುದನ್ನು ಇಲ್ಲಿ ಪರಿಗಣಿಸಲಾಗದು), ಕುಟುಂಬದ ಜೀವನಮಟ್ಟ ಹದಗೆಡುತ್ತಿರುವುದರ ಸಾಕಷ್ಟು ವಿಶ್ವಾಸಾರ್ಹ ಲಕ್ಷಣವಾಗಿದೆ.

ನಿಜ, ಯುಎನ್‌ಡಿಪಿ ಅಧಿಕಾರಿಗಳು ತಾವು ಅಪೌಷ್ಟಿಕತೆಯನ್ನು ನಿರ್ಲಕ್ಷಿಸುತ್ತಿಲ್ಲ ಎಂದು ವಾದಿಸುತ್ತಾರೆ; ಅವರು ತಯಾರಿಸಿದ ಸೂಚ್ಯಂಕದಲ್ಲಿ ಪೌಷ್ಟಿಕತೆಗೆ 1/6 ತೂಕವನ್ನು ನೀಡಲಾಗುತ್ತದೆ ತಾನೇ. ಆದರೆ ಪೌಷ್ಠಿಕಾಂಶದ ಅಭಾವ ಎಂದರೆ ಏನು ಎಂದು ಅವರು ಅರ್ಥೈಸುತ್ತಿರುವುದು ಸಂಪೂರ್ಣವಾಗಿ ವಿಭಿನ್ನವಾಗಿದೆ. ಅವರ ಅರ್ಥದಲ್ಲಿ ಅದು ಕ್ಯಾಲೋರಿ ಅಥವಾ ಪ್ರೋಟೀನ್ ಸೇವನೆಯಲ್ಲಿ ಕುಸಿತವಲ್ಲ, ಬದಲಿಗೆ 18.5 ಕೆಜಿ / ಮೀ2 ಗಿಂತ ಕಡಿಮೆಯಿರುವ ವ್ಯಕ್ತಿಯ "ಬಾಡಿ ಮಾಸ್ ಇಂಡೆಕ್ಸ್" (ಬಿಎಂಐ). ಕಡಿಮೆಯಾದ ಕ್ಯಾಲೋರಿ ಅಥವಾ ಪ್ರೋಟೀನ್ ಸೇವನೆಯ ವಿಷಯದಲ್ಲಿ ಪೌಷ್ಟಿಕಾಂಶದ ಅಭಾವವು ಹಲವಾರು ಪರಿಣಾಮಗಳನ್ನು ಹೊಂದಿದೆ: ಇದು ಕೆಲಸ ಮಾಡುವ ಸಾಮರ್ಥ್ಯವನ್ನು ಕಡಿಮೆ ಮಾಡುತ್ತದೆ; ಇದು ವ್ಯಕ್ತಿಯನ್ನು ರೋಗಗಳಿಗೆ ಗುರಿಯಾಗುವಂತೆ ಮಾಡುತ್ತದೆ, ಇತ್ಯಾದಿ. ಬಾಡಿ ಮಾಸ್ ಇಂಡೆಕ್ಸ್‌ನಲ್ಲಿನ ಕಡಿತವು ಅಂತಹ ಒಂದು ಪರಿಣಾಮವಾಗಿರಬಹುದಷ್ಟೇ. ಆದ್ದರಿಂದ ಯುಎನ್‌ಡಿಪಿ ಪೌಷ್ಠಿಕಾಂಶದ ಅಭಾವದ ಕೇವಲ ಒಂದು ಸಂಭವನೀಯ ಪರಿಣಾಮವನ್ನು ತೆಗೆದುಕೊಳ್ಳುತ್ತದೆ, ಬಿಎಂಐ ನಲ್ಲಿ ಕುಸಿತ, ಮತ್ತು ಅದು ಕೂಡ ಅದರ ಮೌಲ್ಯವು 18.5 ಕೆಜಿ/ಮಿ2 ಮಿತಿಗಿಂತ ಕಡಿಮೆಯಾದಾಗ ಮಾತ್ರ, ಅದು ಮಾತ್ರವೇ ಅಂತಹ ಅಭಾವವನ್ನು ನಿರ್ಣಯಿಸುವ ಏಕೈಕ ಮಾನದಂಡವಾಗಿಸುತ್ತದೆ.

ವಾಸ್ತವವಾಗಿ, ಬಿಎಂಐ ನಲ್ಲಿನ ಇಳಿಕೆಯೆಂದರೇ, ಅದು ಅಗತ್ಯವಾಗಿ 18.5 ಕೆಜಿ/ಮೀ2 ಗಿಂತ ಕೆಳಗೆ ಹೋಗುತ್ತದೆ ಎಂದು ಅರ್ಥವಲ್ಲ. ಅದು ನಿಗದಿತ ಮಿತಿಗಿಂತ ಕೆಳಗಿಳಿಯದೆಯೂ ಪೌಷ್ಟಿಕಾಂಶದ ಅಭಾವವು ಸ್ವಲ್ಪ ಸಮಯದವರೆಗೆ ಮುಂದುವರಿಯಬಹುದು. ಉದಾಹರಣೆಗೆ, 5 ಅಡಿ.8 ಇಂಚು ಎತ್ತರವಿರುವ ವ್ಯಕ್ತಿಯ ಬಿಎಂಐ 25 ಕೆಜಿ/ಮೀ2 ರಿಂದ 18.5 ಕೆಜಿ/ಮೀ2 ಕ್ಕೆ ಇಳಿಯಬೇಕಾದರೆ 18.8 ಕೆ.ಜಿ.ತೂಕವನ್ನು ಕಳೆದುಕೊಳ್ಳಬೇಕಾಗುತ್ತದೆ.; ಮತ್ತು ಆಹಾರವನ್ನು ಕಡಿಮೆ ಮಾಡುವುದರಿಂದ ದೀರ್ಘಾವಧಿಯಲ್ಲಿ ಮಾತ್ರ ಅಂತಹ ತೂಕ ನಷ್ಟವನ್ನು ತರಬಹುದು. ಸಂಕ್ಷಿಪ್ತವಾಗಿ, ಪೌಷ್ಟಿಕಾಂಶದ ಅಭಾವವು ಯುಎನ್‌ಡಿಪಿಯ ಬಡತನದ ಅಳತೆಯಲ್ಲಿ ಬಿಂಬಿತವಾಗದೆಯೇ ವ್ಯಕ್ತಿಯ ಯೋಗಕ್ಷೇಮ ಮತ್ತು ಆರೋಗ್ಯದ ಮೇಲೆ ಪರಿಣಾಮ ಬೀರಬಹುದು.


ಸ್ಪಷ್ಟ ವ್ಯತ್ಯಾಸ

ಯುಎನ್‌ಡಿಪಿ ಅಂದಾಜು ಮತ್ತು ಎನ್‌ಎಸ್‌ಎಸ್ ದೊಡ್ಡ ಸ್ಯಾಂಪಲ್ ಸಮೀಕ್ಷೆಯಿಂದ ಮಾಡಿರುವ ಅಂದಾಜಿನ ನಡುವಿನ ವ್ಯತ್ಯಾಸವು ಈ ರೀತಿಯಲ್ಲಿ ಸ್ಪಷ್ಟವಾಗಿ ಕಾಣಬರುತ್ತದೆ:

2005–06ರಲ್ಲಿ ಭಾರತದಲ್ಲಿ 64.5 ಕೋಟಿ ಜನರು "ಬಹು ಆಯಾಮದ" ಪುಟ 14 ಕ್ಕೆ

ನೈಜರ್‌ನಲ್ಲಿ ಮಿಲಿಟರಿ ಕ್ಷಿಪ್ರಕ್ರಾಂತಿಗೆ ಜನ ಬೆಂಬಲ ಏಕೆ?!

ವಸಂತರಾಜ ಎನ್.ಕೆ.



ನೈಜರ್ ನಲ್ಲಿ ಮಿಲಿಟರಿ ಕ್ಷಿಪ್ರದಂಗೆ ನಡೆದಿದೆ. ಆಫ್ರಿಕಾದ ದೇಶಗಳಲ್ಲಿ ಮಿಲಿಟರಿ ಕ್ಷಿಪ್ರದಂಗೆ ಭಾರಿ ಆಶ್ಚರ್ಯಕರವೇನಲ್ಲ. ಆದರೆ ಜನ ಪ್ರಸಕ್ತ ಚುನಾಯಿತ ಅಧ್ಯಕ್ಷನನ್ನು ಪದಚ್ಯುತಗೊಳಿಸಿದ ಮಿಲಿಟರಿ ಕ್ಷಿಪ್ರದಂಗೆಯನ್ನು ಬೆಂಬಲಿಸಿದ್ದು ಆಶ್ಚರ್ಯಕರ. ಇನ್ನೂ ಆಶ್ಚರ್ಯಕರ ಎಂದರೆ ನೈಜರ್‌ನಲ್ಲಿನ ದಂಗೆಯು ಮಾಲಿ, ಬುರ್ಕಿನಾ ಫಾಸೊ, ಗಿನಿ ನಲ್ಲಿ ಇದೇ ರೀತಿಯ ದಂಗೆಗಳನ್ನು ಅನುಸರಿಸಿದೆ. ಈ ಎಲ್ಲಾ ಮಿಲಿಟರಿ ಕ್ಷಿಪ್ರದಂಗೆಗಳಿಗೂ ಭಾರೀ ಜನಬೆಂಬಲ ದೊರಕಿದೆ. ಇದೇಕೆ ಹೀಗೆ?
ಪಶ್ಚಿಮ ಆಫ್ರಿಕಾದ ರಾಜ್ಯಗಳ ಆರ್ಥಿಕ ಸಮುದಾಯವು (ECOWAS) ನೈಜರ್ನ ಅಧ್ಯಕ್ಷ ಸ್ಥಾನಕ್ಕೆ ಮೊಹಮ್ಮದ್ ಬಜೌಮ್ ಅನ್ನು ಪುನಃಸ್ಥಾಪಿಸಲು ಅಗಸ್ಟ್ 6 ರ ಗಡುವು ಕೊಟ್ಟಿದೆ. ಇಲ್ಲದಿದ್ದರೆ ಫ್ರಾನ್ಸ್ ಮತ್ತು ಯುಎಸ್ ಬೆಂಬಲದೊಂದಿಗೆ ಮಿಲಿಟರಿ ಮಧ್ಯಪ್ರವೇಶಿಸಿ ಮಿಲಿಟರಿ ಕಾರ್ಯಾಚರಣೆ ಮಾಡುವುದಾಗಿ ಬೆದರಿಸಿದೆ. ಪಶ್ಚಿಮ ಆಫ್ರಿಕಾದ ಹಲವಾರು ಎಡ ಮತ್ತು ಜನರ ಸಂಘಟನೆಗಳು ಇದನ್ನು ಖಂಡಿಸಿವೆ.

ಜುಲೈ 26, 2023 ರಂದು ಮುಂಜಾನೆ 3 ಗಂಟೆಗೆ, ಅಧ್ಯಕ್ಷೀಯ ರಕ್ಷಣಾ ಪಡೆ ಅಧ್ಯಕ್ಷ ಮೊಹಮ್ಮದ್ ಬಜೌಮ್ ಅವರನ್ನು ನೈಜರ್ನ ರಾಜಧಾನಿ ನಿಯಾಮಿಯಲ್ಲಿ ಬಂಧಿಸಿತು.. ಬ್ರಿಗೇಡಿಯರ್ ಜನರಲ್ ಅಬ್ದುರಹ್ಮನೆ ಟಚಿಯಾನಿ ನೇತೃತ್ವದ ಪಡೆಗಳು ದೇಶದ ಗಡಿಗಳನ್ನು ಮುಚ್ಚಿ ಕರ್ಫ್ಯೂ ಘೋಷಿಸಿದವು. ಅಂದರೆ ಅಧ್ಯಕ್ಷ ಬಜೌಮ್ ವಿರುದ್ಧ ಮಿಲಿಟರಿ ಕ್ಷಿಪ್ರದಂಗೆ ನಡೆಸಿತ್ತು. ಬಜೌಮ್ ಪರ ಎಂದು ಹೇಳಲಾದ ಕ್ಷಿಪ್ರಕ್ರಾಂತಿಗೆ ಬೆಂಬಲವಾಗಿದ್ದ ಮಿಲಿಟರಿ ಪಡೆಗಳ ನಡುವೆ ಸಂಘರ್ಷ ನಡೆಯಬಹುದು, ರಕ್ತಪಾತವಾಗಬಹುದು ಎಂಬ ಆತಂಕವಿತ್ತು. ಆದರೆ ಅದನ್ನು ತಪ್ಪಿಸಲಾಯಿತು. ಬ್ರಿಗೇಡಿಯರ್ ಜನರಲ್ ಟ್ಚಿಯಾನಿ ಜುಲೈ 28 ರಂದು ದೂರದರ್ಶನದಲ್ಲಿ ತಾನು 'ತಾಯಿನಾಡಿನ ಸುರಕ್ಷತೆಗಾಗಿ ರಾಷ್ಟ್ರೀಯ ಮಂಡಳಿ'ಯ (CNSP) ಹೊಸ ಅಧ್ಯಕ್ಷನಾಗಿದ್ದು ಅಧಿಕಾರ ವಹಿಸಿಕೊಂಡಿರುವುದಾಗಿ ಘೋಷಿಸಿದರು

ಈ ಮಿಲಿಟರಿ ಕ್ಷಿಪ್ರದಂಗೆ ನಡೆಯುತ್ತಿದ್ದಂತೆ ನೈಜರ್‌ನಲ್ಲಿ ಮಿಲಿಟರಿ ನೆಲೆಗಳನ್ನು ಹೊಂದಿರುವ ಫ್ರಾನ್ಸ್ ಮತ್ತು ಯುನೈಟೆಡ್ ಸ್ಟೇಟ್ಸ್ ಎರಡೂ ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಗಮನಿಸುತ್ತಿವೆ ಎಂದು ಹೇಳಿದವು. ಪಶ್ಚಿಮ ಆಫ್ರಿಕಾದ ರಾಜ್ಯಗಳ ಆರ್ಥಿಕ ಸಮುದಾಯವು (ECOWAS) ನೈಜರ್ನ ಅಧ್ಯಕ್ಷ ಸ್ಥಾನಕ್ಕೆ ಮೊಹಮ್ಮದ್ ಬಜೌಮ್ ಅನ್ನು ಪುನಃಸ್ಥಾಪಿಸಲು ಅಗಸ್ಟ್ 6 ರ ಗಡುವು ಕೊಟ್ಟಿದೆ. ಇಲ್ಲದಿದ್ದರೆ ಫ್ರಾನ್ಸ್ ಮತ್ತು ಯುಎಸ್ ಬೆಂಬಲದೊಂದಿಗೆ ಮಿಲಿಟರಿ ಮಧ್ಯಪ್ರವೇಶಿಸಿ ಮಿಲಿಟರಿ ಕಾರ್ಯಾಚರಣೆ ಮಾಡುವುದಾಗಿ ಬೆದರಿಸಿದೆ. ಇದರ ವಿರುದ್ಧ ಭಾರೀ ಪ್ರದರ್ಶನಗಳು ನಡೆದವು. ರೊಚ್ಚಿಗೆದ್ದ ಜನ 'ಫ್ರಾ ನ್ಸ್ ಪಡೆಗಳು ನೈಗರ್ ನಿಂದ ತೊಲಗಬೇಕು' ಫ್ರಾನ್ಸ್ ರಾಯಭಾರ ಕಚೇರಿ ಮುಂದೆ ಭಾರೀ ಪ್ರದರ್ಶನಗಳನ್ನು ನಡೆಸಿದರು. ಪದಚ್ಯುತ ಅಧ್ಯಕ್ಷ ಬಜೌಮ್ ಫ್ರಾನ್ಸಿನ ಕೈಗೊಂಬೆ. ಅವರನ್ನು ಕಿತ್ತು ಹಾಕಿದ್ದು ಸರಿ ಎಂದು ಮಿಲಿಟರಿ ಕ್ಷಿಪ್ರದಂಗೆಯನ್ನು ಬೆಂಭಲಿಸಿದರು.

ಮಿಲಿಟರಿ ಕ್ಷಿಪ್ರದಂಗೆಗಳಿಗೆ ಭಾರೀ ಜನಬೆಂಬಲ ಏಕೆ?

ಆಫ್ರಿಕಾದ ದೇಶಗಳಲ್ಲಿ ಮಿಲಿಟರಿ ಕ್ಷಿಪ್ರದಂಗೆ ಭಾರಿ ಆಶ್ಚರ್ಯಕರವೇನಲ್ಲ. ಆದರೆ ಜನ ಪ್ರಸಕ್ತ ಚುನಾಯಿತ ಅಧ್ಯಕ್ಷನನ್ನು ಪದಚ್ಯುತಗೊಳಿಸಿದ ಮಿಲಿಟರಿ ಕ್ಷಿಪ್ರದಂಗೆಯನ್ನು ಬೆಂಬಲಿಸಿದ್ದು ಆಶ್ಚರ್ಯಕರ. ಇನ್ನೂ ಆಶ್ಚರ್ಯಕರ ಎಂದರೆ ನೈಜರ್‌ನಲ್ಲಿನ ದಂಗೆಯು ಮಾಲಿ (ಆಗಸ್ಟ್ 2020 ಮತ್ತು ಮೇ 2021) ಮತ್ತು ಬುರ್ಕಿನಾ ಫಾಸೊ (ಜನವರಿ 2022 ಮತ್ತು ಸೆಪ್ಟೆಂಬರ್ 2022), ಮತ್ತು ಗಿನಿಯಾ (ಸೆಪ್ಟೆಂಬರ್ 2021) ನಲ್ಲಿ ಇದೇ ರೀತಿಯ ದಂಗೆಗಳನ್ನು ಅನುಸರಿಸಿದೆ. ಈ ಪ್ರತಿಯೊಂದು ದಂಗೆಯು ಫ್ರೆಂಚ್ ಮತ್ತು ಗಖ ಪಡೆಗಳ ಉಪಸ್ಥಿತಿಯಿಂದ ಮತ್ತು ಅವರ ದೇಶಗಳ ಮೇಲೆ ಉಂಟಾದ ಶಾಶ್ವತ ಆರ್ಥಿಕ ಬಿಕ್ಕಟ್ಟಿನಿಂದ ಕೋಪಗೊಂಡ ಮಿಲಿಟರಿ ಅಧಿಕಾರಿಗಳ ನೇತೃತ್ವದಲ್ಲಿ ನಡೆಯಿತು. ಈ ಎಲ್ಲಾ ಮಿಲಿಟರಿ ಕ್ಷಿಪ್ರದಂಗೆಗಳಿಗೂ ಭಾರೀ ಜನಬೆಂಬಲ ದೊರಕಿದೆ. ಇದೇಕೆ ಹೀಗೆ?

ಸಹೇಲ್ ಎಂದು ಕರೆಯಲಾಗುವ ಆಫ್ರಿಕಾದ ಈ ಪಶ್ಚಿಮ ಪ್ರದೇಶ ಸರಣಿ ಬಿಕ್ಕಟ್ಟುಗಳನ್ನು ಎದುರಿಸಿದೆ: ಹವಾಮಾನ ಬದಲಾವಣೆ ಕಾರಣದಿಂದಾಗಿ ಭೂಮಿಯ ಶುಷ್ಕತೆ, ಲಿಬಿಯಾದಲ್ಲಿ 2011 ರ ನ್ಯಾಟೋ ಯುದ್ಧದಿಂದಾಗಿ ಇಸ್ಲಾಮಿಕ್ ಉಗ್ರಗಾಮಿತ್ವದ ಏರಿಕೆ, ಶಸ್ತ್ರಾಸ್ತ್ರಗಳ ಕಳ್ಳವ್ಯಾಪಾರ, ಮಾನವ ಮತ್ತು ಮಾದಕ ದ್ರವ್ಯಗಳ ಕಳ್ಳಸಾಗಣೆ ಜಾಲಗಳ ಹೆಚ್ಚಳವಾಗಿದೆ. ಸಾಲದ್ದಕ್ಕೆ, ಯುರೇನಿಯಂ ಮತ್ತು ಚಿನ್ನವನ್ನು ಒಳಗೊಂಡಂತೆ ನೈಸರ್ಗಿಕ ಸಂಪನ್ಮೂಲಗಳನ್ನು ಲೂಟಿ ಹೊಡೆದ ಪಾಶ್ಚಿಮಾತ್ಯ ಕಂಪನಿಗಳು ಈ ಸಂಪತ್ತಿಗೆ ಸಮರ್ಪಕವಾಗಿ ಹಣ ಪಾವತಿಸಿಲ್ಲ. ಈ ಲೂಟಿಯನ್ನು ಖಾಯಂಗೊಳಿಸಲು ಯು.ಎಸ್ ಮತ್ತು ಫ್ರಾನ್ಸ್ ಮಿಲಿಟರಿ ನೆಲೆಗಳ ನಿರ್ಮಾಣ ಮಾಡಿವೆ. ಈ ಮಿಲಿಟರಿ ಪಡೆಗಳು ಯಾವುದೇ ಲಂಗು ಲಗಾಮಿಲ್ಲದೆ ಈ ದೇಶಗಳಲ್ಲಿ ಕೆಲಸ ಮಾಡುತ್ತಿವೆ. ತಮ್ಮ ಕೈಗೊಂಬೆಗಳ ಸರಕಾರವನ್ನು ಸ್ಥಾಪಿಸಿವೆ. ಇದು ದೇಶದ ಮಿಲಿಟರಿ ಸೇರಿದಂತೆ ಎಲ್ಲರನ್ನು ಆಕ್ರೋಶಗೊಳಿಸಿವೆ.

ಪಶ್ಚಿಮ ಆಫ್ರಿಕಾದ ಹಲವಾರು ಎಡ ಮತ್ತು ಜನರ ಸಂಘಟನೆಗಳು ಪಶ್ಚಿಮ ಆಫ್ರಿಕಾದ ರಾಜ್ಯಗಳ ಆರ್ಥಿಕ ಸಮುದಾಯವು (ECOWAS) ಫ್ರಾನ್ಸ್ ಮತ್ತು ಯುಎಸ್ ಬೆಂಬಲದೊಂದಿಗೆ ಮಿಲಿಟರಿ ಮಧ್ಯಪ್ರವೇಶ ನಡೆಸಿ ನೈಜರ್ನ ಅಧ್ಯಕ್ಷ ಸ್ಥಾನಕ್ಕೆ ಜನಬೆಂಬಲ ಇಲ್ಲದ ಮೊಹಮ್ಮದ್ ಬಜೌಮ್ ಅನ್ನು ಪುನಃಸ್ಥಾಪಿಸಲು ಬೆದರಿಕೆಯನ್ನು ಖಂಡಿಸಿವೆ.

ಪಶ್ಚಿಮ ಆಫ್ರಿಕನ್ ಪೀಪಲ್ಸ್ ಆರ್ಗನೈಸೇಶನ್ (WAPO) ಜುಲೈ 30 ರಂದು ECOWAS ರಾಷ್ಟ್ರಗಳ ಮುಖ್ಯಸ್ಥರು ಉಚ್ಚಾಟಿತ ಅಧ್ಯಕ್ಷರು ಮತ್ತು ಅವರ ಸರ್ಕಾರವನ್ನು ಭಾನುವಾರ, ಆಗಸ್ಟ್ 6 ರೊಳಗೆ. ಪುನಃಸ್ಥಾಪಿಸದಿದ್ದರೆ "ಬಲದ ಬಳಕೆಯನ್ನು" ಒಳಗೊಂಡಂತೆ "ಅಗತ್ಯವಿರುವ ಎಲ್ಲಾ ಕ್ರಮಗಳನ್ನು" ಕೈಗೊಳ್ಳುವ 'ಅಂತಿಮ ಎಚ್ಚರಿಕೆ'ಯನ್ನು "ತೀವ್ರವಾಗಿ ವಿರೋಧಿಸಿದೆ" ECOWAS ನ ಈ ನಿರ್ಧಾರವು "ನೈಜರ್‌ನಲ್ಲಿ ಪ್ರಜಾಪ್ರಭುತ್ವ ಮತ್ತು ಮಾನವ ಹಕ್ಕುಗಳನ್ನು ಮರುಸ್ಥಾಪಿಸುವ ನೆಪದಲ್ಲಿ, ಅಮೆರಿಕದ ಸಾಮ್ರಾಜ್ಯಶಾಹಿಯ ಬೆಂಭಲ ಪಡೆದು ಸಶಸ್ತ್ರ ಹಸ್ತಕ್ಷೇಪ ಮಾಡಲು ವಸಾಹತುಶಾಹಿ ಫ್ರಾನ್ಸ್ ಮತ್ತು ಗ್ರೇಟ್ ಬ್ರಿಟನ್ನ ತಂತ್ರವಾಗಿದೆ" ಎಂದು WAPO ಬುಧವಾರ, ಆಗಸ್ಟ್ 2 ರಂದು ಹೇಳಿಕೆಯಲ್ಲಿ ತಿಳಿಸಿದೆ.



"ಯುರೇನಿಯಂ ಸಮೃದ್ಧ ದೇಶವನ್ನು ಸಾಮ್ರಾಜ್ಯಶಾಹಿ ಮಡಿಲಲ್ಲಿ ಇಡುವುದು ನೈಜ ಉದ್ದೇಶ"

ನೈಜ ಉದ್ದೇಶವು "ನೈಜರ್ ಅನ್ನು ನಿರಂತರವಾಗಿ ಸಾಮ್ರಾಜ್ಯಶಾಹಿ ಮಡಿಲಲ್ಲಿ ಇಡುವುದು" ಎಂದು ಎಚ್ಚರಿಸುತ್ತಾ, ಟ್ರೇಡ್ ಯೂನಿಯನ್ ಒಕ್ಕೂಟಗಳು, ಎಡ ಪಕ್ಷಗಳು ಮತ್ತು ನಾಗರಿಕ ಸಮಾಜ ಸಂಘಟನೆಗಳ ಗುಂಪು ಬಜೌಮ್ ಅನ್ನು "ದೇಶದ ಯುರೇನಿಯಂ ಲೂಟಿ ಮಾಡಿದ ನ್ಯಾಟೋದ ಸಾಮ್ರಾಜ್ಯಶಾಹಿ ಶಕ್ತಿಗಳಿಗೆ, ನಿರ್ದಿಷ್ಟವಾಗಿ ಫ್ರಾನ್ಸ್, ದಶಕಗಳ" ಕೈಗೊಂಬೆ ಯೆಂದು ಖಂಡಿಸಿವೆ.

ಆಫ್ರಿಕಾದ ಅತ್ಯುನ್ನತ ದರ್ಜೆಯ ಯುರೇನಿಯಂ ಅದಿರುಗಳನ್ನು ಹೊಂದಿರುವ ನೈಜರ್ ಈ ಪರಮಾಣು ಇಂಧನದ ವಿಶ್ವದ ಏಳನೇ ಅತಿದೊಡ್ಡ ಉತ್ಪಾದಕವಾಗಿದೆ. ಕೇವಲ 17.5% ನಷ್ಟು ವಿದ್ಯುದೀಕರಣದ ದರದೊಂದಿಗೆ ನೈಜರ್ ಸ್ವತಃ ವಿದ್ಯುಚ್ಛಕ್ತಿಯನ್ನು ಅತಿ ಕಡಿಮೆ ಬಳಸುವ ದೇಶಗಳಲ್ಲಿ ಒಂದಾಗಿದೆ. ಅದರ ಯುರೇನಿಯಂ ಫ್ರಾನ್ಸ್ನಲ್ಲಿ ಮೂರನೇ ಒಂದು ಭಾಗದಷ್ಟು ವಿದ್ಯುತ್ ಶಕ್ತಿಯನ್ನು ನೀಡುತ್ತಿದೆ.

ದೇಶದ ಹೊಸ ಮಿಲಿಟರಿ ಆಡಳಿತಗಾರರು ಫ್ರಾನ್ಸ್ಗೆ ಯುರೇನಿಯಂ ಮತ್ತು ಚಿನ್ನದ ರಫ್ತು ಮಾಡುವುದನ್ನು ನಿಲ್ಲಿಸಿದ್ದಾರೆ, ಬಜೂಮ್ ಅನ್ನು ಪುನಃಸ್ಥಾಪಿಸಲು ಮಿಲಿಟರಿ ಮಧ್ಯಪ್ರವೇಶಿಸಲು ಉಚ್ಚಾಟಿತ ಸರ್ಕಾರದ ವಿದೇಶಾಂಗ ಸಚಿವರಿಂದ ಅಧಿಕಾರವನ್ನು ಪಡೆದುಕೊಂಡಿದೆ ಎಂದು ಜುಲೈ 31 ರಂದು ಮಿಲಿಟರಿ ಅಧಿಕಾರಿಗಳು ಆರೋಪಿಸಿದ್ದಾರೆ. ಸುಮಾರು 1,500 ಫ್ರೆಂಚ್ ಪಡೆಗಳನ್ನು ಈಗಾಗಲೇ ನೈಜರ್‌ನಲ್ಲಿ ನಿಯೋಜಿಸಲಾಗಿದೆ, ಜೊತೆಗೆ ಎರಡು ನೆಲೆಗಳಲ್ಲಿ ಸುಮಾರು 1,100 US ಪಡೆಗಳು, ಸುಮಾರು 300 ಇಟಾಲಿಯನ್ ಸೈನಿಕರು ಮತ್ತು EU ನಿಂದ ಸಣ್ಣ ತುಕಡಿ ಸಹ ಇವೆ.

ಮಾಜಿ ವಸಾಹತುಶಾಹಿ ಫ್ರಾನ್ಸ್ ಮತ್ತು ಅದರ ಪಾಶ್ಚಿಮಾತ್ಯ ಮಿತ್ರರಾಷ್ಟ್ರಗಳ ಪಡೆಗಳು ಮತ್ತು ಮಿಲಿಟರಿ ನೆಲೆಗಳನ್ನು ತೆಗೆದುಹಾಕಬೇಕೆಂದು ಒತ್ತಾಯಿಸುವ ತೀವ್ರ ಸಾಮೂಹಿಕ ಪ್ರದರ್ಶನಗಳ ಮಧ್ಯೆ, ಬಜೌಮ್ ಕಳೆದ ವರ್ಷ ಮಾಲಿಯಿಂದ ಆದೇಶಿಸಿದ ಹೆಚ್ಚಿನ ಫ್ರೆಂಚ್ ಪಡೆಗಳನ್ನು ನೈಜರ್ಗೆ ಆಹ್ವಾನಿಸಿದ್ದರು.

ಫ್ರೆಂಚ್-ವಿರೋಧಿ ಪ್ರತಿಭಟನಾ ಚಳವಳಿ, ಅದರ ನಾಯಕರು ಮತ್ತು ವಿರೋಧ ಪಕ್ಷಗಳ ಮೇಲೆ ಬಜೌಮ್ನ ದಮನವು ನೈಜರ್ನ ಜನರ ಪ್ರಜಾಸತ್ತಾತ್ಮಕ ಇಚ್ಛೆಯ ಪ್ರತಿನಿಧಿಯಾಗಿ ಅವರ ದೇಶೀಯ ವಿಶ್ವಾಸಾರ್ಹತೆಯನ್ನು ಮತ್ತಷ್ಟು ಕಡಿಮೆಗೊಳಿಸಿತು.

ಅಧ್ಯಕ್ಷೀಯ ಸಿಬ್ಬಂದಿಯ ಮುಖ್ಯಸ್ಥ, ಜನರಲ್ ಅಬ್ದೌರಹ್ಮನೆ ಟಚಿಯಾನಿ ಅವರು ಜುಲೈ 26 ರಂದು ದಂಗೆಯಲ್ಲಿ ಬಜೌಮ್ ಅವರನ್ನು ಅಧ್ಯಕ್ಷ ಸ್ಥಾನದಿಂದ ತೆಗೆದುಹಾಕಿದರು, ಮಿಲಿಟರಿ ಕ್ಷಿಪ್ರದಂಗೆ ಸ್ವಾಗತಿಸುವ ಮತ್ತು ನೈಜರ್ನಿಂದ ಎಲ್ಲಾ ವಿದೇಶಿ ಪಡೆಗಳನ್ನು ತೆಗೆದುಹಾಕಲು ಒತ್ತಾಯಿಸುವ ಪ್ರದರ್ಶನಗಳು ಮತ್ತೆ ಮತ್ತೆ ನಡೆದಿವೆ.

"ECOWAS' ಸಾಹಸವು ಈಗಾಗಲೇ ಸಹೇಲ್– ಪ್ರದೇಶವನ್ನು ವಿಭಜಿಸಿದೆ"

ಕಳೆದ ಮೂರು ವರ್ಷಗಳಲ್ಲಿ ಮಾಲಿ, ಗಿನಿಯಾ ಮತ್ತು ಬುರ್ಕಿನಾ ಫಾಸೊದಲ್ಲಿ ಇದೇ ರೀತಿಯ ದಂಗೆಗಳ ನಂತರ, ಅಧಿಕಾರವನ್ನು ತೆಗೆದುಕೊಂಡ ಮಿಲಿಟರಿ ಸರ್ಕಾರಗಳು ಫ್ರೆಂಚ್ ಪಡೆಗಳು ಮತ್ತು ಅವರ ಮಿತ್ರ ಪಾಶ್ಚಿಮಾತ್ಯ ಪಡೆಗಳನ್ನು ತಮ್ಮ ದೇಶಗಳಿಂದ ಹೊರಹಾಕುವ ಮೂಲಕ ಜನಪ್ರಿಯ ಬೆಂಬಲವನ್ನು ಕ್ರೋಢೀಕರಿಸಿದವು.

ECOWAS ನ ಮಂಜೂರಾದ ಸದಸ್ಯರಾಗಿದ್ದ ಮತ್ತು ಅಮಾನತುಗೊಂಡ ಈ ದೇಶಗಳು ನೈಜರ್ಗೆ ತಮ್ಮ ಬೆಂಬಲವನ್ನು ಘೋಷಿಸಿವೆ. "ಬುರ್ಕಿನಾ ಫಾಸೊ ಮತ್ತು ಮಾಲಿಯ ಮಧ್ಯಂತರ ಸರ್ಕಾರಗಳು... ನೈಜರ್ ವಿರುದ್ಧದ ಯಾವುದೇ ಮಿಲಿಟರಿ ಹಸ್ತಕ್ಷೇಪವು ಬುರ್ಕಿನಾ ಫಾಸೊ ಮತ್ತು ಮಾಲಿ ವಿರುದ್ಧ ಯುದ್ಧದ ಘೋಷಣೆಗೆ ಸಮನಾಗಿರುತ್ತದೆ ಎಂದು ಎಚ್ಚರಿಸಿದೆ," ಜುಲೈ 31 ರಂದು ಅವರ ಜಂಟಿ ಹೇಳಿಕೆಯು. ECOWAS ತನ್ನ ಬೆದರಿಕೆಯನ್ನು ಕಾರ್ಯಗತಗೊಳಿಸಲು ಹೋದರೆ, ಬುರ್ಕಿನಾ ಫಾಸೊ ಮತ್ತು ಮಾಲಿ "ಪಡೆಗಳು, ಸೈನ್ಯಗಳು ಮತ್ತು ನೈಜರ್ನ ಜನರಿಗೆ ಬೆಂಬಲವಾಗಿ ಸ್ವಯಂ ರಕ್ಷಣಾ ಕ್ರಮಗಳನ್ನು" ತೆಗೆದುಕೊಳ್ಳುತ್ತವೆ. "ನೈಜರ್ ನ ಜನಸಂಖ್ಯೆಗೆ ಅದರ ಒಗ್ಗಟ್ಟು" ಪುನರುಚ್ಚರಿಸುತ್ತಾ, ಗಿನಿ ಸಹ ECOWAS ನಿರ್ಬಂಧಗಳು ಮತ್ತು ಅಥವಾ ಅದರ ಮಿಲಿಟರಿ ಹಸ್ತಕ್ಷೇಪವನ್ನು ಬೆಂಬಲಿಸಲು ನಿರಾಕರಿಸಿತು.

ನೈಜರ್ ಮತ್ತು ಮಾಲಿ, ಬುರ್ಕಿನಾ ಫಾಸೊ ಮತ್ತು ಗಿನಿ ಒಟ್ಟಾಗಿ, ECOWAS ನ ಭೂ–ಪ್ರದೇಶದ ಸುಮಾರು 60% ನಷ್ಟಿದೆ, ಉಳಿದ 11 ಸದಸ್ಯ ರಾಷ್ಟ್ರಗಳು ಸುಮಾರು 40% ವರೆಗೆ ಸೇರಿಸುತ್ತವೆ. ECOWAS ನ ಈ 11 ದೇಶಗಳಲ್ಲಿ ಯು.ಎಸ್, ಫ್ರಾನ್ಸ್ ಗೆ ವಿಧೇಯವಾಗಿರುವ ಅಥವಾ ಅವುಗಳಿಗೆ ಪ್ರತಿರೋಧ ಒಡ್ಡದ ಸರಕಾರಗಳಿವೆ. ಈ ದೇಶಗಳಲ್ಲಿ ಪ್ರಮುಖ ಮತ್ತು ದೊಡ್ಡ ದೇಶಗಳೆಂದರೆ – ಸೆನೆಗಲ್, ಗಾಭಿಯಾ, ಲಿಬೇರಿಯಾ, ಘಾನಾ, ಬೆನಿನ್, ನೈಜೀರಿಯಾ (ಇದು ನೈಗರ್ ಅಲ್ಲ ಎಂದು ಗಮನಿಸಬೇಕು)

"ECOWAS' ಸಾಹಸವು ಈಗಾಗಲೇ ಸಹೇಲ್ ಪ್ರದೇಶವನ್ನು ವಿಭಜಿಸಿದೆ ಮತ್ತು ನೈಜರ್‌ನಲ್ಲಿನ ರಾಜಕೀಯ ಬಿಕ್ಕಟ್ಟನ್ನು ಇಡೀ ಪ್ರದೇಶದ ಅಸ್ತಿತ್ವಕ್ಕೆ ಧಕ್ಕೆ ತರುವ ಬಿಕ್ಕಟ್ಟಾಗಿ ರಾತ್ರೋರಾತ್ರಿ ಉಲ್ಬಣಗೊಳಿಸಬಹುದು" ಎಂದು ಘಾನಾದ ಸಮಾಜವಾದಿ ಚಳವಳಿಯ (SMG) ಪ್ರಧಾನ ಕಾರ್ಯದರ್ಶಿ ಕ್ವೆಸಿ ಪ್ರಾಟ್ ಹೇಳಿದ್ದಾರೆ. ಆಗಸ್ಟ್ 2 ರಂದು ಹೇಳಿಕೆ. SMG ಒಂದು ಪ್ರಾದೇಶಿಕ ಯುದ್ಧವು "ಮಿಲಿಯಗಟ್ಟಲೆ ಜೀವಗಳನ್ನು ನಾಶಪಡಿಸುತ್ತದೆ ಮತ್ತು ಸರಕು ಮತ್ತು ಸೇವೆಗಳ ಉತ್ಪಾದನೆಯನ್ನು ಅಡ್ಡಿಪಡಿಸುತ್ತದೆ ಹಾಗೂ ಆ ಮೂಲಕ ಇಡೀ ಖಂಡಕ್ಕೆ ತೀವ್ರ ದುಷ್ಪರಿಣಾಮಗಳನ್ನು ಬೀರಲಿದೆ" ಎಂಬ ಎಚ್ಚರಿಕೆಯನ್ನು ಸೇರಿಸಿದೆ.

ನೈಜರ್ನ ಮೇಲೆ ಆಕ್ರಮಣ ಮಾಡಲು ECOWAS ನಾಯಕರ ನೈತಿಕ ನಿಲುವನ್ನು ಪ್ರಶ್ನಿಸಿದ ಹೇಳಿಕೆಯು, "ನಮ್ಮ ನಾಯಕರು .. ಫ್ರೆಂಚ್ ಬಂಡವಾಳವು ನಮ್ಮ ಯುರೇನಿಯಂ ಗಣಿಗಾರಿಕೆ ಪಟ್ಟಣಗಳ ನಿವಾಸಿಗಳ ಮೇಲೆ ➚

ಈಗ ಅಂಕಿ–ಅಂಶಗಳ ಮರುಲೇಖನ!

ಪುಟ 12 ರಿಂದ

ಕೊಡುವ ಚಿತ್ರವೇ ಬೇರೆ. ಕುಟುಂಬ ಆರೋಗ್ಯ ಸಮೀಕ್ಷೆ ಪ್ರಕಾರ ಶೇ 40ರಷ್ಟು ಕುಟುಂಬಗಳು ಇನ್ನೂ ಅಡುಗೆ ಅನಿಲ ಸಂಪರ್ಕ ಹೊಂದಿಲ್ಲ. ಗ್ರಾಮೀಣ ಪ್ರದೇಶದಲ್ಲಿ ಶೇ.57ರಷ್ಟು ಕುಟುಂಬಗಳಿಗೆ ಇನ್ನೂ ಅಡುಗೆ ಅನಿಲ ಲಭ್ಯವಿಲ್ಲ.

ಸರಕಾರಕ್ಕೆ ಮುಜುಗರ ಉಂಟು ಮಾಡಿರುವ ಮತ್ತೊಂದು ಅಂಶವೆಂದರೆ ಎನ್‌ಎಫ್‌ಹೆಚ್‌ಎಸ್–5 ರ ಪ್ರಕಾರ ಭಾರತದಲ್ಲಿ ರಕ್ತಹೀನತೆಯಿರುವ ಮಹಿಳೆಯರ ಸಂಖ್ಯೆ ಹೆಚ್ಚುತ್ತಿದೆ. ಅಂತರರಾಷ್ಟ್ರೀಯ ಆರೋಗ್ಯ/ಲಿಂಗ ಸೂಚ್ಯಂಕಗಳಲ್ಲಿ ಭಾರತವು ಹಿಂದುಳಿದಿರುವುದಕ್ಕೆ ಒಂದು ಕಾರಣವೆಂದರೆ ರಕ್ತಹೀನತೆಯುಳ್ಳ ಮಹಿಳೆಯರ ಸಂಖ್ಯೆ ಹೆಚ್ಚುತ್ತಿರುವುದು. ಈಗಾಗಲೇ ವರದಿಯಾಗಿರುವಂತೆ ಎನ್‌ಎಫ್‌ಹೆಚ್‌ಎಸ್–6 ಸಮೀಕ್ಷೆಯ ಪ್ರಶ್ನಾವಳಿಯಿಂದ ಮಹಿಳೆಯರಲ್ಲಿ ರಕ್ತಹೀನತೆಯ ಪ್ರಶ್ನೆಯನ್ನು ತೆಗೆದುಹಾಕಲು ಭಾರತ ಸರ್ಕಾರ ನಿರ್ಧರಿಸಿರುವುದು ಅದರ ಮುಜುಗರಕ್ಕೆ ಸಾಕ್ಷಿ. ಆದರೆ ಐಐಪಿಎಸ್ ಈ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದೆಯಂತೆ.

ಈ ಎಲ್ಲ ಕಾರಣಗಳಿಂದಾಗಿ ರಾಜೀನಾಮೆ ಕೊಡುವಂತೆ ಮಾಡಿ, ಅವರ ಸ್ಥಾನದಲ್ಲಿ ಸರಕಾರದ ಅಗತ್ಯಗಳಿಗೆ ಹೊಂದಿಕೊಳ್ಳುವಂತಹ ವ್ಯಕ್ತಿಯನ್ನು ನೇಮಿಸುವ ಹುನ್ನಾರದಿಂದ ಅವರ ಮೇಲೆ ಒತ್ತಾಯ ತರಲಾಗಿತ್ತು, ಅದಕ್ಕೆ ಅವರು ಮಣಿಯದ್ದರಿಂದ ಕ್ಷುಲ್ಲಕ ಕಾರಣ ಕೊಟ್ಟು ಅಮಾನತಿನಲ್ಲಿಟ್ಟಿದ್ದಾರೆ ಎಂದು ಹೇಳಲಾಗಿದೆ.

ಅಂಕಿ–ಅಂಶಗಳೊಂದಿಗೆ ಮೋದಿ ಸರಕಾರದ ಗುದ್ದಾಟ ಹೊಸದೇನಲ್ಲ. ಅವರ ಮೊದಲ ಅಧಿಕಾರಾವಧಿಯಲ್ಲಿ ಬಳಕೆ ವೆಚ್ಚ ಸಮೀಕ್ಷೆಯನ್ನು ಕೈಬಿಡಲಾಯಿತು. ಜನವರಿ 2019ರಲ್ಲಿ ನಿರುದ್ಯೋಗ ದತ್ತಾಂಶಗಳು ಪ್ರಕಟಣೆಗೆ ಲಭ್ಯವಾದವು. ಆದರೆ ಅದರ ಪ್ರಕಟಣೆಯನ್ನು ತಡೆ ಹಿಡಿಯಲಾಯಿತು. ಮೇ 2019ರಲ್ಲಿ ಸಾರ್ವತ್ರಿಕ ಚುನಾವಣೆಗಳ ನಂತರ ಅದನ್ನು ಪ್ರಕಟಿಸಲಾಯಿತು. ನಿರುದ್ಯೋಗ ದರ ಅವರ ಆಡಳಿತದಲ್ಲಿ 3–4 ಶೇ.ದಿಂದ 6 ಶೇ.ಕ್ಕೆ ಏರಿದ್ದು ತಡೆ ಹಿಡಿಯಲು ಕಾರಣ ಎಂದು ತಿಳಿಯಿತು.

ಇನ್ನು, ಕೊವಿಡ್‌ಬಾಧೆಗೊಳಗಾಗಿದ್ದ ಎಲ್ಲ ಚಟುವಟಿಕೆಗಳು ಸಾಮಾನ್ಯಗೊಂಡಿದ್ದರೂ, ಅದೇ ಕಾರಣದಿಂದ 150 ವರ್ಷಗಳಲ್ಲಿ ಮೊತ್ತಮೊದಲ ಬಾರಿಗೆ ಮುಂದೂಡಿದ್ದ 2021ರ ಜನಗಣತಿಯನ್ನು ನಡೆಸುವ ಯೋಚನೆ ಇನ್ನೂ ಕಾಣುತ್ತಿಲ್ಲ.

“2024ರ ಚುನಾವಣೆಗೂ ಮುನ್ನ ಇದು ಆಗುವುದಿಲ್ಲ. ಏಕೆಂದರೆ ಭಾರತದಲ್ಲಿ ಕೋವಿಡ್‌ನಿಂದ ಕೇವಲ 5 ಲಕ್ಷ ಜನರು ಸಾವನ್ನಪ್ಪಿದ್ದಾರೆ ಎಂದು ಮೋದಿ ಹೇಳುತ್ತಾರೆ. 5 ಮಿಲಿಯನ್ ಜನರು ಸಾವನ್ನಪ್ಪಿದ್ದಾರೆ ಎಂದು ವಿಶ್ವ ಆರೋಗ್ಯ ಸಂಸ್ಥೆ ಹೇಳಿದೆ. ಯಾವುದು ಸರಿ ಎಂಬುದು ಜನಗಣತಿಯ ಅಂಕಿ–ಅಂಶಗಳು ಹೊರಬಂದಾಗ ಖಚಿತವಾಗಿ ತಿಳಿಯಲಿದೆ. ಹಾಗಾಗಿ ಜನಗಣತಿ ಇಲ್ಲ” ಎಂದು ಕೇರಳದ ಮಾಜಿ ಹಣಕಾಸು ಸಚಿವ ಮತ್ತು ಅರ್ಥಶಾಸ್ತ್ರಜ್ಞ ಥಾಮಸ್ ಐಸಾಕ್ ಹೇಳುತ್ತಾರೆ.

ಮುಖವೇ ಕುರೂಪಗೊಂಡಿದ್ದರೆ, ಕನ್ನಡಿಯನ್ನು ಒಡೆದು ಏನು ಪ್ರಯೋಜನ? ಇದನ್ನೇ ಮೋದಿ ಮಾಡುತ್ತಿದ್ದಾರೆ. ದೇಶ ಚುನಾವಣಾ ವರ್ಷಕ್ಕೆ ಕಾಲಿಡುತ್ತಿದ್ದಂತೆ ಎಲ್ಲ ಆರ್ಥಿಕ ಕ್ಷೇತ್ರಗಳಲ್ಲೂ ಸೋಲಿನ ಕಥೆಗಳು ಕೇಳಿ ಬರುತ್ತಿವೆ. ಅದನ್ನು ‘ಯಶಸ್ವಿ’ ಎಂದು ಬದಲಿಸಲು ಮತ್ತು ಕಥೆಯನ್ನು ಪುನಃ ಬರೆಯಲು, ಭಾರತದ ಅಂಕಿಅಂಶ ವ್ಯವಸ್ಥೆಯನ್ನು ಕಿತ್ತುಹಾಕಲಾಗುತ್ತಿದೆ. ಪ್ರೊ. ಕೆ.ಎಸ್. ಜೇಮ್ಸ್‌ ಅಮಾನತು ಅದರದ್ದೇ ಒಂದು ಭಾಗ ಎನ್ನುತ್ತಾರೆ ಪ್ರೊ. ಐಸಾಕ್.

ಕಳೆದ ಎರಡು ವಾರಗಳಿಂದ ಮೋದಿಯವರ ಆರ್ಥಿಕ ಸಲಹೆಗಾರರು ಭಾರತದ ಅಂಕಿ–ಅಂಶಗಳ ವ್ಯವಸ್ಥೆಯ ವಿರುದ್ಧ ಮಾಧ್ಯಮಗಳಲ್ಲಿ ಸರದಿಯಲ್ಲಿ ಲೇಖನಗಳನ್ನು ಬರೆಯುತ್ತಿದ್ದಾರೆ. ಮಾದರಿ ಸಮೀಕ್ಷೆಯ ಆಧಾರವನ್ನೇ ಕಳಚಿ ಹಾಕಲು ಆಯೋಗವನ್ನು ನೇಮಿಸಲಾಗಿದೆ. ಅದರಿಂದ ಒಂದು ವಿಷಯ ಸ್ಪಷ್ಟವಾಗುತ್ತದೆ. ಭಾರತದ ಅಂಕಿ–ಅಂಶ ವ್ಯವಸ್ಥೆಯನ್ನು ಕಳಚಿ ಹಾಕುವ ನಡೆಗಳು ಸಾಗಿವೆ. ಇತಿಹಾಸವನ್ನು ‘ಸರಿಪಡಿಸುವುದು’, ಅಂಕಿ–ಅಂಶಗಳನ್ನು ‘ಸರಿಪಡಿಸುವುದು’ ಮಾಹಿತಿ ವಿನಿಮಯದ ಎಲ್ಲ ಸ್ವೀಕೃತ ಮಾನದಂಡಗಳನ್ನು ತಿರಸ್ಕರಿಸುವ ಮೂಲಕ ಬಿಜೆಪಿ ಆಳ್ವಿಕೆಯು ಭಾರತವನ್ನು ಎಲ್ಲಿಗೆ ಕೊಂಡೊಯ್ಯುತ್ತಿದೆ ಎಂದು ಅವರು ಖೇದದಿಂದ ಪ್ರಶ್ನಿಸಿದ್ದಾರೆ. ■

ಭಾರತದಲ್ಲಿ ಬಡತನ..........

ಪುಟ 13 ರಿಂದ

ಬಡವರಿದ್ದರು ಮತ್ತು 2015–16 ರ ವೇಳೆಗೆ ಈ ಸಂಖ್ಯೆ 37.0 ಕೋಟಿಗೆ ಇಳಿದಿದೆ ಎಂದು ಯುಎನ್‌ಡಿಪಿ ಅಂದಾಜಿಸಿದೆ. ಇದರರ್ಥ ಈ ಎರಡು ದಿನಾಂಕಗಳ ನಡುವೆ 27.5 ಕೋಟಿ ಜನರು ಬಡತನದಿಂದ ಹೊರಬಂದಿದ್ದಾರೆ (ಮತ್ತು 2015–16 ಮತ್ತು 2019–20 ರ ನಡುವೆ ಇನ್ನೂ 14.0 ಕೋಟಿ ಜನರು ಬಡತನದಿಂದ ಹೊರಬರುವುದಿತ್ತು).

ತದ್ವಿರುದ್ಧವಾಗಿ, 2017–18 ರಲ್ಲಿ 75 ನೇ ಸುತ್ತಿನ ಎನ್‌ಎಸ್‌ಎಸ್ ಸಮೀಕ್ಷೆಯು 2011–12 ಮತ್ತು 2017–18 ರ ನಡುವೆ ಗ್ರಾಮೀಣ ಭಾರತದಲ್ಲಿ, ಎಲ್ಲಾ ಸರಕು ಮತ್ತು ಸೇವೆಗಳ ಮೇಲಿನ ತಲಾ ನಿಜ ವೆಚ್ಚವು ಶೇಕಡಾ 9 ರಷ್ಟು ಕುಸಿದಿದೆ ಎಂದು ತೋರಿಸಿದೆ. ಈ ಅಂದಾಜು ಎಷ್ಟೊಂದು ಚಕಿತಗೊಳಿಸುವಂತದ್ದೆಂದರೆ, ಕೇಂದ್ರ ಸರ್ಕಾರವು ಅದನ್ನು ಬಿಡುಗಡೆ ಮಾಡಿದ ಕೆಲವೇ ಗಂಟೆಗಳ ನಂತರ ಆ ದತ್ತಾಂಶವನ್ನು ಸಾರ್ವಜನಿಕವಾಗಿ ಅಲಭ್ಯಗೊಳಿಸಿತು. (ಇಲ್ಲಿ ಉಲ್ಲೇಖಿಸಲಾದ ಶೇಕಡಾ 9 ರ ಕುಸಿತವು ಕೆಲವು ವ್ಯಕ್ತಿಗಳು ಆ ದತ್ತಾಂಶವನ್ನು ಹಿಂತೆಗೆದುಕೊಳ್ಳುವ ಮೊದಲೇ ಡೌನ್‌ಲೋಡ್ ಮಾಡಿದ್ದರಿಂದಾಗಿ ಲಭ್ಯವಾದದ್ದು. ಆ ಸಮಯದಲ್ಲಿ ಈ ಫಲಿತಾಂಶಗಳ ಕೆಲವು ಚರ್ಚೆಗಳು ಪತ್ರಿಕೆಗಳಲ್ಲಿ ಕಾಣಿಸಿಕೊಂಡವು).

ಪ್ರತಿ ವ್ಯಕ್ತಿಗೆ ದಿನಕ್ಕೆ 2200 ಕ್ಯಾಲೊರಿಗಳನ್ನು ಪಡೆಯಲು ಸಾಧ್ಯವಾಗದ ಗ್ರಾಮೀಣ ಜನಸಂಖ್ಯೆಯ ಪ್ರಮಾಣ– ಇದು ಗ್ರಾಮೀಣ ಬಡತನವನ್ನು ಅಂದಾಜು ಮಾಡಲು ಭಾರತೀಯ ಯೋಜನಾ ಆಯೋಗವು ವಾಸ್ತವವಾಗಿ ಅನ್ವಯಿಸಿದ ಮೂಲ ಮಾನದಂಡ. ಇದು 1993–94ರಲ್ಲಿದ್ದ 58 %ದಿಂದ 2011–12ರಲ್ಲಿ 68% ಕ್ಕೆ ಹೆಚ್ಚಿತು; ಆದರೆ 2017–18 ರ ವೇಳೆಗೆ ಈ ಅಂಕಿ ಅಂಶವು ಅಂದಾಜು 77% ಕ್ಕೆ ಏರಿತು. ಅಂದರೆ, ಯುಎನ್‌ಡಿಪಿಯು ಲಕ್ಷಾಂತರ ಜನರು "ಬಹು ಆಯಾಮದ" ಬಡತನದಿಂದ ಹೊರಬಂದಿದ್ದಾರೆ ಎಂದು ಅಂದಾಜಿಸಿರುವ ಅವಧಿಯ ಒಂದು ಭಾಗದಲ್ಲಿ, ಸಾಮಾನ್ಯವಾಗಿ ನಾವು ಅರ್ಥೈಸಿಕೊಂಡಿರುವ ಗ್ರಾಮೀಣ ಬಡತನದಲ್ಲಿ ಎಷ್ಟೊಂದು ತೀಕ್ಷ್ಣವಾದ ಏರಿಕೆ ಕಂಡುಬಂದಿತೆಂದರೆ, ಭಾರತ ಸರಕಾರ, ಆ ದತ್ತಾಂಶವನ್ನೇ ಮುಚ್ಚಿಹಾಕಲು ನಿರ್ಧರಿಸಿತು! ಇದು ನಿಸ್ಸಂದೇಹವಾಗಿಯೂ ಸಮಯಸಾಧಕತನವೇ ಸರಿ.

ಇಲ್ಲಿಯವರೆಗೆ ನಾವು ಗ್ರಾಮೀಣ ಬಡತನದ ಬಗ್ಗೆ ಮಾತನಾಡಿದ್ದೇವೆ. ಸಾಂಕ್ರಾಮಿಕ ರೋಗದ ಮೊದಲು ಭಾರತದಲ್ಲಿ ನಿರುದ್ಯೋಗದ "ಎಂದಿನ ಸ್ಥಿತಿ–ಗತಿ" ದರವು ಹಿಂದಿನ 45 ವರ್ಷಗಳಲ್ಲಿ ಯಾವುದೇ ಸಮಯಕ್ಕಿಂತ ಹೆಚ್ಚಿನ ಮಟ್ಟವನ್ನು ತಲುಪಿತು, ಇದರಿಂದ ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಒಟ್ಟಾಗಿ, ಸಾಮಾನ್ಯವಾಗಿ ನಾವು ಅರ್ಥಮಾಡಿಕೊಳ್ಳುವ ಬಡತನವು, ಯುಎನ್‌ಡಿಪಿ ನೀಡಿದ ಅನಿಸಿಕೆಗೆ ವ್ಯತಿರಿಕ್ತವಾಗಿ, ಕಡಿಮೆಯಾಗಿರಲು ಸಾಧ್ಯವಿಲ್ಲ ಎಂದು ಖಂಡಿತವಾಗಿಯೂ ಊಹಿಸಬಹುದು.

ಮೇಲೆ ಹೇಳಿರುವುದು ಯುಎನ್‌ಡಿಪಿಯ ಅಳತೆಯ ಬಗ್ಗೆ ಮಾಡಿರುವ ವಿಮರ್ಶೆ ಅಲ್ಲ, ಆದರೆ ಅದನ್ನು ಬಡತನದ ಅಳತೆ ಎಂದು ಕರೆದಿರುವುದರ ವಿಮರ್ಶೆಯಷ್ಟೇ. ಬಡತನಕ್ಕೆ ಏನಾಗುತ್ತಿದೆ ಎಂಬುದು ಭಾರತದಲ್ಲಿ ಬಿಸಿ–ಬಿಸಿ ಚರ್ಚೆಯ ವಿಷಯವಾಗಿದೆ. ಯುಎನ್‌ಡಿಪಿ ಬಡತನ–ನಿರ್ಮೂಲನೆಯ ಒಂದು ಚಿತ್ತಾಕರ್ಷಕ ಚಿತ್ರದೊಂದಿಗೆ, ಆದರೆ ‘ಬಡತನ’ ಎಂಬುದರ ಬಗ್ಗೆ ಪ್ರತಿಯೊಬ್ಬರೂ ಅರ್ಥಮಾಡಿಕೊಂಡಿರುವದಕ್ಕಿಂತ ಸಂಪೂರ್ಣ ಭಿನ್ನ ಅರ್ಥದಲ್ಲಿ ಬಳಸಿ ಈ ಚರ್ಚೆಗೆ ಧುಮುಕಿದೆ, ಈ ವ್ಯತ್ಯಾಸವನ್ನು ದೃಢವಾಗಿ ಮನಸ್ಸಿನಲ್ಲಿಟ್ಟುಕೊಳ್ಳದ ಹೊರತು, 2022 ರಲ್ಲಿ ವಿಶ್ವ ಹಸಿವು ಸೂಚ್ಯಂಕದಲ್ಲಿ 121 ದೇಶಗಳ ಪೈಕಿ 107 ನೇ ಸ್ಥಾನಕ್ಕೆ ಜಾರಿರುವ ದೇಶವು ಅದೇ ಕಾಲದಲ್ಲಿ, ಹತ್ತಾರು ಕೋಟಿ ಜನರನ್ನು "ಬಡತನದಿಂದ ಹೊರಗೆತ್ತಲು” ಹೇಗೆ ಸಾಧ್ಯವಾಯಿತು" ಎಂಬುದನ್ನು ವಿವರಿಸುವುದು ಕಷ್ಟಸಾಧ್ಯವೇ ಸರಿ!

ಅನು:ಕೆ.ವಿ.

➘ ಹೇರುವ ಮಾರಣಾಂತಿಕ ವಿಕಿರಣಗಳಿಗೆ ಮಕ್ಕಳ ದೌರ್ಬಲ್ಯ, ಮೂಲಭೂತ ಸೌಕರ್ಯಗಳ ಕೊರತೆ ಬಗ್ಗೆ ಕಾಳಜಿಯನ್ನು ತೋರಿಸಿಲ್ಲ. ನಮ್ಮ ನಾಯಕರು US ಮತ್ತು ಫ್ರೆಂಚ್ ಪಡೆಗಳಿಂದ ಭಯೋತ್ಪಾದಕರ ವಿರುದ್ಧ ಯುದ್ಧದ ಹೆಸರಲ್ಲಿ ಕೊಲ್ಲಲ್ಪಟ್ಟ ಮುಗ್ಧ ನಾಗರಿಕರ ಕುರಿತು ಪ್ರತಿಭಟಿಸಲಿಲ್ಲ. ಬದಲಿಗೆ ನಮ್ಮ ನಾಯಕರು ನಮ್ಮ ನೆಲದ ಮೇಲೆ ಮಾಡಿದ ಅಪರಾಧಗಳಿಗೆ US ಪಡೆಗಳಿಗೆ ಸಂಪೂರ್ಣ ವಿನಾಯಿತಿ ನೀಡುವ ಕಾನೂನುಗಳನ್ನು ಮಾಡಿದ್ದಾರೆ. ಮೂಲಭೂತವಾಗಿ ನಮ್ಮ ಸಾರ್ವಭೌಮತ್ವವನ್ನು ವಿದೇಶಿ ಮಿಲಿಟರಿಗಳಿಗೆ ಬಿಟ್ಟುಕೊಡುತ್ತಾರೆ.” ಎಂದಿದೆ.

ECOWAS ಗೆ "ದೇಶೀಯ ದಂಗೆಗಳನ್ನು ಸಹ ನಿರ್ವಹಿಸಲು" ಸಾಧ್ಯವಾಗದ ಸಮಯದಲ್ಲಿ, ಪ್ರಾದೇಶಿಕ ಬಣವು "ನೈಜರ್ ದಂಡಯಾತ್ರೆಯನ್ನು ಮಾತ್ರ ಆಲೋಚಿಸಬಹುದು ಏಕೆಂದರೆ NATO ಸಂಪನ್ಮೂಲ ಅದನ್ನು ನಡೆಸುತ್ತದೆಂದು ಅವರಿಗೆ ಗೊತ್ತು" ಎಂದು ಹೇಳಿಕೆ ತಿಳಿಸಿದೆ. ಈ ಆಕ್ರಮಣದಲ್ಲಿ ECOWAS ನ ಪಾತ್ರವು, ಅದರ ಪಶ್ಚಿಮ ಆಫ್ರಿಕಾದ ನೆರೆಹೊರೆಯ ದೇಶಗಳು ಪ್ರದೇಶದಲ್ಲಿ ಪ್ರಜಾಪ್ರಭುತ್ವವನ್ನು ರಕ್ಷಿಸಲು ಮಧ್ಯಪ್ರವೇಶದ ವೇಷ ಧರಿಸಿರುವ "ಹೆಣಗಾಡುತ್ತಿರುವ ಮೂರನೇ ವಿಶ್ವದ ರಾಷ್ಟ್ರದ ಮೇಲಿನ ಮತ್ತೊಂದು US ಅಥವಾ ಫ್ರೆಂಚ್ ಆಕ್ರಮಣ" ಎಂದು ಹೇಳಿಕೆಯು ವಾದಿಸಿದೆ. ●

ಇ–ಶ್ರಮ್ ದೊಡ್ಡ ಭರವಸೆ ನಿಜವಾಗಲಿಲ್ಲ, ನಿಜವೂ ಅಲ್ಲ.......

ಪುಟ 11 ರಿಂದ

ಎಂಬುದನ್ನು ನಾವು ಅರಿಯಬೇಕಿದೆ. ಇ–ಶ್ರಮ್‌ನಲ್ಲಿ ನೋಂದಣಿ ಸ್ವಯಂಚಾಲಿತವಾಗಿ ಈ ಯೋಜನೆಗಳಿಗೆ ಪ್ರವೇಶವನ್ನು ಒದಗಿಸುವುದಿಲ್ಲ. ಮತ್ತು ಬಹುತೇಕ ಸೌಲಭ್ಯಗಳನ್ನು ಪಡೆಯಲು ಎಲ್ಲರೂ ವಂತಿಗೆ ಪಾವತಿಸಬೇಕಾಗುತ್ತದೆ. ಇದನ್ನು ಸರ್ಕಾರ ಕಾರ್ಮಿಕರಿಗೆ ಸ್ಪಷ್ಟಪಡಿಸುವುದಿಲ್ಲ.

ಉದಾಹರಣೆಗೆ ಹೇಳುವುದಾದರೆ, ‘ಪ್ರಧಾನ ಮಂತ್ರಿ ಸುರಕ್ಷಾ ಬಿಮಾ ಯೋಜನೆ’ (PMSBY). ಇದನ್ನು ವಾರ್ಷಿಕ ನವೀಕರಣದ ಆಧಾರದ ಮೇಲೆ 18 ರಿಂದ 70 ವರ್ಷಗಳ ವಯೋಮಾನದ ಜನರಿಗೆ ರೂಪಿಸಲಾಗಿದೆ. ಕಂತಿನಲ್ಲಿ ‘ಆಟೋ–ಡೆಬಿಟ್’ ಸೌಲಭ್ಯದ ಮೂಲಕ ಖಾತೆದಾರರ ಬ್ಯಾಂಕ್ ಖಾತೆಯಿಂದ ವಾರ್ಷಿಕ ರೂ. 20 ಕಡಿತಗೊಳಿಸಬೇಕು. ಅವರು ಮೇ 31 ಅಥವಾ ಅದಕ್ಕಿಂತ ಮೊದಲು 1ನೇ ಜೂನ್‌ನಿಂದ 31ನೇ ಮೇ ವರೆಗೆ ಕವರೇಜ್ ಅವಧಿಗೆ ಸೇರಲು/ಆಟೋ–ಡೆಬಿಟ್ ಅನ್ನು ಸಕ್ರಿಯಗೊಳಿಸಲು ತಮ್ಮ ಒಪ್ಪಿಗೆಯನ್ನು ನೀಡುವ ಬ್ಯಾಂಕ್ ಖಾತೆಯನ್ನು ಹೊಂದಿರುತ್ತಾರೆ. ಬ್ಯಾಂಕ್ ಖಾತೆಗೆ ಆಧಾರ್ ಪ್ರಾಥಮಿಕ KYC ಆಗಿರುತ್ತದೆ. ಯೋಜನೆಯಡಿಯಲ್ಲಿ ಅಪಾಯದ ಕವರೇಜ್ ಅಪಘಾತದ ಸಾವು ಮತ್ತು ಪೂರ್ಣ ಅಂಗವೈಕಲ್ಯಕ್ಕೆ ರೂ. 2 ಲಕ್ಷ ಮತ್ತು ಭಾಗಶಃ ಅಂಗವೈಕಲ್ಯಕ್ಕೆ 1 ಲಕ್ಷ ರೂ. ಪರಿಹಾರ ಒದಗಿಸಲಾಗುವುದು. ಈ ಯೋಜನೆಯನ್ನು ಸಾರ್ವಜನಿಕ ವಲಯದ ಸಾಮಾನ್ಯ ವಿಮಾ ಕಂಪನಿಗಳು ಅಥವಾ ಯಾವುದೇ ಇತರ ಸಾಮಾನ್ಯ ವಿಮಾ ಕಂಪನಿಗಳು ನೀಡುತ್ತಿವೆ, ಅವರು ಅಗತ್ಯ ಅನುಮೋದನೆಗಳೊಂದಿಗೆ ಮತ್ತು ಈ ಉದ್ದೇಶಕ್ಕಾಗಿ ಬ್ಯಾಂಕ್‌ಗಳೊಂದಿಗೆ ಒಪ್ಪಂದ ಮಾಡಿಕೊಳ್ಳುತ್ತಾರೆ.

ಎಲ್ಲರಿಗೂ ಪಡಿತರ ಚೀಟಿ ಎಂಬುದೊಂದು ಕನಸಾಗಿದೆ

ಈ ಹಿಂದೆ ಇ–ಶ್ರಮ್ ಮೇಲೆ ಅಸಂಘಟಿತ ವಲಯದ ಶ್ರಮಿಕರು ಸಾಕಷ್ಟು ಭರವಸೆ ಇಟ್ಟುಕೊಂಡಿದ್ದರು, ಆ ಭರವಸೆ ಇಂದು ಕುಸಿದಿದೆ. ಇ–ಶ್ರಮ್ ಕಾರ್ಡ್ ಅನ್ನು ಪಡೆದ ನಂತರವೂ ಬಹುತೇಕ ಕಾರ್ಮಿಕರಿಗೆ ಪಡಿತರ ಚೀಟಿ ಸಿಕ್ಕಿಲ್ಲ. ಪಡಿತರ ಚೀಟಿಯಲ್ಲಿ ಈ ಕಾರ್ಮಿಕರ ಹೆಸರು ಇನ್ನೂ ಇಲ್ಲದಿರುವುದರಿಂದ ರಿಯಾಯಿತಿ ದರದ ಆಹಾರವನ್ನು ಖರೀದಿಸಲು ಸಾಧ್ಯವಾಗುತ್ತಿಲ್ಲ.

ಏಪ್ರಿಲ್ 2023 ರಲ್ಲಿ, ಇ–ಶ್ರಮ್‌ನಲ್ಲಿ ನೋಂದಾಯಿಸಲಾದ 28.6 ಕೋಟಿ ಕಾರ್ಮಿಕರಲ್ಲಿ, 8 ಕೋಟಿ ಹೆಸರುಗಳು PDS ಡೇಟಾಬೇಸ್‌ನಲ್ಲಿ ಇಲ್ಲ ಎಂದು ನ್ಯಾಯಾಲಯವು ಗಮನಿಸಿದೆ. "ಅಂದರೆ, ಇಶ್ರಮ್ ಪೋರ್ಟಲ್‌ನಲ್ಲಿ 8 ಕೋಟಿ ನೋಂದಣಿದಾರರಿಗೆ ಇನ್ನೂ ಪಡಿತರ ಚೀಟಿಗಳಿಲ್ಲ." ಎಂದು 20 ಏಪ್ರಿಲ್ 2023 ರ ಆದೇಶವು ಹೇಳಿದೆ. "ಪಡಿತರ ಚೀಟಿ ಇಲ್ಲದೆ ವಲಸೆ/ಅಸಂಘಟಿತ ಕಾರ್ಮಿಕರು ಅಥವಾ ಅವರ ಕುಟುಂಬದ ಸದಸ್ಯರು ಯೋಜನೆಗಳ ಪ್ರಯೋಜನದಿಂದ ವಂಚಿತರಾಗಬಹುದು ಮತ್ತು ರಾಷ್ಟ್ರೀಯ ಆಹಾರ ಭದ್ರತಾ ಕಾಯಿದೆಯಡಿ ಪ್ರಯೋಜನಗಳನ್ನು ಪಡೆಯಲಾಗದು" ಎಂದು ಹೇಳಿರುವ ಕೋರ್ಟ್, ಮುಂದಿನ ವಿಚಾರಣೆಯ ದಿನಾಂಕವಾದ ಅಕ್ಟೋಬರ್ 3 ರೊಳಗೆ ಸ್ಥಿತಿ ವರದಿಯನ್ನು ಕೇಂದ್ರ ಸರ್ಕಾರ ನೀಡಬೇಕೆಂದು ಸುಪ್ರೀಂ ಕೋರ್ಟ್ ಕೇಳಿದೆ.

ಏನೇ ಆದರೂ ಇ–ಶ್ರಮ್ ನೊಂದಣಿಯ ಉದ್ದೇಶ, ದೇಶದಲ್ಲಿನ ಅಸಂಘಟಿತ ಕಾರ್ಮಿಕರ ಡೇಟಾ ಬೇಸ್ ಸಂಗ್ರಹಿಸಲು ಮಾತ್ರ ಎನ್ನುವುದಂತೂ ಸತ್ಯ. ಕಾರ್ಮಿಕರ ಮಾಹಿತಿ ಸಂಗ್ರಹಿಸಿ ಇಡುವ ಅವಶ್ಯಕತೆ ಖಂಡಿತಾ ಇದೆಯಾದರೂ, ಮೋದಿ ಸರ್ಕಾರ ಹೇಳಿದಂತೆ ಇ–ಶ್ರಮ್ ನೊಂದಣಿ ಮಾಡಿಸುವುದರಿಂದ ಅಸಂಘಟಿತ ಕಾರ್ಮಿಕರಿಗೆ ಉಚಿತ ಸಾಮಾಜಿಕ ಸೌಲಭ್ಯಗಳು ಸಿಗುತ್ತವೆ ಎಂಬುದೆಲ್ಲಾ ಬರೀ ಸುಳ್ಳು. ●

NEW No. MAG(3)/NPP/205/2021-2022
JANASHAKTHI KANNADA VARA PATRIKE August 7-13, 2023 Price: Rs. 10/- Date of Publication: 4 August 2023 RNI No. KARKAN /2006/17926 Posted on 08-08-2023
Posted at BG PSO, BG - 560026 **Posted at Periodical Rate -** Rs. 2

ಚಾಟ್ ಜಿಪಿಟಿ ಮತ್ತು ಮಾರ್ಕ್ಸ್ ಚಿಂತನೆಗಳು



"ಉತ್ಪಾದನಾ ಸಾಧನಗಳನ್ನು ನಿರಂತರವಾಗಿ ಕ್ರಾಂತಿಗೊಳಿಸದೆ ಬಂಡವಾಳಶಾಹಿ ಬದುಕಲಾರದು. ಅಂತಹ ಬದಲಾವಣೆಗಳ ಮೂಲಕ ಉತ್ಪಾದನಾ ಸಂಬಂಧಗಳಲ್ಲಿ ಮತ್ತು ಒಟ್ಟಾರೆಯಾಗಿ ಸಮಾಜದ ಸಂಬಂಧಗಳಲ್ಲಿ ಬದಲಾವಣೆಗಳು ಸಂಭವಿಸುತ್ತವೆ." ಮಾರ್ಕ್ಸ್ ನಿರ್ದಿಷ್ಟಪಡಿಸಿದ ಈ ಮಾರ್ಗಗಳಲ್ಲಿ ಬಂಡವಾಳಶಾಹಿಯು ತನ್ನ ಉತ್ಪಾದನಾ ಸಾಧನಗಳಲ್ಲಿ ನಿರಂತರವಾಗಿ ಕ್ರಾಂತಿಕಾರಿ ಬದಲಾವಣೆಗಳಿಗೆ ಒಳಗಾಗುತ್ತಿದೆ. ಅಂತಹ ಬದಲಾವಣೆಗಳಲ್ಲೊಂದು ಕೃತಕ ಬುದ್ಧಿಮತ್ತೆಯ (**Artificial Intelligence**) ಬೆಳವಣಿಗೆ.

ಕೃತಕ ಬುದ್ಧಿವಂತಿಕೆ (Artificial intelligence)

ಕೃತಕ ಬುದ್ಧಿಮತ್ತೆಯ (Artificial Intelligence) ಒಂದು ದೊಡ್ಡ ಬೆಳವಣಿಗೆಯಾಗಿದೆ. ಈ ಜಗತ್ತು ಮತ್ತು ಜನ ಸಮುದಾಯಗಳು ಅದನ್ನು ಅಳವಡಿಸಿಕೊಳ್ಳುವ ಮೊದಲು, ಅದರಲ್ಲಿ ಮತ್ತೊಂದು ದೊಡ್ಡ ಬದಲಾವಣೆಯೆಂದರೆ 'ಚಾಟ್ ಜಿಪಿಟಿ', (ಜನರೇಟಿವ್ ಪ್ರಿ-ಟ್ರೇನ್ಡ್ ಟ್ರಾನ್ಸ್‌ಫಾರ್ಮರ್– generative pre-trained transformer (GPT) ಹೊಸ ಇಂಟರ್ನೆಟ್ ಸರ್ಚ್ ಎಂಜಿನ್ ಆಧಾರಿತ ಮೆಗಾ ಸಾಫ್ಟ್‌ವೇರ್. ಈಗಾಗಲೇ ಐಟಿ ಉದ್ಯಮದಲ್ಲಿ ಗೂಗಲ್ ಟ್ಯಾಪ್ ಮಾಡಿ ಏನು ಬೇಕಾದರೂ ಪಡೆಯುವ ಪರಿಸ್ಥಿತಿ ಇದೆ. ಪ್ರಪಂಚದ ಎಲ್ಲಾ ವಿಭಾಗ ಆಧಾರಿತ ವಿಶ್ವಕೋಶಗಳು ಅಂತರ್ಜಾಲದಲ್ಲಿ ಲಭ್ಯವಿದೆ. ಯಾವುದೇ ವಲಯಕ್ಕೆ ಸಂಬಂಧಿಸಿದ ಮಾಹಿತಿಯನ್ನು ಹುಡುಕಲು ನಿಮಗೆ ಸಹಾಯ ಮಾಡಲು ಗೂಗಲ್, ಫೈರ್ ಬಾಕ್ಸ್, ಟಕ್ ಟಕ್ ಗೋ (Google, Bear Box, Tuck Tuck Go.) ಸೇರಿದಂತೆ ಹಲವು ಸರ್ಚ್ ಇಂಜಿನ್‌ಗಳು (Search engines) ಇವೆ. ಮೈಕ್ರೋಸಾಫ್ಟ್ ಮತ್ತು ಗೂಗಲ್‌ನಂತಹ ದೊಡ್ಡ ಕಂಪನಿಗಳು ಈ ಸರ್ಚ್ ಇಂಜಿನ್‌ಗಳನ್ನು ಹೊಂದಿವೆ. ನಿಮ್ಮ ಕೈಯಲ್ಲಿರುವ ಮೊಬೈಲ್ ಪರದೆಯಲ್ಲಿ ಗೂಗಲ್ ಅಥವಾ ಇತರ ಸಾಫ್ಟ್‌ವೇರ್ ಮತ್ತು ಸರ್ಚ್ ಇಂಜಿನ್‌ಗಳನ್ನು ಹುಡುಕುತ್ತಾ, ಟ್ಯಾಪ್ ಮಾಡಿದಂತೆ, ಮೇಲಿನ ದೊಡ್ಡ ಕಾರ್ಪೊರೇಟ್ ಮುಖ್ಯಸ್ಥರ ಜೇಬಿಗೆ ಹಣ ಸುರಿಯುತ್ತದೆ. ಈ ಪರಿಸ್ಥಿತಿಯಲ್ಲಿಯೇ ಕೃತಕ ಬುದ್ಧಿಮತ್ತೆ ಎಂಬ ಹೊಸ ತಂತ್ರಜ್ಞಾನದ ಅಭಿವೃದ್ಧಿಯು ಕಳೆದ ಕೆಲವು ವರ್ಷಗಳಲ್ಲಿ ವೇಗವಾಗಿ ಏರಿದೆ. ಕೃತಕವಾಗಿ ಬುದ್ಧಿವಂತ ಕಂಪ್ಯೂಟರ್‌ಗಳು ಮತ್ತು ರೋಬೋಟ್‌ಗಳು ತಮ್ಮ ಕೆಲಸವನ್ನು ಸಮರ್ಥವಾಗಿ ನಿರ್ವಹಿಸಲು ಮನುಷ್ಯರನ್ನು ಬದಲಿಸಲು ವಿವಿಧ ಕ್ಷೇತ್ರಗಳಲ್ಲಿ ಬಳಸಿಕೊಳ್ಳಲಾಗಿದೆ.

ಚಾಟ್ ಜಿಪಿಟಿ (Chat GPT)

ಈ ಪರಿಸ್ಥಿತಿಯಲ್ಲಿ, ಜನವರಿ 2023 ರ ಆರಂಭದಿಂದ, ಚಾಟ್ ಜಿಪಿಟಿ ಎಂಬ ಸುಧಾರಿತ ಮಾಹಿತಿ ತಂತ್ರಜ್ಞಾನ ಸಂಭಾಷಣೆ ಸಾಫ್ಟ್‌ವೇರ್ ಮತ್ತು ಸರ್ಚ್ ಎಂಜಿನ್ ಅನ್ನು ಬಳಕೆಗೆ ತರಲಾಗಿದೆ. ಈಗ ದಶಕಗಳಿಂದ, ಪ್ರಪಂಚದ ಎಲ್ಲಾ ಜ್ಞಾನದ ಸಂಪತ್ತನ್ನು ಇಂಟರ್ನೆಟ್ ಗೆ ಅಪ್‌ಲೋಡ್ ಮಾಡಲಾಗಿದೆ. ನಾವು ಗೂಗಲ್‌ನಂತಹ ಸರ್ಚ್ ಇಂಜಿನ್‌ಗಳಲ್ಲಿ ನಿರ್ದಿಷ್ಟ ವಿಷಯವನ್ನು ಹುಡುಕಿದರೆ, ಅದಕ್ಕೆ ಸಂಬಂಧಿಸಿದ ಎಲ್ಲಾ ಡೇಟಾ ನಮಗೆ ಸಿಗುತ್ತದೆ. ಇದನ್ನು ಒಂದು ಹೆಜ್ಜೆ ಮುಂದೆ ತೆಗೆದುಕೊಂಡು, ಆಚಿಣಉಕಖಿ ಯಲ್ಲಿ ಯಾವುದೇ ಉದ್ಯಮ–ನಿರ್ದಿಷ್ಟ ವಿಷಯದ ಸಂಗ್ರಹಣೆಯನ್ನು ನೀವು ವಿನಂತಿಸಿದರೆ, ಅದು ಬಟನ್‌ನ ಕ್ಲಿಕ್‌ನಲ್ಲಿ ವಿಶ್ವದ ಯಾವುದೇ ಮೂಲೆಯಿಂದ ಅದನ್ನು ಒಟ್ಟುಗೂಡಿಸುತ್ತದೆ. ಇದು ಯಾವುದೇ ಭಾಷೆಯಲ್ಲಾದರೂ ಲಭ್ಯವಿದೆ. ಕಂಪೈಲಿಂಗ್ ಕೆಲಸವಿಲ್ಲ, ಪರಿಶೀಲಿಸುವ ಕೆಲಸವಿಲ್ಲ, ಅನುವಾದ ಕೆಲಸವಿಲ್ಲ, ಡೀಬಗ್ ಮಾಡುವ ಕೆಲಸವಿಲ್ಲ. ಎಲ್ಲವನ್ನೂ ಚಾಟ್ ಜಿಪಿಟಿ ಮೂಲಕವೇ ಮಾಡಲಾಗುತ್ತದೆ. 80ರಷ್ಟು ಮಂದಿ ವಿದ್ಯಾವಂತರು ಎಂಬ ವಿವರಗಳು ಹೊರಬರುತ್ತಿವೆ. ಇದು ಪ್ರಪಂಚದಲ್ಲಿಯೇ ಇಲ್ಲದ ತಂತ್ರಜ್ಞಾನ. ಇದರ ಆಗಮನವು ಅಸಂಖ್ಯಾತ ಕ್ಷೇತ್ರಗಳ ಮೇಲೆ ಭಾರಿ ಪರಿಣಾಮ ಬೀರಿದೆ. ಇದು ಶಿಕ್ಷಣ, ವೈದ್ಯಕೀಯ, ಇಂಜಿನಿಯರಿಂಗ್, ಮುಂದಿನ ಪೀಳಿಗೆಯ ಮಾಹಿತಿ ತಂತ್ರಜ್ಞಾನ, ದತ್ತಾಂಶ ವಿಜ್ಞಾನ, ಮಾನವ ಸಂಪನ್ಮೂಲ ಅಭಿವೃದ್ಧಿ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಜ್ಞಾನವನ್ನು ಸಂಗ್ರಹಿಸುತ್ತದೆ.

ಒಂದೆಡೆ, **ChatGPT** ಮಾನವ ಕುಲವು ಇಲ್ಲಿಯವರೆಗೆ ಸಾಧಿಸಿರುವ ತಾಂತ್ರಿಕ ಸಾಧನೆಯನ್ನು ಪ್ರತಿನಿಧಿಸುತ್ತದೆ; ಇದು ಮಾನವ ಶ್ರಮದ ಶ್ರೇಷ್ಠ ಆಯಾಮವನ್ನು–ಅದ್ಭುತವಾದ ಸೃಜನಶೀಲತೆಯನ್ನು ಬಹಿರಂಗಪಡಿಸುತ್ತದೆ; ಮತ್ತೊಂದೆಡೆ ಇಡೀ ವಿಶ್ವದ ಕಾರ್ಮಿಕ ವರ್ಗದ ಮೇಲೆ ಪ್ರಾಬಲ್ಯ ಸಾಧಿಸುತ್ತದೆ; ಶೋಷಣೆ ಮತ್ತು ನಿರುದ್ಯೋಗ ಸಮಸ್ಯೆ ತೀವ್ರಗೊಳ್ಳುತ್ತದೆ. ಅವರು ಚಾಟ್ ಜಿಪಿಟಿ ಅನ್ನು ರಚಿಸಲು ಪ್ರಪಂಚದಾದ್ಯಂತ ಎಲ್ಲಾ ಕಂಪ್ಯೂಟರ್ ಡೇಟಾ ಸಂಪನ್ಮೂಲಗಳನ್ನು ಸಂಪೂರ್ಣವಾಗಿ ಬಳಸಿಕೊಂಡಿದ್ದಾರೆ; ಪ್ರಪಂಚದಾದ್ಯಂತ ಲಕ್ಷಾಂತರ ಇಂಟರ್ನೆಟ್ ಬಳಕೆದಾರರು ಮತ್ತು ಐಟಿ ಉದ್ಯೋಗಿಗಳ ಶ್ರಮವನ್ನು ಬಳಸಿಕೊಳ್ಳುವ ಮೂಲಕ ರಚಿಸಲಾದ ಡೇಟಾವನ್ನು ಶೀಘ್ರವಾಗಿ ತೆಗೆದುಕೊಳ್ಳಲಾಗುತ್ತಿದೆ; ಈ ಡೇಟಾವನ್ನು ಕಂಪೈಲ್ ಮಾಡುವ ಮೂಲಕ ಚಾಟ್ ಜಿಪಿಟಿ ಲೆಕ್ಕವಿಲ್ಲದಷ್ಟು ಒಳನೋಟಗಳನ್ನು ಒದಗಿಸುತ್ತದೆ.

ಪ್ರಪಂಚದ ಎಲ್ಲಾ ಸಂಪತ್ತು ಮತ್ತು ಜ್ಞಾನವು ಇತಿಹಾಸದುದ್ದಕ್ಕೂ ದುಡಿಯುವ ಜನರ ಶ್ರಮದ ಫಲಿತಾಂಶವಾಗಿದೆ. ಬಂಡವಾಳಶಾಹಿಯು ಇಂತಹ ಹೊಸ ತಾಂತ್ರಿಕ ಬದಲಾವಣೆಗಳ ಮೂಲಕ ತಂದಿರುವ ಒಂದೆರಡು ದೊಡ್ಡ ಕಾರ್ಪೊರೇಟ್ ಬಂಡವಾಳಶಾಹಿಗಳ ಕೈಯಲ್ಲಿ ಈಗ ಆ ಸಂಪತ್ತು ಕೇಂದ್ರೀಕೃತವಾಗಿದೆ. ಚಾಟ್ ಜಿಪಿಟಿ ಎಂಬ ಈ ಹೊಸ ಸಾಫ್ಟ್‌ವೇರ್ ನ್ಯೂರಾನ್ ಗಳೆಂಬ 17,500 ಮಿಲಿಯನ್ ಕೃತಕ ಬುದ್ಧಿಮತ್ತೆ ಚಿಪ್‌ಗಳಿಂದ ಚಾಲಿತವಾಗಿದೆ. ಇಲ್ಲಿಯವರೆಗೆ, ಚಾಟ್ ಜಿಪಿಟಿ ಇಂಟರ್ನೆಟ್‌ನಲ್ಲಿ ಲಭ್ಯವಿರುವ ಎಲ್ಲಾ ಡೇಟಾವನ್ನು ಸಂಗ್ರಹಿಸಿದೆ, ಅಂದರೆ ಸುಮಾರು 50 ಸಾವಿರ ಕೋಟಿ ಮಾಹಿತಿ, ಲೇಖನಗಳು ಮತ್ತು ಅಧ್ಯಯನಗಳು. ಮೇಲಿನ ಚಿಪ್‌ಗಳಿಂದ ಇದನ್ನು ಸ್ವಯಂಚಾಲಿತವಾಗಿ ವಿಶ್ಲೇಷಿಸಲಾಗುತ್ತದೆ ಮತ್ತು ಸಂಕಲಿಸಲಾಗುತ್ತದೆ. ಇದು ಪ್ರಭಾವವನ್ನು ಗಳಿಸಿದೆ, ಪ್ರಾರಂಭವಾದ 2 ತಿಂಗಳೊಳಗೆ 10 ಕೋಟಿ ಬಳಕೆದಾರರು ಇದನ್ನು ಶಾಶ್ವತವಾಗಿ ಅನುಸರಿಸುತ್ತಿದ್ದಾರೆ. ಚಾಟ್‌ಬಾಟ್ ಸಾಫ್ಟ್‌ವೇರ್‌ನ 'ಚಾಟ್ ಬಾಟ್' ಮೂಲಕ ಪ್ರತಿದಿನ ಸುಮಾರು ಒಂದು ಕೋಟಿಗೂ ಹೆಚ್ಚು ಪ್ರಶ್ನೆಗಳನ್ನು ಕೇಳಲಾಗುತ್ತದೆ.

ದೊಡ್ಡ ಬಂಡವಾಳಶಾಹಿ ಕಂಪನಿಗಳಿಗೆ ಲಾಭ

OpenAI ನಿಂದ ರಚಿಸಲ್ಪಟ್ಟ ChatGPT ಸಾಫ್ಟ್‌ವೇರ್ ವಾಸ್ತವವಾಗಿ ಮೈಕ್ರೋಸಾಫ್ಟ್ ಕೈಯಲ್ಲಿದೆ. ಏಕೆಂದರೆ ಮೈಕ್ರೋಸಾಫ್ಟ್ ಕಾರ್ಪೊರೇಶನ್ ಓಪನ್ ಎಐ ಕಾರ್ಪೊರೇಶನ್‌ನ 46 ಪ್ರತಿಶತವನ್ನು ಹೊಂದಿದೆ. ಕೇವಲ ಎರಡು ತಿಂಗಳಲ್ಲಿ 29 ಶತಕೋಟಿ ಡಾಲರ್‌ಗಳ ಮೌಲ್ಯಮಾಪನದೊಂದಿಗೆ, ಕಂಪನಿಯು ಇಡೀ ಐಟಿ ಬೌದ್ಧಿಕ ಜಾಗದಲ್ಲಿ ದೊಡ್ಡ ಸಂಚಲನವನ್ನು ಸೃಷ್ಟಿಸಿದೆ. ಚಾಟ್ ಜಿಪಿಟಿ ಇಂದು ಮಾನವಕುಲವು ಸಾಧಿಸಿರುವ ಅತ್ಯುನ್ನತ ಬೌದ್ಧಿಕ ಸಾಧನೆಯಾಗಿದೆ. ಆದರೆ ಈ ಸಂಪೂರ್ಣ ಜ್ಞಾನ ಮತ್ತು ಚಾಟ್ ಜಿಪಿಟಿ ಎಂಬ ಸಾಧನ –ಅಂದರೆ, ಕಾರ್ಲ್ ಮಾರ್ಕ್ಸ್ ಅವರ ಭಾಷೆಯಲ್ಲಿ ಚಾಟ್ ಜಿಪಿಟಿ – ಪ್ರಪಂಚದಾದ್ಯಂತ ಮಾಹಿತಿ ತಂತ್ರಜ್ಞಾನ ಉದ್ಯಮದಲ್ಲಿ ಹಗಲಿರುಳು ದುಡಿಯುತ್ತಿರುವ ಲಕ್ಷಾಂತರ ಕಾರ್ಮಿಕ ವರ್ಗದ ಎಂಜಿನಿಯರ್‌ಗಳ ಮೆದುಳಿನ ಕೂಸು. ಅಣ್ವಸ್ತ್ರಗಳಿಂದ ಸಿಗುವ ಸಂಪತ್ತು ಮತ್ತು ಬಾಹ್ಯಾಕಾಶ ಉದ್ಯಮದಲ್ಲಿ ದೇಶಗಳ ನಡುವಿನ ಪೈಪೋಟಿಯಿಂದ ಕೂಡಿಡಬಹುದಾದ ಸಂಪತ್ತಿಗಿಂತ ಮೈಕ್ರೋಸಾಫ್ಟ್ ಸೇರಿದಂತೆ ದೊಡ್ಡ ಬಂಡವಾಳಶಾಹಿ ಕಂಪನಿಗಳು ಈ ಹೊಸ ಸಾಫ್ಟ್ ವೇರ್ ಆವಿಷ್ಕಾರದಿಂದ ಹೆಚ್ಚಿನ ಸಂಪತ್ತನ್ನು ಗಳಿಸಲಿವೆ.

1856 ರಲ್ಲಿ ಮಾರ್ಕ್ಸ್ ಬರೆದದ್ದು: "ನಮ್ಮ ಎಲ್ಲಾ ಆವಿಷ್ಕಾರಗಳು ಮತ್ತು ಪ್ರಗತಿಯು ನಮ್ಮ ಬೌದ್ಧಿಕ ಜೀವನದೊಂದಿಗೆ ಉತ್ಪಾದನಾ ಸರಕುಗಳನ್ನು ಬೇರ್ಪಡಿಸಲಾಗದಂತೆ ಸಂಪರ್ಕಿಸುತ್ತದೆ; ಆ ಮೂಲಕ ಸಜೀವ ಮಾನವ ಜೀವನವನ್ನು ನಿರ್ಜೀವ ಸರಕಾಗಿ ಕೆಳಮಟ್ಟಕ್ಕಿಳಿಸುತ್ತದೆ." ಚಾಟ್ ಜಿಪಿಟಿ ಯ ವ್ಯಾಪ್ತಿಯು ಹೀಗೇ ಇರಲಿದೆ. ಇದೀಗ, ಗೂಗಲ್ ಸೇರಿದಂತೆ ಕಂಪನಿಗಳು ತಮ್ಮ ಕೆಲಸದಲ್ಲಿದ್ದ ರೋಬೋಟ್‌ಗಳನ್ನು ಸಹ ಕಳುಹಿಸಿವೆ. ರೋಬೋಟ್‌ಗಳಿಗೆ ಈ ಅದೃಷ್ಟ ಎಂದರೆ ಅನೇಕ ಕ್ಷೇತ್ರಗಳಲ್ಲಿ ಚಾಟ್ ಜಿಪಿಟಿ ಯ ಆಗಮನವು ಸಾವಿರಾರು ಮಾನವರನ್ನು ತಮ್ಮ ಉದ್ಯೋಗದಿಂದ ಹೊರಹಾಕುವ ಅಪಾಯವನ್ನು ಹೆಚ್ಚಿಸಿದೆ.

ಈ ಉತ್ತರವನ್ನು ಒಮ್ಮೆ ನೋಡಿ

ಆಸ್ಟ್ರೇಲಿಯಾದ ಮಾರ್ಕ್ಸ್‌ವಾದಿ ವಿಶ್ಲೇಷಕ ಅಲೆಕ್ಸ್ ವಾನ್ಸ್‌ಬ್ರೂಕ್, ಚಾಟ್ ಜಿಪಿಟಿ ಸಾಫ್ಟ್‌ವೇರ್‌ನ ಚಾಟ್ ಫೋರಮ್‌ನಲ್ಲಿಯೇ ಚಾಟ್ ಜಿಪಿಟಿ ಯ ಮಾರ್ಕ್ಸ್‌ವಾದಿ ವಿಮರ್ಶೆಯನ್ನು ಪೋಸ್ಟ್ ಮಾಡಿದರು ಮತ್ತು ಪ್ರತಿಕ್ರಿಯೆ ಏನು ಎಂದು ನೋಡಿದರು. ಅವರು ಪಡೆದ ಉತ್ತರ ಹೀಗಿತ್ತು: "OpenAI ಅಭಿವೃದ್ಧಿಪಡಿಸಿದ ChatGPT ಕೃತಕ ಬುದ್ಧಿಮತ್ತೆ ಮಾದರಿಯು ಬಂಡವಾಳಶಾಹಿ ಉತ್ಪಾದನಾ ವ್ಯವಸ್ಥೆಯಲ್ಲಿ ಅಂತರ್ಗತವಾಗಿರುವ ವಿರೋಧಾಭಾಸಗಳಿಗೆ ಸ್ಪಷ್ಟ ಉದಾಹರಣೆಯಾಗಿದೆ. ಒಂದೆಡೆ, ChatGPT ಮಾನವಕುಲವು ಇಲ್ಲಿಯವರೆಗೆ ಸಾಧಿಸಿರುವ ತಾಂತ್ರಿಕ ಸಾಧನೆಯನ್ನು ಪ್ರತಿನಿಧಿಸುತ್ತದೆ; ಇದು ಮಾನವ ಶ್ರಮದ ಶ್ರೇಷ್ಠ ಆಯಾಮವನ್ನು–ಅದ್ಭುತವಾದ ಸೃಜನಶೀಲತೆಯನ್ನು ಬಹಿರಂಗಪಡಿಸುತ್ತದೆ; ಮತ್ತೊಂದೆಡೆ ಇಡೀ ವಿಶ್ವ ಕಾರ್ಮಿಕ ವರ್ಗದ ಮೇಲೆ ಪ್ರಾಬಲ್ಯ ಸಾಧಿಸುತ್ತದೆ; ಶೋಷಣೆ ತೀವ್ರಗೊಳ್ಳಲಿದೆ. ಅವರು ಚಾಟ್ ಜಿಪಿಟಿ ಅನ್ನು ರಚಿಸಲು ಪ್ರಪಂಚದಾದ್ಯಂತ ಎಲ್ಲಾ ಕಂಪ್ಯೂಟರ್ ಡೇಟಾ ಸಂಪನ್ಮೂಲಗಳನ್ನು ಸಂಪೂರ್ಣವಾಗಿ ಬಳಸಿಕೊಂಡಿದ್ದಾರೆ; ಪ್ರಪಂಚದಾದ್ಯಂತ ಲಕ್ಷಾಂತರ ಇಂಟರ್ನೆಟ್ ಬಳಕೆದಾರರು ಮತ್ತು ಐಟಿ ಉದ್ಯೋಗಿಗಳ ಶ್ರಮವನ್ನು ಬಳಸಿಕೊಳ್ಳುವ ಮೂಲಕ ರಚಿಸಲಾದ ಡೇಟಾವನ್ನು ಲಘುವಾಗಿ ತೆಗೆದುಕೊಳ್ಳಲಾಗುತ್ತಿದೆ; ಈ ಡೇಟಾವನ್ನು ಸಂಕಲನ ಮಾಡುವ ಮೂಲಕ ಚಾಟ್ ಜಿಪಿಟಿ ಲೆಕ್ಕವಿಲ್ಲದಷ್ಟು ಒಳನೋಟಗಳನ್ನು ಒದಗಿಸುತ್ತದೆ.

ಈ ಅಭ್ಯಾಸವು ಬಂಡವಾಳಶಾಹಿ ಉತ್ಪಾದನಾ ವ್ಯವಸ್ಥೆಯ ಮೂಲಭೂತ ವಿರೋಧಾಭಾಸವಾಗಿದೆ. ಬಂಡವಾಳಶಾಹಿ ಸಂಪತ್ತು ದುಡಿಮೆಯ ಶೋಷಣೆಯಿಂದ ಸಂಗ್ರಹವಾಗುತ್ತದೆ; ಹೊಸ ತಂತ್ರಜ್ಞಾನಗಳನ್ನು ಅಭಿವೃದ್ಧಿಪಡಿಸಲು ಇದನ್ನು ಬಳಸಲಾಗುತ್ತದೆ; ಕಾರ್ಮಿಕ ವರ್ಗವನ್ನು ಶೋಷಿಸಲು ಮತ್ತು ಪ್ರಾಬಲ್ಯ ಸಾಧಿಸಲು ಇದನ್ನು ಮತ್ತಷ್ಟು ಬಳಸಲಾಗುತ್ತದೆ. ಒಟ್ಟಾರೆಯಾಗಿ, ಚಾಟ್ ಜಿಪಿಟಿ ಯಂತಹ ಕೃತಕ ಬುದ್ಧಿಮತ್ತೆ ವ್ಯವಸ್ಥೆಗಳ ರಚನೆಯು ಸಾಮಾನ್ಯ ಜನರ ಜೀವನವನ್ನು ಸುಧಾರಿಸುವ ಉದ್ದೇಶವನ್ನು ಹೊಂದಿಲ್ಲ; ಇದಕ್ಕೆ ತದ್ವಿರುದ್ಧವಾಗಿ, ಉತ್ಪಾದನಾ ಸಾಧನಗಳ ಹಿಂದಿನ ಮಾಲೀಕರ ಲಾಭವನ್ನು ಹೆಚ್ಚಿಸುವ ಉದ್ದೇಶದಿಂದ ಟನ್‌ಗಳನ್ನು ರಚಿಸಲಾಗಿದೆ. ಚಾಟ್ ಜಿಪಿಟಿ ಸ್ವತಃ ಇದನ್ನು ಹೇಗೆ ಹೇಳುತ್ತದೆ ಎಂಬುದು ಮುಖ್ಯ. ಎಲ್ಲಾ ಕ್ಷೇತ್ರಗಳಿಗೆ ಸಂಬಂಧಿಸಿದ ಲಕ್ಷಾಂತರ ಮಾಹಿತಿ ಮತ್ತು ಡೇಟಾವನ್ನು ಅಂತರ್ಜಾಲದಲ್ಲಿ ಅಪ್‌ಲೋಡ್ ಪುಟ 10 ಕ್ಕೆ

JANASHAKTHI KANNADA VARA PATRIKE: Printed, Published by **U. BASAVARAJA**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **NITYANANDASWAMI**